# BUDJET ESTIMATES FOR 1975—76

## GENERAL DISCUSSION

(Debate Continued)

‡ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ) :—ಮಾನ್ಯ ಸಭಾಧ್ಯಕ್ಷಣಿಯವರೇ, 1975–76ರ ಈ ಒಂದು ಆಯವ್ಯಯ ಪಟ್ಟಿಯನ್ನು ಸಭೆಯ ಮುಂದೆ ನಮ್ಮ ರಾಜ್ಯದ ಆರ್ಥಿಕ ಸಚಿವರು ಏನು ಮಂಡಿಸಿದ್ದಾರೋ ಇದರ ಬಗ್ಗೆ ಚರ್ಚೆಯನ್ನು ಮಾಡುವಾಗ ಈ ಸಂದರ್ಭದಲ್ಲಿ ಪ್ರಾಸ್ತಾಪಿಕವಾಗಿ ಕೇಂದ್ರದ ಮತ್ತು ರಾಜ್ಯದ ಎರಡು ಆರ್ಥಿಕ ನೀತಿಯ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ಕಳೆದ ಸಾರಿ ಈ ಸಭೆಯಲ್ಲಿ ನಾನು ಆಯವ್ಯಯದ ಮೇಲೆ ಮಾತನಾಡುವ ಕಾಲದಲ್ಲಿ ಒಬ್ಬಿಬ್ಬರು ಮಿತ್ರರು ಆಕ್ಷೇಪಣೆಯನ್ನು ತೆಗೆದರು. ನಿಮ್ಮ ಪಾತ್ರದ ಬಹುಭಾಗ ಪಾರ್ಲಿಮೆಂಟಿನಲ್ಲಿ ಚರ್ಚೆಮಾಡುವುದಕ್ಕೆ ಅನುಕೂಲವಾಗುತ್ತದೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಆದರೆ ಕೇಂದ್ರ ಸರ್ಕಾರದ ಆರ್ಥಿಕ ನೀತಿಯನ್ನು ಕುರಿತು ಪ್ರಸ್ತಾಪ ಮಾಡದೇ ಹೋದರೆ ಬಹುಶಃ ನಾವು ಒಂದು ಯೋಗ್ಯ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲ ಆಗುವುದಿಲ್ಲ ಇನ್ನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡ ಬೇಕಾಗುತ್ತದೆ. ಬಹುಶಃ ಇವತ್ತು ರಾಜ್ಯ ಸರ್ಕಾರಗಳು ತಮ್ಮ ಆಯವ್ಯಯ ವನ್ನು ಈ ಸಭೆಯಲ್ಲಿ ಮಂಡಿಸಿದ ಕೆಲಕಾಲದಲ್ಲಿ ನಾವು ಒಂದು ವಿಷಯವನ್ನು ತಿಳಿದು ಕೊಳ್ಳಬೇಕು. ಏಕೆಂದರೆ ನಾನು ಲಘು ಪದವನ್ನು ಪ್ರಯೋಗ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ರಾಜ್ಯ ಸರ್ಕಾರದ ಪರಿಸ್ಥಿತಿ ವಿಷಯವನ್ನು ಪೂರೈಸಬೇಕಾ ದರೆ, ಆಯವ್ಯಯುವನ್ನು ಮಂಡನೆ ಮಾಡುವುದಕ್ಕೆ ಏನು ಮಟ್ಟ ಇರುತ್ತದೋ ಅದಕ್ಕಿಂತ ಸ್ವಲ್ಪ ಉನ್ನತ ಮಟ್ಟದಲ್ಲಿರುತ್ತದೆಂದು ಹೇಳಿದರೆ ಯಾರೂ ತಪ್ಪು ತಿಳಿದುಕೊಳ್ಳಬಾರದು. ರಾಷ್ಟ್ರಮಟ್ಟದಲ್ಲಿ ನಾಲ್ಕು ಆಯವ್ಯಯಗಳನ್ನು ಮಂಡಿಸಿ ದ್ದಾರೆ. ಇನ್ನೆರಡು ಮೂರು ದಿವಸದಲ್ಲಿ 5ನೇ ಆಯವ್ಯಯದ ಪಟ್ಟಿಯನ್ನು ಮಂಡಿಸುವವರಿದ್ದಾರೆ. ರಾಜ್ಯಮಟ್ಟದಲ್ಲಿ ಈಗಾಗಲೇ ಮೂರು ಆಯವ್ಯಯ ಪಟ್ಟಿಗಳನ್ನು ಮಂಡಿಸಿದ್ದಾರೆ. ಈ ಸಾಲಿನಲ್ಲಿ ಕೆಲವು ಕೆಲಸಗಳನ್ನು ಕಾರ್ಯ ರೂಪಕ್ಕೆ ತಂದಿದ್ದಾರೆ. ಈಗ ನಾಲ್ಕನೆಯ ಆಯವ್ಯಯ ಪಟ್ಟಿಯನ್ನು ಈ ಸಭೆಯ ಪರಿಶೀಲನೆಗಾಗಿ ಆಯ ವ್ಯಯ ಸಚಿವರು ಮಂಡಿಸಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಆರ್ಥಿಕ ಸಚಿವರಿಂದ ತಿಳಿಯಬಯಸುತ್ತೇನೆ ಕೇಂದ್ರದ ನಾಲ್ಕು ಆಯವ್ಯಯಗಳ ಪಟ್ಟಿ ಮತ್ತು ನಮ್ಮ ರಾಜ್ಯದ ಮೂರು ಆಯವ್ಯಯಗಳ ಪಟ್ಟಿಗಳನ್ನು ನಾವು ಮಂಜೂರಾತಿ ಮಾಡಿ ಅವುಗಳನ್ನು ಕಾರ್ಯರೂಪಕ್ಕೆ ತಂದ ಮೇಲೆ ಎಷ್ಟರಮಟ್ಟಿಗೆ ನಮ್ಮ ರಾಷ್ಟ್ರದ ಮೂಲ ಸಮಸ್ಯೆಯೆಂದರೆ, ಇವತ್ತು

ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ನಮ್ಮ ಈ ಆಯವ್ಯಯ ಪಟ್ಟಿ ಏನು ಮಂಡಿಸಿ ಈಗಾಗಲೇ ಕಾರ್ಯರೂಪಕ್ಕೆ ತಂದಿದ್ದಾರೋ ಅದರಲ್ಲಿ ಇಕನಾಮಿಕ್ ಗ್ರೋತ್ ಓರಿಯೆಂಟೆಡ್ ಬಡ್ಜೆಟ್ ಮಾಡಿ ಆರ್ಥಿಕ ಬೆಳವಣಿಗೆಗೆ ಸಹಾಯಕವಾದಂಥ ಅಂದಾಜು ಪಟ್ಟಿಯನ್ನು ಮಂಜೂರಾತಿ ಮಾಡಿದ್ದಾರೋ ಅಥವಾ ಇವತ್ತು ಪ್ರೊಡಕ್ಷನ್ ಓರಿಯೆಂಟೆಡ್ ಬಡ್ಜೆಟ್ ಮಾಡಿ ಉತ್ಪಾದನೆ ಹೆಚ್ಚು ಮಾಡುವ ರೀತಿಯಲ್ಲಿ ಒಂದು ಆರ್ಥಿಕ ಧೋರಣೆಯನ್ನು ನಿರೂಪಣೆ ಮಾಡಿದ್ದಾರೋ, ಅಥವಾ ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್ ಬಡ್ಜೆಟ್ ಮಾಡಿ ಆರ್ಥಿಕ ನೀತಿಯನ್ನು ನಿರೂಪಣೆ ಮಾಡಿದ್ದಾರೋ ಎಂಬುದನ್ನು ಮಾನ್ಯ ಆರ್ಥಿಕ ಸಚಿವರು ತಿಳಿಸಬೇಕು. ಇವುಗಳಲ್ಲಿ ಯಾವ ಒಂದು ನಿರ್ಣಯವನ್ನು ಬಗೆಹರಿಸುವ ರೀತಿಯಲ್ಲಿ ಅವರು ಸರ್ಕಾರದ ಆರ್ಥಿಕ ಧೋರಣೆಯನ್ನು ನಿರೂಪಣೆ ಮಾಡಿದ್ದಾರೆಂದು ಸಿಂಹಾವಲೋಕನ ಮಾಡಿದರೆ—ಈ ಮೂರು ಅಂಗಗಳಲ್ಲಿಯೂ ಸರ್ಕಾರ ವಿಫಲರಾಗಿದ್ದಾರೆಂಬುದಾಗಿ ಒಂದೇ ಮಾತಿನಲ್ಲಿ ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ಈ ಮೂರು ಅಂಗಗಳಲ್ಲಿ ಯಾವ ಮಟ್ಟದ ಕೆಲಸವನ್ನು ನಿರೀಕ್ಷಣೆ ಮಾಡಿದ್ದಾರೋ ಆ ರೀತಿ ಬರಲಿಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲ. ನಮ್ಮ ಹಿಂದಿನ ಕಟು ಅನುಭವದಿಂದ ಆರ್ಥಿಕ ಪರಿಸ್ಥಿತಿಯನ್ನು ನೋಡಿ ಈಗ ನಮ್ಮ ಆರ್ಥಿಕ ನೀತಿಯನ್ನು ಯಾವ ರೀತಿಯಲ್ಲಿ ಮಾರ್ಪಾಟು ಮಾಡಿಕೊಳ್ಳಬೇಕೋ ಅದನ್ನು ಗಮನಿಸಬೇಕಾಗುತ್ತದೆ. ಆ ರೀತಿಯಾಗಿ ಮಾಡದೇ ಹೋದರೆ ಈ ದೇಶದಲ್ಲಿ ಏನು ಬೃಹತ್ ಸಮಸ್ಯೆಗಳಿವೆಯೋ ಅದನ್ನು ಎದುರಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಅದನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕು. ಏಕೆಂದರೆ, ಇದರಲ್ಲಿ ಯಾವ ರಾಜಕೀಯ ಪಕ್ಷವಾಗಲೀ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ ಆ ಸಮಸ್ಯೆಯ ಗಾತ್ರವನ್ನು ಅರಿತು, ಆ ಸಮಸ್ಯೆಯ ಪ್ರಮಾಣವನ್ನು ಅರಿತು ಈ ರಾಷ್ಟ್ರ ಎದುರಿಸುತ್ತಿರುವ ಭೀಕರ ಪರಿಸ್ಥಿತಿಯನ್ನು ನಾವು ಗಮನದಲ್ಲಿಟ್ಟು ಆರ್ಥಿಕ ಧೋರಣೆಯನ್ನು ಮಾರ್ಪಾಟು ಮಾಡಬೇಕಾಗುತ್ತದೆಂಬ ದೃಷ್ಟಿಯಿಂದ ಪ್ರಾಸಂಗಿಕವಾಗಿ ನಾನು ಪ್ರಥಮದಲ್ಲಿಯೇ ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ. ಏಕೆಂದರೆ ಮೊನ್ನೆ ಮಾನ್ಯ ಶ್ರೀ ಸಿ. ಸುಬ್ರಹ್ಮಣ್ಯಂ ಅವರು ಅಮೆರಿಕಾ ದೇಶಕ್ಕೆ ಹೋಗಿದ್ದರು. ಐ. ಎಂ. ಎಫ್. ಒಂದು ಫಂಡಿನಿಂದ ನಮ್ಮ ರಾಷ್ಟ್ರದ ಯೋಜನೆಗಳಿಗೆ ಹಣವನ್ನು ಗಳಿಸುವ ದೃಷ್ಟಿಯಿಂದ ತಮ್ಮ ಪ್ರಯತ್ನ ಮಾಡಿದ್ದಾರೆ. ಅದೇ ಸಂದರ್ಭದಲ್ಲಿ ಕೆಲವು ರಾಜಕೀಯ ಪಕ್ಷಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾನು ಎಲ್ಲರ ಅಭಿಪ್ರಾಯವನ್ನು ಈ ಸಭೆಯಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಕೇಂದ್ರ ಸರ್ಕಾರ ಇತ್ತೀಚೆಗೆ ಲೇಟೆಸ್ಟಾಗಿ ಅನುಸರಿಸುತ್ತಾ ಇರುವ ಪಾಲಿಸಿಯ ಬಗ್ಗೆ ಒಂದು ನೀತಿಯನ್ನು ಪಡೆದಿದೆ ಎಂಬುದಾಗಿ ಕೆಲವರು ವ್ಯಕ್ತಪಡಿಸಿದ್ದಾರೆ. ಅದೇನೇ ಇರಲಿ, ಕೆಲವರು ಅದಕ್ಕೆ ಒಂದು ಬಣ್ಣವನ್ನು ಹಚ್ಚಲಿಕ್ಕೆ ಪ್ರಯತ್ನ ಮಾಡಿದ್ದಾರೆ. ರಾಷ್ಟ್ರದ ಇಂತಹ ಒಂದು ಸಮಸ್ಯೆಗೆ ಅನುಕೂಲವಾದ ಪರಿಹಾರ

(ಶ್ರೀ ಹೆಚ್. ಡಿ. ದೇವೇಗೌಡ)

ವನ್ನು ಕಂಡುಕೊಳ್ಳಬೇಕಾದರೆ ನಮ್ಮ ಹಣಕಾಸಿನ ನೀತಿಯಲ್ಲಿ ಕೆಲವು ಮಾರ್ಪಾಟು ಗಳನ್ನು ಮಾಡಬೇಕಾದ ದೃಷ್ಟಿಯಿಂದ ಈ ಮಾತನ್ನು ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ ಕಳೆದ 4 ವರ್ಷಗಳಿಂದೀಚೆಗೆ ಕೇಂದ್ರ ಸರ್ಕಾರದ ಸಾಲ 900 ಕೋಟಿ ರೂಪಾಯಿಗಳು ಆದಾಗ ತೆರಿಗೆಗಳನ್ನು ರಾಷ್ಟ್ರದ ಜನಗಳ ಮೇಲೆ ಹೇರಿದ್ದಾರೆ ಇದರ ಜೊತೆಗೆ ಇವತ್ತು ನಮ್ಮ ಖರ್ಚು, ಅನುತ್ಪಾದಕ ವೆಚ್ಚ ಬಹಳ ಅತಿ ವೇಗದಲ್ಲಿ ಹೋಗಿದೆ ವೆಚ್ಚದ ಪರಿಣಾಮ ಇನ್‌ಫ್ಲೇಷನ್ ಆಗುತ್ತಿದೆ ಯೆಂಬುದು ಕಾಣುತ್ತಿದೆ. ಹಣದುಬ್ಬರ, ಬೆಲೆಯೇರಿಕೆ ಇವುಗಳ ಬಗ್ಗೆ ಆಗಿರತಕ್ಕ ಕಹಿ ಅನುಭವಗಳನ್ನು ನೋಡಿದರೆ ಈ ಸಮಸ್ಯೆಗಳಿಗೆ ಒಂದು ಉತ್ತರವನ್ನು ಕಂಡು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯುವುದು, ಅನ್‌ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್‌ಗಳನ್ನು ಕಟ್ ಮಾಡುವುದು, ಪೇಮೆಂಟ್‌ಗಳನ್ನು ಡೆಫರ್ ಮಾಡುವುದು—ಇಂತಹ ಕೆಲವಾರು ಧೋರಣೆಗಳನ್ನು ಕೇಂದ್ರ ಸರ್ಕಾರದವರು ಈಗ ಅನುಸರಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನನ್ನ ಮಿತ್ರರಾದಂಥ ಮಾನ್ಯ ಶ್ರೀ ಘೋರ್ಪಡೆಯವರು ತಮ್ಮ ಭಾಷಣದ ಪ್ರಥಮ ದಲ್ಲಿಯೇ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಇವತ್ತು ಕೇಂದ್ರ ಸರ್ಕಾರದ ಮತ್ತು ರಾಜ್ಯಸರ್ಕಾರದ ಶ್ರಮದ ಫಲವಾಗಿ ಬೆಲೆಗಳು ಇಳಿಯತಕ್ಕ ಒಂದು ಪರಿಸ್ಥಿತಿಗೆ ಬರುತ್ತದೆಂದು ಅವರ ಭಾಷಣದ ಪ್ರಾರಂಭದಲ್ಲಿಯೇ ತಿಳಿಸಿದ್ದಾರೆ. ಬಹುಶಃ ಅದನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಇವರ ಒಂದು ನಿರ್ಣಯದ ನೀತಿಯನ್ನು ಬದಲಾವಣೆ ಮಾಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಪ್ರೊಡಕ್ಷನ್ ಓರಿಯೆಂಟೆಡ್ ಬಡ್ಜೆಟ್, ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್ ಬಡ್ಜೆಟ್, ಇಕನಾಮಿಕ್ ಗ್ರೋತ್ ಓರಿಯೆಂಟೆಡ್ ಬಡ್ಜೆಟ್—ಈ ಮೂರು ಅಭಿ ಪ್ರಾಯಗಳನ್ನು ಕ್ರೋಢೀಕರಿಸತಕ್ಕ ಒಂದು ಆರ್ಥಿಕ ನೀತಿಯನ್ನು ನಾವು ನಿರೂಪಣೆ ಮಾಡದೇ ಹೋದರೆ ಬಹುಶಃ ಇವರು ಈಗ ಬೆಲೆಗಳು ಕಡಿಮೆ ಯಾಗುತ್ತವೆಯೆಂದು ಹೇಳಿದರೆ ನಾನು ಒಪ್ಪುವುದಿಲ್ಲ. ಹೋದ ಸಾರಿ ಕೇಂದ್ರ ಸರ್ಕಾರದವರು ಕೆಲವಾರು ನಿರ್ಣಯಗಳನ್ನು ಮಾಡಿದ್ದಾರೆ. ಅದರಿಂದೇನೂ ಸಮಾಧಾನ ಬರುವುದಿಲ್ಲ. ಉತ್ಪಾದನೆ ಹೆಚ್ಚು ಮಾಡದಿದ್ದರೆ ಮತ್ತು ಅನುತ್ಪಾ ದನೆಯ ವೆಚ್ಚವನ್ನು ಕಡಿಮೆ ಮಾಡದಿದ್ದರೆ, ಬೆಲೆಗಳು ಏನು ರಭಸದಲ್ಲಿ ಏರುತ್ತಿದೆಯೋ ಅದನ್ನು ಖಂಡಿತವಾಗಿ ತಡೆಗಟ್ಟುವುದಕ್ಕಾಗುವುದಿಲ್ಲ. ಆ ರೀತಿಯಾಗಿ ಬೆಲೆಗಳನ್ನು ತಡೆಹಿಡಿಯದಿದ್ದರೆ ಏನೂ ಪ್ರಯೋಜನವಿಲ್ಲ. ಆದರೂ ಅವರು ಬೆಲೆಗಳು ಕಡಿಮೆಯಾಗುತ್ತವೆಂಬ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ನಾನು ಪ್ರಥಮದಲ್ಲಿಯೇ ಈ ಸಭೆಯ ಗಮನಕ್ಕೆ ಒಂದು ಮುಖ್ಯವಾದ ಅಂಶವನ್ನು ತಂದಿದ್ದೇನೆ. ಅದನ್ನು ಮತ್ತೆ ಹೇಳಬೇಕಾಗಿಲ್ಲ.

2-30 P.M.

Price rise at a Glance of food articles

(Rice, wheat pulses and grams)

| | | |
|---|---|---|
| 1972 | — | 192.2 |
| 1973 | March | 220.0 |
| 1973 | December | 262.1 |
| 1974 | January | 271.9 |
| 1974 | February | 274.9 |
| 1974 | March | 282.1 |

46.8 per cent rise in prices

ಆದರೆ ಕೇಂದ್ರ ಸರ್ಕಾರದವರು ಏನು ಕೆಲವು ಕಾರ್ಯಕ್ರಮಗಳನ್ನು ಈ ಬೆಲೆಗಳನ್ನು ತಡೆಗಟ್ಟ ತಕ್ಕ ಬಗ್ಗೆ ತೆಗೆದುಕೊಂಡರು ಅವುಗಳಿಂದ ಈ ಬೆಲೆಗಳನ್ನು ತಡೆಗಟ್ಟು ವುದಕ್ಕೆ ಖಂಡಿತಾ ಸಾಧ್ಯವಿಲ್ಲ. ಆದುದರಿಂದ ಅವರು ತಮ್ಮ ಆ ನೀತಿಯನ್ನು ಕೂಡಲೆ ಬದಲಾಯಿಸಿಕೊಳ್ಳಬೇಕೆಂಬುದಕ್ಕಾಗಿ ನಾನು ಇದನ್ನು ಹೇಳಿದೆ.

ನಮ್ಮ ಅರ್ಥಸಚಿವರ ನೀತಿಯಿಂದಾಗಿ ಇಲ್ಲಿ ಕಳೆದ ಒಂದು ವರ್ಷದಲ್ಲಿ ಈ ಆಹಾರಧಾನ್ಯಗಳ ಬೆಲೆ 27 ಪರ್ಸೆಂಟ್ ಜಾಸ್ತಿಯಾಗಿದೆ ಎಂದರೆ ರಾಷ್ಟ್ರದ ಇತಿ ಹಾಸದಲ್ಲೆ ಎಂದೂ ಕಾಣದಿದ್ದಂಥ ವಿಚಾರ ಇದು. ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಈ ಒಂದು ಕೇಂದ್ರದವರ ತಪ್ಪು ನೀತಿಯಿಂದ ಹೀಗಾಗಿದೆ. ಆದುದರಿಂದ ಇವರು ತಮ್ಮ ನೀತಿಯನ್ನು, ಆರ್ಥಿಕ ನೀತಿಯುನ್ನು, ಬದಲಾಯಿಸಿ ಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಡಿ ದೇವರಾಜ ಅರಸ್.—ತಾವು ಹೇಳುತ್ತಿರುವ ಅಂಕಿಅಂಶಗಳು ಇಲ್ಲಿಗೆ ಸಂಬಂಧಪಟ್ಟವುಗಳೋ, ಏನು ?

SRI H. D, DEVE GOWDA.—Unproductive expenditure went up fantastically high during these 3 years. ಕೇಂದ್ರ ಸರ್ಕಾರದ ಅಂಕಿಅಂಶಗಳ ಇಲಾಖೆಯವರು ಆ ಪಾರ್ಲಿಯಮೆಂಟಿನಲ್ಲಿ ಸರ್ಕುಲೇಟ್ ಮಾಡಿದಂಥ ಅಂಕಿಅಂಶಗಳ ಅಧಾರದ ಮೇಲೆ ಹೇಳುತ್ತಿದ್ದೇನೆ. ಕೇಂದ್ರದ ಪಾಲಸಿಯಲ್ಲಿ ಅನ್‌ಪ್ರೊಡೆಕ್ಟೀವ್ ವೆಚ್ಚ ಜಾಸ್ತಿಯಾಗಿ ಪ್ರೊಡೆಕ್ಟೀವ್

(ಶ್ರೀ ಹೆಚ್ ಡಿ. ದೇವೇಗೌಡ)

ವೆಚ್ಚ ಬಿದ್ದು ಹೋಗಿದೆ. ಈ ಎರಡಕ್ಕೂ ಒಂದಕ್ಕೊಂದಕ್ಕೆ ಇಂಟರ್‌ರಿಲೇಷನ್‌ಷಿಪ್ ಇದೆ. ಅಲ್ಲಿ ಅವರು ಅನುಸರಿಸುತ್ತಿರುವ ತಪ್ಪು ಆರ್ಥಿಕ ನೀತಿಯ ಫಲವಾಗಿ ನಾವಿಂದು ಇಲ್ಲಿ ಪಾಪದಕೊಪಕ್ಕೆ ಬೀಳುತ್ತಿದ್ದೇವೆ. ಕೇಂದ್ರ ಸರ್ಕಾರ ಮಿತವ್ಯಯು ವನ್ನು ಸಾಧಿಸಲು ಕೆಲವು ಪ್ರಯತ್ನಗಳನ್ನು ಮಾಡಿದೆ. ಅದರ ಅಂಗವಾಗಿ ಕ್ರೆಡಿಟ್ ಸ್ಕೀಜನ್ನು ಜಾರಿಗೆ ತಂದಿದ್ದಾರೆ. ಇದರ ಪರಿಣಾಮ ವೇನಾಯಿತು ? ದೇಶದಲ್ಲಿ ಉತ್ಪತ್ತಿ ಬಿದ್ದುಹೋಯಿತು. ಕೈಗಾರಿಕೆಗಳ ಬೆಳವಣಿಗೆಯಲ್ಲಿ ಕುಂಠಿತವಾಗಿ ಆವುಗಳ ಅಭಿವೃದ್ಧಿಗೆ ದೊಡ್ಡ ಪೆಟ್ಟು ಬಿತ್ತು. ಆವರು ಈ ತಮ್ಮ ಕ್ರೆಡಿಟ್ ಸ್ಕ್ವೀಜನ್ನು ಉತ್ಪಾದನಾ ಬಾಬುಗಳಿಗೆ ಅನ್ವಯಿಸ ಬಾರದಾಗಿತ್ತು. ಉದಾಹರಣೆಗೆ ಹೇಳುವುದಾದರೆ ಆ ಕಾಳಿ ನದಿ ಯೋಜನೆಗೆ ಕ್ರೆಡಿಟ್ ಸ್ಕ್ವೀಜನ್ನು ಹಾಕಬಾರದು. ಹಾಗೇ ದೇಶದಲ್ಲಿ ಜನತೆಗೆ ಅತ್ಯಗತ್ಯವಾಗಿ ಬೇಕಾಗಿರತಕ್ಕ ಸಕ್ಕರೆ ಸಿಮೆಂಟ್ ಇತ್ಯಾದಿ ವಸ್ತುಗಳ ಉತ್ಪಾದನೆ ಮಾಡುವ ಕೈಗಾರಿಕೆಗಳಿಗೆ ಕ್ರೆಡಿಟ್ ಸ್ಕ್ವೀಜನ್ನು ಹಾಕಬಾರದು. ಹಾಕುತ್ತೇವೆಂದರೆ ಅದು ಅರ್ಥರಹಿತವಾದ ಮಾತೆಂದು ಹೇಳದೆ ವಿಧಿಯಿಲ್ಲ ಇಂಥ ಕ್ರೆಡಿಟ್ ಸ್ಕ್ವೀಜನ್ನು ಚಲನಚಿತ್ರ ಮಂದಿರಗಳ ನಿರ್ಮಾಣಕ್ಕೆ ಆಥವಾ ಒಂದು ದೊಡ್ಡ ಹೋಟಲನ್ನು ಕಟ್ಟುತಕ್ಕ ಕಟ್ಟಡದ ಬಗ್ಗೆ ಹಾಕಲಿ. ಅದನ್ನು ನಾನೂ ಒಪ್ಪುತ್ತೇನೆ. ಇವರ ಈ ಒಂದು ನೀತಿಯಿಂದ ದೇಶದಲ್ಲಿ ಅನೇಕ ಸಮಸ್ಯೆಗಳೂ ತಲೆದೋರುವುದಕ್ಕೆ ಅವಕಾಶವಾಯಿತೇ ವಿನಾ ಅದರಿಂದ ದೇಶಕ್ಕೆ ಒಳ್ಳೆಯದಾಗಲಿಲ್ಲ. ರಾಷ್ಟ್ರದಲ್ಲಿ ಕೈಗಾರಿಕಾ ಅಭಿವೃದ್ಧಿ ಶೂನ್ಯವಾಗಿ ಎಲ್ಲಿ ನೋಡಲಿ ರಾಷ್ಟ್ರದಲ್ಲಿ ವಿದ್ಯಾವಂತ ತರುಣ ನಿರುದ್ಯೋಗಿಗಳ ಸಂಖ್ಯೆ ಬೃಹದಾಕಾರದಲ್ಲಿ ಬೆಳೆದು ನಿಲ್ಲಲು ಅದಕಾಶವಾಯಿತು. ಇದು ದೇಶಕ್ಕೆ ದೊಡ್ಡ ಒಂದು ವಿಪತ್ಕಾರಕವಾದಂತಾದ್ದು ಇದಕ್ಕೆ ಮುಖ್ಯ ಕಾರಣ ಕೇಂದ್ರದ ನೀತಿಯೇ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರ ಅಂಕಿಅಂಶದ ಪ್ರಕಾರ ತೆಗೆದುಕೊಂಡರೂ ಅವರ ಸಂಖ್ಯೆ ನೋಡಿದರೆ ಎದೆ ಜಲ್ಲೆನ್ನುತ್ತದೆ. ಕೇಂದ್ರ ಸರ್ಕಾರದವರ ತಪ್ಪು ನೀತಿನಡವಳಿಕೆಗಳೇ ಇದಕ್ಕೆ ಕಾರಣ. ಪಾರ್ಲಿಯ ಮೆಂಟಿನಲ್ಲೇ ಈ ಅನೆಂಪ್ಲಾಯಿಮೆಂಟ್ ವಿಚಾರ ಚರ್ಚೆಗೆ ಬಂದಿದ್ದಾಗ ಅಲ್ಲಿ ಕರ್ಣಾಟಕ ಒಂದರಲ್ಲೇ 30-6-1972ಕ್ಕೆ ಇಲ್ಲಿರತಕ್ಕ ಪದವೀಧರ ನಿರುದ್ಯೋಗಿಗಳ ಸಂಖ್ಯೆ—24.5 ಸಹಸ್ರ ಎಂದು ಹೇಳಿದ್ದಾರೆ The graduates unemployed in our own State. On 30th June 1974, it went up to 38,000 from 24,500. ಕೇಂದ್ರ ಸರ್ಕಾರ ಪರಿಜ್ಞಾನವಿಲ್ಲದೆ, ವಿವೇಕಶೂನ್ಯರಾಗಿ ಆ ಕ್ರೆಡಿಟ್ ಸ್ಕ್ವೀಜನ್ನು ಜಾರಿಗೆ ತಂದುದರ ಪರಿಣಾಮ ಇದು. ದೇಶದಲ್ಲಿ ಇದು ಇನ್ನೂ ಅನೇಕ ಸಮಸ್ಯೆಗಳಿಗೆ ಇಂಬುಗೊಡುವುದಕ್ಕೆ ಅವಕಾಶ ವುಂಟಾಯಿತು. ಇನ್ನು ರಾಷ್ಟ್ರಮಟ್ಟದ ಅಂಕೀ ಅಂಶಗಳನ್ನು ತೆಗೆದುಕೊಂಡರೆ 30-6-1972ರಲ್ಲಿ ಈ ಪದವೀಧರ ವಿದ್ಯಾವಂತ ನಿರುದ್ಯೋಗಿ ತರುಣರ ಸಂಖ್ಯೆ

463.53 ಸಹಸ್ರ ಇದ್ದದ್ದು 30-6-1974ಕ್ಕೆ 770.4 ಸಹಸ್ರಕ್ಕೇರಿದೆ. ಕೇಂದ್ರ ಸರ್ಕಾರದವರು ಕೈಗಾರಿಕಾ ರಂಗದಲ್ಲಿ ಹರಡಬೇಕಾಗಿದ್ದ ಹಣದಬಗ್ಗೆ ಈ ಕ್ರೆಡಿಟ್ ಸ್ಕ್ವೀಜನ ಒಂದು ಅಡಚಣೆಯನ್ನು ತಂದೊಡ್ಡಿದ್ದರಿಂದ ರಾಷ್ಟ್ರದಲ್ಲಿ ಇವುಗಳ ಬೆಳವಣಿಗೆ ಆಗಲಿಲ್ಲ ಅದರಿಂದ ದೇಶದಲ್ಲಿ ನಿತ್ಯೋಪಯೋಗಿ ವಸ್ತುಗಳ ಉತ್ಪನ್ನವೂ ಕೂಡ ಬಿದ್ದುಹೋಯಿತು. ಈ ಒಂದು ನೀತಿಯಿಂದ ಒಂದು ಕಟು ವಾದ ಅನುಭವ ಈಗ ನಮಗೆ ಉಂಟಾಗಿದೆ. ಆದುದರಿಂದ ನಾವೀಗ ಈ ನೀತಿ ಯನ್ನು ಬದಲಾವಣೆ ಮಾಡದೆ ಗತ್ಯಂತರವಿಲ್ಲ.

ಇನ್ನು ನಮ್ಮಲ್ಲಿರತಕ್ಕ ಬಡ್ಡಿ ವಿಷಯಕ್ಕೆ ಬಂದರೆ ಅದು ಇನ್ನೂ ಭಯೋತ್ಪಾ ದಕವಾಗಿದೆ. ಬ್ಯಾಂಕುಗಳಲ್ಲಿ ಬಡ್ಡಿದರ ಈಗ 21 ಪರ್ಸೆಂಟ್, ಇನ್ನು ಕೆಲವು ಸಂದರ್ಭಗಳಲ್ಲಿ 24 ಪರ್ಸೆಂಟ್ ಇದೆ, ಇಷ್ಟು ಏರುವುದಕ್ಕೆ ನಮ್ಮ ಸರ್ಕಾರದವರ ನೀತಿಯೇ ಕಾರಣ. ಇದು ಬಹಳ ತಪ್ಪಾದ ನೀತಿ ಎಂಬುದು ನನ್ನ ಅಭಿಪ್ರಾಯ. ಇದರಿಂದ ಏನಾಗುತ್ತದೆ ಎಂದರೆ ಗ್ರಾಹಕರು ಕೊಳ್ಳತಕ್ಕ ವಸ್ತುಗಳ ಬೆಲೆ ವಿನಾ ಕಾರಣ ಏರುವುದಕ್ಕೆ ಅವಕಾಶವಾಗುತ್ತದೆ. ಏಕೆಂದರೆ ವಸ್ತುಗಳನ್ನು ತಯೊರಿಸ ತಕ್ಕವರು ಈ ದುಬಾರಿಯ ಬಡ್ಡಿಯನ್ನೆಲ್ಲಾ ಅವರು ತಯಾರಿಸತಕ್ಕ ವಸ್ತುಗಳ ಮೇಲೆ ಹಾಕುತ್ತಾರೆ. ಈಗ ಸಾಮಾನುಗಳ ಬೆಲೆ ಏರೇ ಏರುತ್ತದೆ. ಆದುದ ರಿಂದ ಈ ನೀತಿ ಈ ದೃಷ್ಟಿಯಿಂದಲೂ ಸರಿಯಲ್ಲ. ಈ ಹಿಂದೆ ಅಮೇರಿಕಾ ದೇಶ ದಲ್ಲಿ 1866-67ರಲ್ಲಿ ಹಣದುಬ್ಬರ ಉಂಟಾಗಿದ್ದಾಗ ಅವರೂ ಹೀಗೆ ಅಲ್ಲಿ ಕ್ರೆಡಿಟ್ ಸ್ಕ್ವೀಜನ್ನು ಜಾರಿಗೆ ತಂದು ಅವರು ಕೈಸುಟ್ಟುಕೊಂಡಿದ್ದರ ಸತ್ಯಾಂಶ ನಮ್ಮ ಮುಂದೆ ಇದೆ. ಆದುದರಿಂದ ಸರ್ಕಾರದವರು ಎಷ್ಟು ಬೇಗ ತಮ್ಮ ಈ ನೀತಿ ಯನ್ನು ಬದಲಾಯಿಸಿಕೊಂಡರೆ ದೇಶಕ್ಕೆ ಅಷ್ಟೂ ಕ್ಷೇಮ. ಆದರೆ ಈ ದಿವಸ ನಮ್ಮ ಸರ್ಕಾರವನ್ನು ಇಲ್ಲಿ ಒಂದು ಸರ್ಕಾರ ಎಂದು ಹೇಳುವುದಕ್ಕೆ ನನಗಂತೂ ಮನಸ್ಸಿಲ್ಲ. ಇದನ್ನು ಒಂದು ದೊಡ್ಡ ಮುನಿಸಿಪ್ಯಾಲಿಟಿ ಎಂದು ಕರೆದರೆ ಸರಿ ಯಾಗಿರುತ್ತದೆ. ಇದನ್ನೇಕೆ ಹೇಳುವುದೆಂದರೆ ಈ ಕೆಲವು ನೀತಿಗಳನ್ನು ಮಾರ್ಪಾಡು ಮಾಡಿಕೊಳ್ಳದಿದ್ದರೆ ದೇಶದ ಭವಿಷ್ಯ ಉಜ್ವಲವಾಗುವುದಕ್ಕೆ ಸಾಧ್ಯ ವಿಲ್ಲ. ಆದುದರಿಂದ ಇದನ್ನು ಪ್ರಾರಂಭದಲ್ಲೇ ಪ್ರಸ್ತಾಪಿಸುವುದಕ್ಕಿಚ್ಛಿಸುತ್ತೇನೆ.

ಆಮೇಲೆ ಮತ್ತೊಂದು ವಿಷಯವನ್ನು ಮಾನ್ಯ ಅರ್ಥಸಚಿವರು ಹೇಳಿದ್ದಾರೆ. ಬೆಲೆಗಳ ಹತೋಟಿವಿಚಾರ ತಿಳಿಸಿದ್ದಾರೆ, ಅದನ್ನು ಹತೋಟಿಯಲ್ಲಿಡಲು ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಹೇಳಿದ್ದಾರೆ. ಈ ಸಂಬಂಧದಲ್ಲಿ ಒಂದು ಮಾತನ್ನು ಹೇಳುವುದು ಸತ್ಯವನ್ನು ವಿಮರ್ಶೆ ಮಾಡುವಾಗ ಯಾವುದೇ ಒಂದು ಪೂರ್ವ ಭಾವಿ ನಿರ್ಣಯಕ್ಕೆ ಬರಬಾರದು. ಕೇವಲ ವಿರೋಧಪಕ್ಷದ ದೃಷ್ಟಿಯಿಂದ ಹೀಗೆ ಹೇಳುತ್ತಿದ್ದೇನೆಂಬ ಭಾವನೆ ಬೇಡ. ಈ ದಿವಸ ಬೆಲೆಗಳು ಏರಲು ಯಾರು ಕಾರಣರು ? ಇಂದು ಶಾಮಣ್ಣನವರು ಒಂದು ವಿಷಯವನ್ನು ಪ್ರಸ್ತಾಪಿಸಿದರು,

(ಶ್ರೀ ಹೆಚ್. ಡಿ. ದೇವೇಗೌಡ)

ಹಾಲಿನ ಬೆಲೆ ಏರಿಕೆ ವಿಚಾರ ಪ್ರಸ್ತಾಪ ಮಾಡಿ ಕಳೆದ ಮೂರು ವರ್ಷಗಳಲ್ಲಿ ಸುಮಾರು ಹನ್ನೊಂದು ಸಾರಿ ಹಾಲಿನ ಬೆಲೆ ಹೆಚ್ಚಿಸಿರುವರೆಂದು ತಿಳಿಸಿದರು. ಹಾಗೆಯೇ ಸಕ್ಕರೆ ಬೆಲೆಯನ್ನು ಯಾರು ಜಾಸ್ತಿ ಮಾಡಿದರು ? ಮಾಡರನ್ ಬೇಕರಿ ಬ್ರೆಡ್ಡಿನ ದರವನ್ನು ರಿವೈಜ್ ಮಾಡಿದವರು ಯಾರು ? ವನಸ್ಪತಿಯ ಬೆಲೆಯನ್ನು ಏರಿಸಿದವರು ಯಾರು ? ಕೇಂದ್ರ ಸರಕಾರ ಈ ಹೊರೆ ಹೊರಬೇಕಾಗುತ್ತದೆ. ಇವು ಎಸ್ಸೆನ್ಷಿಯಲ್ ಕಮಾಡಿಟೀಸ್ ಟೆಕ್ಸ್‌ಟೈಲ್ಸ್ ವಿಚಾರದಲ್ಲೂ ಹಾಗೆಯೇ ಆಗಿದೆ. ಸಾಮಾನ್ಯ ಜನರಿಗೆ ಬೇಕಾಗಿರುವ ಸೀರೆ ಬೆಲೆ ಹೇಗೆ ಏರಿದೆ ನೋಡಬಹುದು. ಇದಕ್ಕೆ ಸರಕಾರದ ನೀತಿಯೇ ಕಾರಣ. ಈ ಪಾಪದ ಹೊರೆಯನ್ನು ಕೇಂದ್ರ ಸರಕಾರವೇ ಹೊರಬೇಕು. ಇಂದು ಬೆಲೆ ಹೆಚ್ಚಿರುವುದನ್ನು ಗಮನಿಸಿ ಅದನ್ನು ಸರಿಪಡಿಸಲು ಪ್ರಯತ್ನಿಸುವುದು ಒಳ್ಳೆಯದು. ಯಾವುದೇ ಪ್ರತಿಷ್ಠೆ ಮಾಡಿಕೊಂಡು ಆಡಳಿತ ನಡೆಸುವುದಕ್ಕೆ ಸಾಧ್ಯವಿಲ್ಲ, ನೀವು ಮಾಡುವ ತಪ್ಪನ್ನು ತಿದ್ದಿಕೊಳ್ಳಬೇಕು. ಇದನ್ನು ಮಹಾತ್ಮ ಗಾಂಧಿಯವರು ಕೂಡ ಹೇಳಿದ್ದಾರೆ. ಇದಕ್ಕಾಗಿ ತಿದ್ದಿಕೊಳ್ಳುವುದಕ್ಕೆ ನಾಚಿಕೆಪಡಬೇಕಾಗಿಲ್ಲ.

ಮತ್ತೊಂದು ವಿಷಯ. ಕೆಲವು ಪ್ರೈವೇಟ್ ಫ್ಯಾಕ್ಟರಿಗಳವರು ದರ ಏರಿಸುತ್ತಿದ್ದಾರೆ. ಕಂಟ್ರೋಲ್ಡ್ ಕಮಾಡಿಟೀಸ್‌ಗೆ ದರ ಏರಿಸಲು ಸರಕಾರದವರು ಅನುವು ಮಾಡಿಕೊಟ್ಟಿದ್ದಾರೆ. ಏಕೆ ? ಬೆಲೆಯೇರಿಕೆಗೆ ಕೊಡುವ ಕಾರಣ ಸರಿಯಾಗಿಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ. ಉದಾಹರಣೆಗೆ ಸಿಮೆಂಟ್ ಬೆಲೆ ಇಷ್ಯೂ ರೇಟ್ ಹದಿನೆಂಟುವರೆ 19 ರೂಪಾಯಿ. 21 ರೂಪಾಯಿ ಎಂದು ಕೆಲವರು ಹೇಳುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದೀಚೆಗೆ ಇದರ ಬೆಲೆ 8-10 ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಇದಕ್ಕೆ ಕಾರಣ ಕೊಡಬಹುದು. ಇಂದು ಪ್ರೊಡಕ್ಷನ್ ಕಾಸ್ಟ್ ಸೇರಿಸುವುದನ್ನು ಒಪ್ಪುತ್ತೇನೆ. ಆದರೆ ಇಷ್ಟೊಂದು ಪ್ರೊಡಕ್ಷನ್ ಕಾಸ್ಟ್ ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲ. ಸೇಕಡ 90ರಷ್ಟು ಅಡೀಷನಲ್ ಲೆವಿ ಕೂಡ ಇದೆ. ಹೀಗೆ ಕೆಲವು ತಪ್ಪು ಕ್ರಮಗಳಿಂದ ಬೆಲೆಯೇರಲು ಅವಕಾಶವಾಗಿದೆ. ಇದು ವಿಷಸ್ ಸರ್ಕಲ್. ಆದುದರಿಂದ ಕೇಂದ್ರಸರಕಾರ ಬಹಳ ಜಾಗರೂಕತೆಯಿಂದ ವರ್ತಿಸಬೇಕಾಗುತ್ತದೆ. ಅದು ತಪ್ಪುಮಾಡಿರುವುದರಿಂದ ಇದನ್ನು ಹೇಳಬೇಕಾಗಿದೆ.

ಮಾನ್ಯ ಸಭಾಧ್ಯಕ್ಷಣಿಯವರೇ, ಇವತ್ತು ಅರ್ಥಿಕ ಸಚಿವರು ಕೆಲವು ತೆರಿಗೆಗಳನ್ನು ಕೂಡ ಹಾಕಿದ್ದಾರೆ, ಆ ಮೇಲೆ ಅದರ ಬಗ್ಗೆ ವಿಮರ್ಶೆಮಾಡುತ್ತೇನೆ, ಮೊದಲನೆಯದಾಗಿ ಯಾವುದೇ ಹೊಸ ತೆರಿಗೆ ಹಾಕಿದರೂ ಕೂಡ ಅದು ಬೆಲೆಯೇರುವುದಕ್ಕೆ ಅವಕಾಶವಾಗುವುದೇ ಹೊರತು ಇಳಿಸುವುದಕ್ಕೆ ಅವಕಾಶವಾಗುವು

ದಿಲ್ಲ. ಅನೇಕ ಹೊಸ ತೆರಿಗೆಗಳನ್ನು ವಿಧಿಸಿದ್ದಾರೆ. ಆದರಿಂದ ಇಂದು ಬೆಲೆ ಏರುವುದಕ್ಕೆ ಅವಕಾಶವಾಗಿದೆ. ನೆರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ತೆರಿಗೆಗಳು ಕಡಮೆ ಇವೆ ಎಂದು ಹೊಸ ತೆರಿಗೆ ಹಾಕುವಾಗ ಹೇಳುವರು. ಅದರ ಬಗ್ಗೆ ಇಷ್ಟು ಹೇಳುತ್ತೇನೆ. ಯಾವ ನೆರೆ ರಾಜ್ಯದಲ್ಲಿ ನಮ್ಮಲ್ಲಿರುವುದಕ್ಕಿಂತ ತೆರಿಗೆ ಕಡಮೆ ಇದೆಯೋ ಅದನ್ನು ಹೇಳುವುದಿಲ್ಲ. ಆಂಧ್ರದಲ್ಲಿ ಮಾರಾಟ ತೆರಿಗೆ ನಮ್ಮಲ್ಲಿರುವುದಕ್ಕಿಂತ ಕಡಮೆಯಿದೆ. ಹಲವಾರು ನಿದರ್ಶನಗಳನ್ನು ಕೊಡಬಹುದು. ನಮ್ಮ ರಾಷ್ಟ್ರ ಮಟ್ಟದ ತೆರಿಗೆ ನೋಡಿದರೆ ಪ್ರಪಂಚದಲ್ಲಿರುವ ಅಂಡರ್ ಡೆವಲಪ್ಡ್ ದೇಶಗಳೊಡನೆ ಹೋಲಿಕೆ ಮಾಡಿದರೆ ನಾವು ಹೆಚ್ಚು ತೆರಿಗೆ ಹಾಕಿರುವುದು ವ್ಯಕ್ತ ವಾಗುವುದು. ವಿವರಣೆ ಕೊಡುತ್ತೇನೆ. ಇಂಡಿಯಾ ದೇಶದಲ್ಲಿ ಮ್ಯಾಗ್ಜಿಮಂ ತೆರಿಗೆಯಿದೆ, ಅಂಕಿ ಅಂಶಗಳನ್ನು ನೋಡಬಹುದು. ಇಂದು ರಾಷ್ಟ್ರದಲ್ಲಿ ಇರುವ ತೆರಿಗೆ ಪ್ರಮಾಣ ಹೊರೆ ಬಹಳ ಜಾಸ್ತಿ, ಇದು ಸೂಕ್ತವಲ್ಲ. ಮಾರಾಟ ತೆರಿಗೆ ನೋಡಿದರೆ ಆಂಧ್ರ ರಾಜ್ಯದಲ್ಲಿರುವುದಕ್ಕೆ ಹೋಲಿಕೆ ಮಾಡಿದರೆ ಎಲ್ಲ ರೀತಿಯಿಂದಲೂ ಹೆಚ್ಚು ಕರಭಾರ ಜನತೆಯ ಮೇಲೆ ಹಾಕಿದ್ದೇವೆಂದು ಕಂಡುಬರುವುದು.

ಮತ್ತೊಂದು ವಿಷಯ. ಇವತ್ತು ನಮ್ಮ ಆರ್ಥಿಕ ಸಚಿವರು ಬಹಳ ಗೋಳಿಟ್ಟುಕೊಂಡಿದ್ದಾರೆ ಪ್ರತಿಯೊಂದು ಪುಟದಲ್ಲೂ, ಪ್ರತಿಯೊಂದೂ ಅಭಿ ವೃದ್ಧಿ ಕಾರ್ಯಕ್ರಮದ ಬಗ್ಗೂ, ಪ್ರತಿಯೊಂದು ಯೋಜನೆಯ ವಿಚಾರದಲ್ಲೂ ಕೇಂದ್ರ ಸರಕಾರದ ಸಹಾಯವನ್ನು ಗುರಿಯಾಗಿಟ್ಟುಕೊಂಡು ಸಾಕಷ್ಟು ಗೋಳಾಡಿ ದ್ದಾರೆ ಇಂದು ಅವರಿಗೆ ಬಹಳ ಕಟುವಾದ ಅನುಭವವಿದೆ. ಮೂರು ವರ್ಷ ಕಳೆದಿದೆ, ಅಂತ್ಯ ಕಾಲಕ್ಕೆ ಬರುತ್ತಿದ್ದೇವೆ. 5ನೆಯ ಭವಿಷ್ಯದ ಅಂತ್ಯಕಾಲವಿದೆ. ಇದಾದ ಮೇಲೆ ಒಂದು ಬಜೆಟ್ ನೀವು ಈ ಸಭೆಯಲ್ಲಿ ಮಂಡಿಸಬಹುದು. 1972 ನೆಯ ಇಸವಿಯ ಪ್ರಥಮದಲ್ಲಿ ಈ ಸಭೆಯಲ್ಲಿ ಭಾಷಣಮಾಡಿರುವುದನ್ನು ಉಲ್ಲೇಖ ಮಾಡುತ್ತೇನೆ. ಈ ಆಯವ್ಯಯಪಟ್ಟಿಯಲ್ಲಿ ಹೊಸ ತೆರಿಗೆ ಹಾಕಿರುವ ಸೂಚನೆ ಯೇನೂ ಇಲ್ಲ ಎಂದು ತಿಳಿಸಿದ್ದಾರೆ. ಇತ್ತೀಚೆಗೆ ನಡೆದ ಸಾರ್ವತ್ರಿಕ ಚುನಾವಣೆ ಪರಿಣಾಮವಾಗಿ ಕೇಂದ್ರ ಸರಕಾರ ಮತ್ತು ರಾಜ್ಯಸರಕಾರಗಳ ನಡುವೆ ರಾಜಕೀಯ ಮತ್ತು ಅರ್ಥಿಕ ಸಹಕಾರದ ಹೊಸಯುಗವೊಂದು ಮೂಡಿದೆ ಎಂದು ತಿಳಿಸಿ ದ್ದಾರೆ. ಪಾಪ ಘೋರ್ಪಡೆಯವರು ಬಹಳ ಆಸೆಯನ್ನಿಟ್ಟುಕೊಂಡಿದ್ದರು-ಸ್ಟೇಟಸ್ಕೋ. ಅದನ್ನೇ ಪ್ರತಿವರ್ಷವೂ ಹೇಳಿಕೊಂಡು ಬಂದಿದ್ದಾರೆ. ಇಂದು ಐದನೆಯ ಯೋಜನೆಯ ಅವಧಿಯಲ್ಲಿದ್ದೇವೆ. ಆಮೇಲೆ ಅದಕ್ಕೆ ಬರುತ್ತೇನೆ. ನಮ್ಮ ಮುಖ್ಯಮಂತ್ರಿಗಳಾದ ದೇವರಾಜ ಅರಸುರವರು ಇತ್ತೀಚೆಗೆ ದೆಹಲಿಯಲ್ಲಿ ಅರ್ಥಮಂತ್ರಿಗಳಾದ ಚವಾಣ್ ಮತ್ತು ಸುಬ್ರಹ್ಮಣ್ಯಂರವರೊಡನೆ ನಡೆಸಿದ ಚರ್ಚೆಯ ಫಲವಾಗಿ ಕಾಳಿನದಿ ಯೋಜನೆಗೆ ಪೂರ್ಣ ಹಣ ಒದಗಿಸಲು ಒಂದು ತೀರ್ಮಾನಕ್ಕೆ ಬರಲಾಗಿದೆ ಎಂದು ಹೇಳಿದ್ದಾರೆ.

(ಶ್ರೀ ಹೆಚ್. ಡಿ. ದೇವೇಗೌಡ)

ಅದನ್ನು ತಾವು ಹೇಳಿರುವುದೇ, ಆಮೇಲೆ ನಾವು ಮಾನ್ಯ ಡಿ. ಪಿ. ಧರ್ ಅವರಿಗೆ ಕೃತಜ್ಞತೆಯನ್ನು ಈ ಮನೆಯ ಮುಖಾಂತರ ಸಲ್ಲಿಸಿಬಿಟ್ಟಿದ್ದೇವೆ. ಈಗ ಅವರು ಮಾಸ್ಕೋದಲ್ಲಿದ್ದಾರೆ. ಇವತ್ತು ಅವರು ಯೋಜನೆ ಶಾಖೆಯನ್ನು ಕೈಬಿಟ್ಟು ಮಾಸ್ಕೋದಲ್ಲಿದ್ದಾರೆ. ಅವರಾದ ಮೇಲೆ ಮಾನ್ಯ ಹಕ್ಸರ್ ಬಂದರು, ಆ ಮೇಲೆ ಶ್ರೀಮತಿ ಇಂದಿರಾಗಾಂಧಿಯವರೇ ಇದನ್ನು ಇಟ್ಟುಕೊಂಡಿದ್ದಾರೆ. ಮಾನ್ಯ ಸುಬ್ರಹ್ಮಣ್ಯಂ ಅವರು ಹೋದರು, ಡಿ. ಪಿ ಧರ್ ಅವರು ಹೋದರು ಹಕ್ಸರ್ ಅವರು ಹೋದರು ಈಗ ಶ್ರೀಮತಿ ಗಾಂಧಿಯವರೇ ಇದನ್ನು ಇಟ್ಟುಕೊಂಡಿದ್ದಾರೆ. ತಾವು ಹಿಂದೆ ನಮ್ಮ ಹತ್ತಿರ ಬ್ಲಾಂಕ್ ಚೆಕ್ ಇದೆಯೆಂದು ಮಾನ್ಯ ಧರ್ ಅವರು ಗುಲ್ಬರ್ಗದಲ್ಲಿ ಹೇಳಿದಂಥ ಮಾತನ್ನು ಇಲ್ಲಿ ಹೇಳಿದ್ದೀರಿ, ಅದನ್ನು ಮತ್ತೆ ಇಲ್ಲಿ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ಇವೆಲ್ಲವನ್ನೂ ತಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೀರಿ. The National Development Council has not yet met to determine the quantum of Central assistance and the formula for its distribution to all States. This should be done as soon as possible in order to end uncertainties and ensure tha both the Centre and States share the burden of development equitably. ಇವತ್ತು ಮಾನ್ಯ ಘೋರ್ಪಡೆಯವರಿಗೆ ನಾನು ಕೇಳಲಿಕ್ಕೆ ಇಷ್ಟಪಡುತ್ತೇನೆ, ಸೆಂಟ್ರಲ್ ಅಸಿಸ್ಟೆನ್ಸ್ ಅನ್ನು ಹೆಚ್ಚು ಮಾಡಬೇಕು ಎಂದು ಸ್ವಲ್ಪ ಹೆಚ್ಚುಕಟುವಾಗಿ ಮಾತನಾಡಿದರೂ ಕಷ್ಟ ಅಲ್ಲವೇ ಎಂದು ಮಾತನಾಡಿದರೆ ಮುಖ್ಯಮಂತ್ರಿಗಳೂ ಜಾಗ ಬಿಡಬೇಕಾಗುತ್ತದೆ, ಮಹಾರಾಷ್ಟ್ರದಲ್ಲಿ ಮಾನ್ಯ ವಿ.ಪಿ. ನಾಯಕ್ ಅವರ ಸ್ಥಿತಿ ಆಯಿತಲ್ಲ; ಪರಿಸ್ಥಿತಿ ಹಾಗೆ ಬಂದಿದೆ ಇವತ್ತು ರಾಜ್ಯಗಳ ಮುಖ್ಯ ಮಂತ್ರಿಗಳು ಹೇಗಿದ್ದಾರೆಂದರೆ, they are something like a relieving Station Master. We cannot say how the Central assistance to States was distributed. 1973-74 ರಲ್ಲಿ 35.46 ಕೋಟಿ ರೂಪಾಯಿಗಳ ಸೆಂಟ್ರಲ್ ಅಸಿಸ್ಟೆನ್ಸ್ ನಮಗೆ ಸಿಕ್ಕುತ್ತದೆಂದು ಅತ್ತು ಕೊಂಡು ಬರೆದುಕೊಂಡಿದ್ದೀರಿ. ಹೋದವರ್ಷ ಪ್ಲಾನ್‌ಔಟ್‌ಲೇ 26,000 ಸಾವಿರ ಕೋಟಿ ರೂಪಾಯಿಗಳು, ಇದರಲ್ಲಿ ನಮಗೆ ಅಸಿಸ್ಟೆನ್ಸ್ ಬರಬೇಕಾದದ್ದು 35.46 ಕೋಟಿ ರೂಪಾಯಿಗಳು. ಈ ವರ್ಷ 1975—76ರಲ್ಲಿ, it is pegged at that level.

ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಬಹಳ ನಿರೀಕ್ಷಣೆ ಮಾಡಿದ್ದೇವೆಂದು ಬಹಳ ಭಾವನಾಪರವಶರಾಗಿ ಮಾತನಾಡಿದ್ದೀರಿ. 50--52 ಸಾವಿರ ಕೋಟಿ ರೂಪಾಯಿಗಳ ಔಟ್‌ಲೇನಲ್ಲಿ ನಮಗೆ ಎರಡು ಸಾವಿರ ಕೋಟಿ

ರೂಪಾಯಿಗಳು ಬರಬೇಕು, ಆದರೆ 800 ಕೋಟಿ ರೂಪಾಯಿಗಳೂ ಸಹ ಬರಲಿಲ್ಲ. ಐದನೆಯ ಪಂಚವಾರ್ಷಿಕ ಯೋಜನೆಯ ಗಾತ್ರವನ್ನು ನಾವು ಲೆಕ್ಕ ಹಿಡಿದಾಗ ರಾಜ್ಯಕ್ಕೆ ಕೇಂದ್ರ ಸರ್ಕಾರದವರು ಕೊಡತಕ್ಕ ಅಸಿಸ್ಟೆನ್ಸ್ it is pegged at *R*s. 35.40 crores. They can kick the Chief Ministers like anything-like foot-ball. ಹೀಗೆ ಪರಿಸ್ಥಿತಿ ಇರುವಾಗ ಮುಖ್ಯ ಮಂತ್ರಿಗಳು ಮಾತನಾಡುವುದಕ್ಕಾಗುವುದಿಲ್ಲ. ಇವತ್ತು ತಾವು ಸ್ವಲ್ಪ ಇದನ್ನು ಅವಲೋಕನ ಮಾಡಬೇಕಾಗುತ್ತದೆ. ನವಯುಗ ಪ್ರಾರಂಭವಾಗಿ, ಚುನಾವಣೆಗಳು ಆದ ಮೇಲೆ ರಾಜ್ಯ ಸರ್ಕಾರದ ಮತ್ತು ಕೇಂದ್ರಸರ್ಕಾರದ ಮಧುರ ಭಾಂಧವ್ಯ ಪ್ರಾರಂಭವಾದ ಮೇಲೆ.........

ಶ್ರೀ ಕೋಣಂದೂರು ಲಿಂಗಪ್ಪ.—ಇಂದು ಲೋಕ ನಿರ್ಮಾಣವಾದ ಮೇಲೆ.

ಶ್ರೀ ಎಚ್. ಡಿ. ದೇವೇಗೌಡ.—1960—61ರಲ್ಲಿ ಕೇಂದ್ರ ಸರ್ಕಾರಕ್ಕೆ ಎಕ್ಸೈಸ್ ಮತ್ತು ಇನ್‌ಕಂ ಟ್ಯಾಕ್ಸ್‌ಗಳಿಂದ ಬಂದಿರತಕ್ಕ ಒಟ್ಟು ಆದಾಯ 897 ಕೋಟಿ ರೂಪಾಯಿಗಳು. ಇದರಲ್ಲಿ ಎಕ್ಸೈಸ್ ರೆವಿನ್ಯೂ 416 ಕೋಟಿ ರೂಪಾಯಿಗಳು. ಇದರಲ್ಲಿ ರಾಜ್ಯಗಳ ಅಲೋಕೇಷನ್ 75 ಕೋಟಿ ರೂಪಾಯಿಗಳು. ಇದು ಸುಮಾರು 18 ಪರ್ಸೆಂಟ್‌ಗೆ ವರ್ಕ್‌ಔಟ್ ಆಗುತ್ತದೆ. In 1974-75, according to your own budget figures, the total revenue is of the order of *R*s. 5497 crores, out of which the excise revenue itself is Rs. 3044 crores. ಇವತ್ತು ಸ್ಟೇಟ್ ಅಲೋಕೇಷನ್ ಲೆಕ್ಕಹಿಡಿದಾಗ ಅದು 690 ಕೋಟಿ ರೂಪಾಯಿಗಳಷ್ಟಾಗುತ್ತದೆ. ಅಂದರೆ ಸುಮಾರು 23 ಪರ್ಸೆಂಟ್ ಆಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರಗಳ ಪರಿಸ್ಥಿತಿ ಇವತ್ತು ಮುನಿಸಿಪಾಲಿಟಿಗಳಿಗಿಂತ ಏನೇನೂ ಹೆಚ್ಚಿಲ್ಲ. ಪಾಪ, ಎಲ್ಲಾ ಬಾಬಿಗೂ ಕೇಂದ್ರದ ನಿರೀಕ್ಷಣೆಯನ್ನು ಮಾಡುತ್ತಿದ್ದೀರಿ. ನಿರೀಕ್ಷಣೆ, ನಿರೀಕ್ಷಣೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾಮಿನೇಟೆಡ್ ಚೀಫ್ ಮಿನಿಸ್ಟರ್ (ನಾಮಿನೇಟೆಡ್ ಪ್ರೆಸಿಡೆಂಟ್)

ಶ್ರೀ ಎಚ್. ಡಿ. ದೇವೇಗೌಡ.—ನೀವು ಹೇಗೆ ಇರಬೇಕು ಎಂದರೆ, ಅವರ ಕೈಗೊಂಬೆಗಳಾಗಿ, ಅವರ ಹಿಡಿತದಲ್ಲಿ ಕೆಲಸ ಮಾಡಬೇಕು. ಕೇಂದ್ರ ಎಲ್ಲಾ ಅಧಿಕಾರವನ್ನು ಶಕ್ತಿಯನ್ನು ತನ್ನಲ್ಲಿ ಇಟ್ಟುಕೊಂಡು ತನಗೆ ಬೇಕಾದ ರೀತಿಯಲ್ಲಿ ಆಡಳಿತ ನಡೆಸತಕ್ಕ ಒಂದು ನೀತಿ ಏನಿದೆ ಇದು ಯೋಗ್ಯವಲ್ಲ. ಇದಕ್ಕೆ ಇತಿಶ್ರೀ

(ಶ್ರೀ ಹೆಚ್. ಡಿ. ದೇವೇಗೌಡ)

ಹಾಡಬೇಕಾಗುತ್ತದೆ. ತಮಿಳುನಾಡಿನಲ್ಲಿ ಮಾನ್ಯ ಕರುಣಾನಿಧಿಯವರು ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ. ಅದನ್ನು ನಾವು ಪಕ್ಷದ ರಾಜಕಾರಣ ವನ್ನು ಬಿಟ್ಟು ಸಮರ್ಥನೆ ಮಾಡಬೇಕಾಗುತ್ತದೆ. ಏಕೆಂದರೆ ಒಬ್ಬ ಮುಖ್ಯ ಮಂತ್ರಿಗೆ ಯಾವ ಶಕ್ತಿಯೂ ಇಲ್ಲ. ಇವತ್ತು ಕೇಂದ್ರ ಸರ್ಕಾರದ ಜೊತೆಗೆ ಗುದ್ದಾಡುವುದಕ್ಕೆ, ತಾವು ಹೊಂದಿರತಕ್ಕ ಸ್ಥಾನದ ಮರ್ಜಿಯಲ್ಲಿ, ಸ್ಥಾನಕ್ಕೆ ಯಾವ ರೀತಿಯಿಂದಲೂ ಅಂಟಿಕೊಳ್ಳದೆ, ಹೋರಾಟ ಮಾಡುವುದಕ್ಕೆ ಯಾವ ರಾಜ್ಯದ ಮುಖ್ಯ ಮಂತ್ರಿಯೂ ತಯಾರಿಲ್ಲ ಎನ್ನುವುದನ್ನು ಈ ಸಂದರ್ಭ ದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಇವತ್ತು ನಮ್ಮ ರಾಜ್ಯದ ಬೆಳವಣಿಗೆ ನಾವು ನಿರೀಕ್ಷಣೆ ಮಾಡಿದ ರೀತಿಯಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ಸೆಂಟ್ರಲ್ ಅಸಿಸ್ಟೆನ್ಸ್ ಕೊಡತಕ್ಕ ಕಾಲದಲ್ಲಿ ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಏಕೆಂದರೆ ಇದರಲ್ಲಿ ತಮ್ಮ ಪಾತ್ರ ಏನು ? ಇನಕ್ರೀಸ್ಡ್ ಪ್ಲಾನ್ ಔಟ್‌ಲೇ 26 ಸಾವಿರ ಕೋಟಿ ರೂಪಾಯಿಗಳ ಯೋಜನೆ ಎಂದು ಆದಾಗ 35 46 ಕೋಟಿ ರೂಪಾಯಿಗಳ ಸೆಂಟ್ರಲ್ ಅಸಿಸ್ಟೆನ್ಸ್ ಅನ್ನು ನಮಗೆ ಕೊಟ್ಟಿದ್ದಾರೆ. ಅದೇ ಪ್ಲಾನ್ ಔಟ್‌ಲೇ ಇದ್ದಾಗ ಸೆಂಟ್ರಲ್ ಅಸಿಸ್ಟೆನ್ಸ್ ಅನ್ನು ಎಲ್ಲಿಗೆ ನಿಲ್ಲಿಸಿದ್ದಾರೆ, ಎಲ್ಲವನ್ನೂ ವಿಶೇಷವಾಗಿ ಹೇಳುತ್ತೇನೆ. ಇನ್‌ಕ್ರೀಸ್ಡ್ ರೆವಿನ್ಯೂ 1961 ರಿಂದ 65 ರ ವರೆಗೆ It has increased. Where is Rs. 897 crores and where is Rs. 697 crores? ಇವತ್ತು ಮುಂದೆ ನಮ್ಮ ಇಂಟರ್ನಲ್ ರಿಸೋರ್ಸಸ್ ಅನ್ನು ಮೊಬಿಲೈಸ್ ಮಾಡುವುದರ ಬಗ್ಗೆ ನೀವು ಹೇಳಿದ್ದೀರಿ.

In 1973-74 it is Rs. 61 crores; in 1974-75 it is Rs. 99 crores and in 1975-76 it is Rs. 119 crores.

ನಾವು ಎಷ್ಟು ಹೊರೆ ಹೊರಬೇಕು? ಹೊಸ ತೆರಿಗೆಗಳನ್ನು ಹಾಕಿ ಇಂಟರ್ನಲ್ ರಿಸೋರ್ಸಸ್ ಅನ್ನು ಮೊಬಿಲೈಸ್ ಮಾಡಬೇಕೆಂದು ಎಲ್ಲಾ ಶಕ್ತಿ ಯಿಂದ ಕೆಲಸ ಮಾಡಿದರೂ ಕೂಡ ಕೇಂದ್ರ ಸರ್ಕಾರ ತನ್ನ ಮ್ಯಾಚಿಂಗ್ ಗ್ರಾಂಟ್ ಕೊಡುವುದಕ್ಕೆ, ತಕ್ಕ ಅಸಿಸ್ಟೆನ್ಸ್ ಕೊಡತಕ್ಕದ್ದಾಗಲೀ, ಸ್ಪೆಷಲ್ ಅಸಿಸ್ಟೆನ್ಸ್ ಕೊಡತಕ್ಕದ್ದಾಗಲೀ, ಅದಕ್ಕೆ ನಮ್ಮ ಮೇಲೆ ಮನಸ್ಸಿಲ್ಲ; ಕರುಣೆಯಿಲ್ಲ. ನೀವು ಇನ್ನು ಗಂಧದ ಹಾರ ಹಾಕಿ ಅವರಿಗೆ ನಮಸ್ಕಾರ ಮಾಡುವ ಕಾಲ ಹೋಯಿತು. ಮಾನ್ಯ ನಿಜಲಿಂಗಪ್ಪನವರಿಗೆ ಹಿಂದೆ ಅವರನ್ನು ಕರೆದುಕೊಂಡು ಬಂದು ಚಿನ್ನದಲ್ಲಿ ತೂಕ ಮಾಡಿದರು. ಕರ್ನಾಟಕದವರು ಸೌಮ್ಯ ಜನತೆಯೆಂದು, ಒಂದೇ ಒಂದು ಭಾವನೆ ಯಿಂದ ನಮ್ಮನ್ನು ಇಷ್ಟು ಕೆಳಮಟ್ಟಕ್ಕೆ ಅದಿಮಿ ಕೂಡಿಸಿದರೆ, ಅದನ್ನು ನಾವು

ಪ್ರತಿಭಟನೆ ಮಾಡಲೇಬೇಕಾಗುತ್ತದೆ ಮಂತ್ರಿ ಕೆಲಸಕ್ಕೋಸ್ಕರ ಅಂಜಿ ಕೂರ ಬೇಕಾದುದು ಇಲ್ಲ, ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡು ತ್ತೇನೆ.

ಏತಕ್ಕೆಂದರೆ ಈ ಪರಿಸ್ಥಿತಿಯಲ್ಲಿ ನಾವು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ನಾಳೆ ನಾಳಿದ್ದರಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಸೆಂಟ್ರಲ್ ಅಸಿಸ್ಟೆನ್ಸ್ ಏನು ಸಿಕ್ಕಿದೆ ಅನ್ನುವುದನ್ನು ಹೇಳುತ್ತೇನೆ. ಅಥವಾ ನೀವು ಕೊಡುವುದಕ್ಕೆ ಸಾಧ್ಯವಾದರೆ ಕೊಡಿ ನಿನ್ನೆ ದಿವಸ ನಾನು ನಮ್ಮ ಹಳ್ಳಿಗೆ ಹೋಗಿದ್ದೆ. ಅಲ್ಲಿ ಆ ಹಳೆ ಪತ್ರಿಕೆಯನ್ನು ಹುಡುಕುವುದಕ್ಕೆ ಸಾಧ್ಯವಾಗಲಿಲ್ಲ. ಯು. ಪಿ. ಮತ್ತು ಇತರೇ ರಾಜ್ಯಗಳಿಗೆ ಕೊಟ್ಟಿರತಕ್ಕಂಥ ಕೇಂದ್ರ ಸಹಾಯ ಏನು ಇದೆ ಅದನ್ನು ವಿಚಾರ ಮಾಡಿ ನೋಡಿ ದರೆ ನಮ್ಮ ಕರ್ನಾಟಕವನ್ನು, ನಿರ್ಲಕ್ಷ್ಯ ಮಾಡಿದ್ದಾರೆ ಎನ್ನುವುದು ಅರ್ಥವಾಗು ತ್ತದೆ. So far as Matching Grants and special assistance are concerned, it is left to the ಮರ್ಜಿ of the Central Government. ನಿಮಗೆ ಕೇಂದ್ರ ಸರ್ಕಾರದ ಅನುಗ್ರಹ ಬೀಳಬೇಕು, ಅವರ ಆಶೀರ್ವಾದ ಬೀಳಬೇಕು. ನಿಮ್ಮ ರೈಟ್ಸನ್ನು ಎತ್ತಿ ಹಿಡಿಯುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಬೆಣ್ಣೆ ಹಚ್ಚಬೇಕು ಒಂದು ವೇಳೆ ನಿಮ್ಮ ರೈಟ್ಸನ್ನು ಎಸ್ಟಾಬ್ಲಿಶ್ ಮಾಡಿಕೊಳ್ಳುವುದಕ್ಕೆ ಹೋದರೆ ಮಹಾರಾಷ್ಟ್ರದ ವಿ. ಪಿ. ನಾಯ ಕರಿಗೆ ಆದಹಾಗೆ ಆಗಬಹುದು. ಅದು ವಿಪರೀತ ದೊಡ್ಡ ತಲೆನೋವು ಆಗುತ್ತದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಈವೊತ್ತು ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಈ ಒಂದು ಆರ್ಥಿಕಧೋರಣೆ ಬಗ್ಗೆ ಏನು ತೋರಿಸಿದ್ದಾರೋ ಅದು ತಪ್ಪು ಧೋರಣೆ ಎಂದು ಹೇಳುತ್ತೇನೆ. ಏತಕ್ಕೆಂದರೆ ಅವರು ರಾಜ್ಯ ಸರ್ಕಾರಕ್ಕೆ ಒಂದು ಆಶ್ರಯ ಕೊಡಬೇಕಾಗಿದ್ದ ಪಕ್ಷದಲ್ಲಿ ಅವರು ಆರ್ಥಿಕ ಪರಿಸ್ಥಿತಿ ಬಗ್ಗೆ ತೋರಿಸಿರತಕ್ಕಂಥ ಧೋರಣೆ ಏನು ಇದೆ ಅದು ಸಡಿಲ ವಾಗಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಆಯಾಯ ರಾಜ್ಯಗಳ ಪರಿಸ್ಥಿತಿಯನ್ನು ನೋಡಿ ಸಾಕಷ್ಟು ಹಣವನ್ನು ಒದಗಿಸಬೇಕು ಎನ್ನುವ ದೃಷ್ಟಿ ಯಿಂದ ಈ ಮಾತನ್ನು ನಾನು ಪೂರ್ವಭಾವಿಯಾಗಿ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ.

3-00 P. M.

ಇನ್ನೊಂದು ವಿಚಾರ ಹೇಳುವುದಾದರೆ ಈ ವೊತ್ತಿನ ದಿವಸ ನಮ್ಮ ಆರ್ಥಿಕ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ 1974-75 ರಲ್ಲಿ 134.61 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಮತ್ತು 1975-76ರಲ್ಲಿ 154.96 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಎಂದು. ಪ್ರೈಸ್ ರೈಸಸ್ ಇನ್ ಅಗ್ರಿಕಲ್ಚರ್ ಅಂಡ್ ಅಲೈಡ್ ಸರ್ವಿಸಸ್ 27 ಪರ್ಸೆಂಟ್ ಇದೆ. ಅದನ್ನು ಲೆಕ್ಕ ಹಾಕಿ ನೋಡಿ

(ಶ್ರೀ ಹೆಚ್. ಡಿ. ದೇವೇಗೌಡ)

ದಾಗ ಆದರ ವ್ಯಾಲ್ಯೂ 21.55 ಪರ್ಸೆಂಟ್ ಆಗುತ್ತದೆ. ಅದು ಇನ್ನೂ ಹಿಂದಕ್ಕೆ ಹೋಗಬೇಕಾಗುತ್ತದೆ. ಆದುದರಿಂದ ಈ ಬಗ್ಗೆ ಇನ್ನೂ ಹೆಚ್ಚು ಹಣ ಒದಗಿಸಬೇಕಾಗುತ್ತದೆ. ಹಿಂದೆಂದೂ ಈ ಬೆಲೆಗಳು ನೋಡಿಲ್ಲಾ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಧ್ಯಾಕ್ಷಿಣಿಯವರೇ, ಇನ್ನೊಂದು ವಿಚಾರ ಹೇಳುವುದಾದರೆ ಈವೊತ್ತು ನಮ್ಮ ರಾಜ್ಯದಲ್ಲಿ ಮೂಲತಃ ಇರತಕ್ಕಂಥಾದ್ದು ಬೃಹತ್ ನೀರಾವರಿ ಯೋಜನೆ ಹಾಗೂ ವಿದ್ಯುತ್ ಯೋಜನೆಗಳು. ಈ ಬಗ್ಗೆ ಕೆಲವರು ತಮ್ಮದೇ ಆದಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಇದು ಯಾವುದೇ ಒಂದು ಭಾಗಕ್ಕೇ ಆಗಲಿ, ಯಾವುದೇ ಒಂದು ವರ್ಗದ ಜನರಿಗೇ ಆಗಲಿ ಈ ನೀರಾವರಿ ಅನುಕೂಲವಾಗುತ್ತದೆ ಎನ್ನುವ ಒಂದು ಧೋರಣೆ ಇಟ್ಟುಕೊಂಡು ಮಾತನಾಡುವುದಾದರೆ, ಅದನ್ನು ತಾವು ಅರ್ಥ ಮಾಡಿಕೊಳ್ಳುವುದಾದರೆ ಕಡು ಬಡತನ, ಮತ್ತು ಶಾಶ್ವತವಾದ ಬಡತನ ರಾಜ್ಯಕ್ಕೆ ತಪ್ಪಿದ್ದಲ್ಲ ಅನ್ನುವ ಮಾತನ್ನು ಹೇಳುತ್ತೇನೆ. ಈವೊತ್ತು ನಮ್ಮಲ್ಲಿ ಏನು ಮನೋಭಾವನೆ ಇದೆ ಎಂದರೆ ರಾಜ್ಯದ ಏಳಿಗೆ ಎಲ್ಲಿ ಕೈ ಬಿಡಬೇಕಾಗುತ್ತದೋ ಎನ್ನುವ ಮನೋಭಾವನೆ ಇದೆ. ಏತಕ್ಕೆಂದರೆ ಈವೊತ್ತಿನ ದಿವಸ ತಾವು ಭೂಸುಧಾರಣೆ ಜಾರಿಗೆ ತಂದಿರುವುದರಿಂದ ನಮ್ಮ ರಾಜ್ಯದಲ್ಲಿ ಯಾರೂ ಶ್ರೀಮಂತರಾಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಬೃಹತ್ ಯೋಜನೆಗಳಿಗೆ ಹಣವನ್ನು ವಿನಿಯೋಗಿಸದ ಪಕ್ಷದಲ್ಲಿ ತಪ್ಪು ಕಲ್ಪನೆ ಇಟ್ಟುಕೊಂಡು ಮಾತನಾಡುವುದು ಯೋಗ್ಯವಲ್ಲವೆಂದು ಮಾನ್ಯ ಮಿತ್ರರುಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕಾಳೀನದಿ ಯೋಜನೆ ಬಗ್ಗೆ ಹೇಳುವುದಾದರೆ ನಾಲ್ಕು ಬಡ್ಜೆಟ್ ಭಾಷಣದಲ್ಲೂ ಕೇಂದ್ರ ಸರ್ಕಾರದವರ ಒಂದು ಆಶಯ ಇಟ್ಟುಕೊಂಡು ಹೇಳಿದ್ದೀರಿ. ಆದರೆ ಈ ಕಡೆ ಅವರ ಲಕ್ಷ್ಯ ಬಂದ ಹಾಗೆ ಕಾಣಲಿಲ್ಲಾ. ಪಾರ್ಲಿಮೆಂಟ್‌ನಲ್ಲೂ ಕೂಡ ಈ ಬಗ್ಗೆ ಉತ್ತರ ಹೇಳಿದ್ದಾರೆ. ಕಾಳೀನದಿ ಬಗ್ಗೆ ಸ್ಪೆಷಲ್ ಅಸಿಸ್ಟೆನ್ಸ್ ಕೊಡುವ ಆಲೋಚನೆ ಮಾಡಿಲ್ಲಾ ಎಂದು ಈವೊತ್ತಿನ ದಿವಸ ಆ ಯೋಜನೆಗೆ ಕೇಂದ್ರ ಸರ್ಕಾರದ ಸ್ಪೆಷಲ್ ಅಸಿಸ್ಟನ್ಸ್ ಆಗಲಿ ಅಥವಾ ವರ್ಲ್ಡ್ ಬ್ಯಾಂಕ್ ಅಸಿಸ್ಟನ್ಸ್ ಆಗಲಿ ಅಥವಾ ಐ. ಎ. ಎಫ್. ಫಂಡ್‌ನಿಂದಾಗಲಿ ಒದಗಿಸುವ ಬಗ್ಗೆ ಏನು ಒಂದು 'ಚ' ಕಾರ ಶಬ್ದವನ್ನೂ ಎತ್ತಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ನ್ಯಾಷನಲ್ ಯೋಜನೆಯನ್ನಾಗಿ ಪರಿವರ್ತನೆ ಮಾಡುವುದಕ್ಕೆ ಮೊದಲಿನಿಂದಲೂ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡು ಬಂದಿದ್ದೀರಿ. ಈ ಕೃಷ್ಣ ಮೇಲ್ದಂಡೆ ಯೋಜನೆ ರಾಷ್ಟ್ರೀಯ ಮಹತ್ವ ಯೋಜನೆ ಎಂದು ತಮ್ಮ

ಹಿಂದಿನ ಭಾಷಣದಲ್ಲಿ ಹೇಳಿದ್ದೀರಿ. ಅದನ್ನು ಬೇಕಾದರೆ ತಮಗೆ ನೆನಪು ಮಾಡಿ ಕೊಡುತ್ತೇನೆ. ನಿಮ್ಮ ಆಶೆಯು ಕನಸು ನನಸಾಗಲಿಲ್ಲಾ; ನನಸಾಗುವುದಕ್ಕೂ ಸಾಧ್ಯವಿಲ್ಲಾ. ಪ್ರತಿ ವರ್ಷವೂ ಒಂದೊಂದು ವರ್ಷ ಒಬ್ಬೊಬ್ಬರಿಗೆ ಅಂದರೆ ಡಿ ಪಿ. ಧರ್ ಅವರಿಗೆ ಒಂದು ವರ್ಷ, ಟಿ. ಎ. ಪೈ ಅವರಿಗೆ ಒಂದು ವರ್ಷ, ಚವ್ಹಾಣ್ ಅವರಿಗೆ ಒಂದು ವರ್ಷ ಅಭಿನಂದನೆಯನ್ನು ಈ ಬಗ್ಗೆ ಸಲ್ಲಿಸುತ್ತಿದ್ದೀರಿ. ಈವೊತ್ತು ಒಂದು ವಿಷಯ ತಮ್ಮ ಗಮನಕ್ಕೆ ತರುವುದಾದರೆ ಕೇಂದ್ರಸರ್ಕಾರ ರಾಜ್ಯ ಸರ್ಕಾರದ ಬೃಹತ್ ಯೋಜನೆಗಳ ಬಗ್ಗೆ ಅರ್ಥ ಮಾಡಿಕೊಂಡಿಲ್ಲಾ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ ಕೇಂದ್ರದವರು ರಾಜ್ಯ ಸರ್ಕಾರದ ಬಗ್ಗೆ ಒಂದು ಅಸಡ್ಡೆ ಮನೋಭಾವನೆ ಇಟ್ಟುಕೊಂಡಿದ್ದಾರೆ ಎಂದು ಹೇಳಿದರೆ ತಪ್ಪೇನೂ ಇಲ್ಲ. ಶ್ರೀಮಾನ್ ಚೆನ್ನಬಸಪ್ಪನವರು ನಮ್ಮ ರಾಜ್ಯದಲ್ಲಿ ಅಟಾಮಿಕ್ ಪವರ್ ಮತ್ತು ಥರ್ಮಲ್ ಪವರ್ ಈ ಎರಡು ಯೋಜನೆಗಳೂ ಕೂಡ ಬರುವುದಕ್ಕೆ ಸಾಧ್ಯತೆ ಇದೆ ಎಂದು ಹಿಂದೆ ಒಂದು ಸಾರಿ ಭಾಷಣ ಮಾಡಿದ್ದರು. ಅದರ ಬಗ್ಗೆ ಈಗ ಒಂದು 'ಚ' ಕಾರ ಶಬ್ದವೂ ಇಲ್ಲ ಎಂದು ಈ ಸಂದರ್ಭದಲ್ಲಿ ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ಹೇಳುವುದಾದರೆ 1972ರ ಭಾಷಣದಲ್ಲಿ ಅವರು ಹೇಳಿದ್ದಾರೆ. ಅವರು ಬಂದ ಹೊಸ ಹುರುಪಿನಲ್ಲಿ ಇದರ ಶಂಕುಸ್ಥಾಪನೆಯನ್ನು ಮಾಡಿದರು. ಮತ್ತು ಇದರ ಶಂಕುಸ್ಥಾಪನೆ ಮಾಡಿದ ಮೇಲೆ ದೇಶದ ಜನರನ್ನು ಒಂದು ರೀತಿ ಮೋಸ ಮಾಡಿದರು. ಪೊಲಿಟಿಕಲ್ ಎಕ್ಸ್‌ಪ್ಲಾಯಿಟೇಷನ್ ರೀತಿ ಮಾಡಿದರು. ಆ ಜನರನ್ನು ಇಗ್ನೋರ್ ಮಾಡಿ ಎಕ್ಸ್‌ಪ್ಲಾಯಿಟೇಷನ್ ಮಾಡಿದರು. According to my Hon. Friend, Sri Rajasekhara Murthy, now, it is pegged at the same level. ಅಂಥಾ ಜನ ಇಲ್ಲಿಗೆ ಬಂದಿದ್ದಾರೆ. ಇದರ ಬಗ್ಗೆ ಮಾತನಾಡುವುದಕ್ಕೆ ಯಾವುದೇ ಶಕ್ತಿ ಉಳಿದಿಲ್ಲ.

ಆಮೇಲೆ ನಮ್ಮ ಅರ್ಥಿಕ ಮಂತ್ರಿಗಳು 1974 ರಲ್ಲಿ ಮಾಡಿದ ಬಡ್ಜೆಟ್ ಭಾಷಣದಲ್ಲಿ ನಮ್ಮ ಇನ್‌ವೆಸ್ಟುಮೆಂಟು ಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳವರೆಗೆ ಹೋಗುತ್ತದೆ ಎಂದು ಹೇಳಿದರು. ಇದರ ಬಗ್ಗೆ ನಮ್ಮ ಶ್ರೀನಿವಾಸಲು ನಾಯ್ಡುರವರು ರಾಜ್ಯಪಾಲರವರ ಭಾಷಣದ ಬಗ್ಗೆ ಮಾತ ನಾಡುತ್ತಾ ಅರನೇ ಪಂಚವಾರ್ಷಿಕ ಯೋಜನೆ ಮಾಡಿದರೂ ಇದನ್ನಂತೂ ಖಂಡಿತ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು. ಹಾಗೇನೇ ಪೋಸ್ಟು ಗ್ರ್ಯಾಜುಯೇಟು ಸ್ಕೀಂ ಸಂಬಂಧವಾಗಿ ರಾಜ್ಯ ಸರಕಾರ ಯೋಜನೆ ಮಾಡಿ ಯು. ಜಿ. ಸಿಗೆ. ಸಹಾಯಕ್ಕಾಗಿ ಕೇಳಿದಾಗ ಇದನ್ನು ಯು. ಜಿ ಸಿ. ಯವರು ನಿರಾಕರಿಸಿದರು ಎಂದು ನಮಗೆ ತಿಳಿದು ಬರುತ್ತದೆ. ಹಾಗೇನೇ ಇನ್ನು ಕೆಲವು ದೊಡ್ಡ ನೀರಾವರಿ

(ಶ್ರೀ ಹೆಚ್. ಡಿ. ದೇವೇಗೌಡ)

ಯೋಜನೆಗಳ ಕೆಲಸಗಳೂ ಆಗದೆ ಇದರ ಕೆಲಸಗಳು ಸ್ಥಗಿತವಾಗಿವೆ ಎಂದು ಹೇಳಿದರೂ ಅದು ತಪ್ಪಾಗಲಿಕ್ಕಿಲ್ಲ: ಯಾವ ಕೆಲಸಗಳೂ ಇನ್ನೂ ಪೂರ್ಣವಾಗಿ ಆಗಲಿಲ್ಲ. ಇದರ ಬಗ್ಗೆ ತಿಳಿಸಬೇಕೆಂದು ಕೇಳುತ್ತೇನೆ. ಇನ್ನು ಲ್ಯಾಂಡು ರಿಫಾರಂಸ್ ಬಗ್ಗೆ ಈ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿಲ್ಲ. ಭೂಸುಧಾರಣೆ ಜಾರಿಗೆ ಬಂದಿರುವುದರಿಂದ ಚಿಕ್ಕ ಜಮೀನುಳ್ಳ ಹಿಡುವಳಿದಾರರು ಒಂದು ಎಕರೆ ಇರುವವರು, 30 ಗುಂಟೆ ಇರುವವರು ಹಾಗೂ ಇನ್ನೂ ಕಡಿಮೆ ಭೂಮಿ ಉಳ್ಳವರಿಗೆ ಇರುವ ಜಮೀನನ್ನು ಸರಕಾರ ಪಡೆದುಕೊಳ್ಳುವಾಗ ಇವರಿಗೆಲ್ಲಾ ಸರಕಾರ ಹಣ ಕೊಡಬೇಕಾಗುತ್ತದೆ ಇದಕ್ಕಾಗಿ ಎಲ್ಲೂ ಇಂದಿನ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿಲ್ಲ. ಇದಕ್ಕೆ ಕಾರಣವೇನು ? ಇಂದು ಸಣ್ಣ ಸಣ್ಣ ಭೂಮಿ ಇಟ್ಟುಕೊಂಡಿರುವವರು ಅವರ ಭೂಮಿಯನ್ನು ತೆಗೆದುಕೊಂಡರೆ ಅವರು ಜೀವನ ಮಾಡುವುದಾದರೂ ಹೇಗೆ ? ಇದರ ಬಗ್ಗೆ ತಾವು ಯೋಚನೆ ಮಾಡಲಲ್ಲ. ಮಾನ್ಯ ಮಂತ್ರಿಗಳು ಪ್ರವಾಸ ಹೋದಾಗ ಅವರು ಹೋದ ಕಡೆಗಳಲ್ಲಿ ಟಿ. ಬಿ. ಗಳಲ್ಲಿ ಇಳಿದುಕೊಳ್ಳುತ್ತಾರೆ ಮತ್ತು ಅವರನ್ನು ಅಲ್ಲಿರುವ ಬಿ. ಡಿ. ಒ. ಗಳು ಹಾಗೂ ಇನ್ನಿತರ ಅಧಿಕಾರಿಗಳು ನೋಡಿಕೊಳ್ಳುತ್ತಾರೆ. ಅವರಿಗೇನೂ ಕಷ್ಟ ತೋರುವುದಿಲ್ಲ. ಆದರೆ ಬಡ ಜನರು ಅತ್ಯಂತ್ಯ ದರಿದ್ರ ಸ್ಥಿತಿಯಲ್ಲಿರುವವರು ಭೂಮಿಯನ್ನು ಕಳೆದುಕೊಂಡು ಇರುವವರಿಗೆ ಸಾಕಷ್ಟು ದ್ರವ್ಯ ಸಹಾಯ ಮಾಡಬೇಕಾದ್ದು ಅಗತ್ಯ, ಇದರ ಬಗ್ಗೆ ವಿವರಣೆ ಕೊಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ಮಾನ್ಯ ಆರ್ಥಿಕ ಮಂತ್ರಿಗಳು ಬಳ್ಳಾರಿಯಲ್ಲಿ ಹೌಸಿಂಗ್ ಸ್ಕೀಂ ಎಂದು ದೊಡ್ಡದಾಗಿ ಪ್ರಚಾರ ಮಾಡಿದರು. ಇದನ್ನು ಅವರು 1973ರಲ್ಲಿ ಅರ್ಥ ಸಚಿವರು ಮಾಡಿರುವ ಬಡ್ಜೆಟ್ಟು ಭಾಷಣದಲ್ಲಿ ಹೇಳಿದ್ದಾರೆ. ( ವಾಲ್ಯೂಂ 11 ನಂಬರು 1 ರಿಂದ 10 7-3-1973ರಲ್ಲಿ ಮಾಡಿದ ಬಾಷಣ) "ಪ್ರಸಕ್ತ ವರ್ಷದಲ್ಲಿ ಎರಡು ಸಾವಿರ ಮನೆಗಳನ್ನು ಕಟ್ಟಿಸುವ ಕಾರ್ಯಕ್ರಮಕ್ಕೆ ಐದು ಕೋಟಿ ರೂಪಾಯಿ ಒದಗಿಸಿದ್ದೇವೆ. ಕಡಿಮೆ ವೆಚ್ಚದ 50 ಸಾವಿರ ಮನೆಗಳನ್ನು ಕಟ್ಟಿಸುವುದಕ್ಕೆ ಒಂದೊಂದು ಮನೆಗೆ 2500 ರೂಪಾಯಿನಂತೆ ಸುಮಾರು 10 ಕೋಟಿ ರೂಪಾಯಿ ವೆಚ್ಚ ತಗಲುವುದು...." ಹೀಗೆ ಒಂದು ಕಡೆ ಹತ್ತು ಕೋಟಿ ರೂಪಾಯಿ ಎನ್ನುತ್ತಾರೆ. ಇನ್ನೊಂದು ಕಡೆ ಶೇಕಡಾ ಆರರಷ್ಟು ಸಹಾಯ ಮಾಡಿ ಸುಮಾರು ಐದು ಕೋಟಿ ರೂಪಾಯಿಯಷ್ಟು ಹಣ ಒದಗಿಸುತ್ತೇವೆನ್ನುತ್ತಾರೆ. ಹೀಗೆ ಒಂದಕ್ಕೊಂದು ಅರ್ಥವಿಲ್ಲದೆ ಹೇಳಿದರೆ ಇದು ಅರ್ಥವಿಲ್ಲದ ಕಲ್ಪನೆ ಎಂದು ಹೇಳಬೇಕಾಗುತ್ತದೆ. ಇನ್ನು 74-75 ರಲ್ಲಿ ಎರಡು ಸಾವಿರ ಎಂದು ಹೇಳುತ್ತಾರೆ ಮತ್ತು 75-76 ರಲ್ಲಿ 26 ಸಾವಿರ ಎಂದು ಹೇಳುತ್ತಾರೆ. ಇದು ಒಂದಕ್ಕೊಂದು ಸಂಬಂಧವಿಲ್ಲದಂತಾಗಿದೆ.

ಇನ್ನೊಂದು ವಿಚಾರ ಸರಕಾರದ ಗಮನಕ್ಕೆ ತರಬೇಕಾಗಿದೆ. ಬಾಂಗ್ಲ ಜನತೆಗೆ ಸಹಾಯ ಮಾಡಬೇಕೆಂದು ಒಂದು ತೆರಿಗೆ ಹಾಕಿ ಅದನ್ನು ಹಿಂದೆ ಜಾರಿಗೆ ತಂದು

ಇತ್ತು. ಆದರೆ ಅಲ್ಲಿನ ಸ್ಥಿತಿ ಅನುಕೂಲವಾದಾಗ ಇಲ್ಲಿ ಆ ತೆರಿಗೆ ತೆಗೆಯದೆ ಇದನ್ನು ಒಂದು ನಿರ್ದಿಷ್ಟವಾದ ಯೋಜನೆಗೆ ಉಪಯೋಗ ಮಾಡಬೇಕೆಂದು ಈ ಸಭೆ ಒಪ್ಪಿಗೆ ಕೊಟ್ಟಿತ್ತು. ಇದುವರೆಗೆ ಇದರಿಂದ ಬಂದ ಹಣ ಏನಾಯಿತು ? ಎಲ್ಲಿಗೆ ಹೋಯಿತು ? ಇದನ್ನು ನಿರ್ದಿಷ್ಟವಾಗಿ ಇಂತಹ ಯೋಜನೆಗಾಗಿಯೇ ಉಪಯೋಗ ಮಾಡಬೇಕೆಂದು ಸೂಚನೆಗಳನ್ನು ನಾವು ಇಲ್ಲಿ ಕೊಟ್ಟಿರಲಿಲ್ಲವೇ ? ಯಾವ ಬಾಬಿಗಾಗಿ ಈಗ ಇದನ್ನು ಖರ್ಚು ಮಾಡಿದ್ದೀರಿ ? ಈ ತೆರಿಗೆ ಬರೀ ಕಾಂಗ್ರೆಸ್ ಆರ್ ಪಕ್ಷ ಕೊಟ್ಟಿದ್ದಲ್ಲ. ದೇಶದ ಎಲ್ಲ ಜನರೂ ಸೇರಿ ಸರಕಾರಕ್ಕೆ ಹಣ ಕೂಡಿಸಿಕೊಟ್ಟಿದ್ದಾರೆ. ಇದಕ್ಕೆ ಹಣವನ್ನು ಶ್ರೀಮಾನ್ ದೇವರಾಜ ಅರಸ್ ರವರು ಅವರ ಊರಿನಿಂದ ತಂದು ಕೊಡಲಿಲ್ಲ, ನಾನು ನಮ್ಮ ಊರಿಂದ ತಂದು ಕೊಟ್ಟಿಲ್ಲ. ಇದು ಜನರ ಹಣ.

It is the money paid by the Tax payers. I want to know what has happened to this money?

ಇದರ ಬಗ್ಗೆ ಸಭೆಯಲ್ಲಿ ವಿವರಣೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಸ್ಲಂ ಕ್ಲಿಯರೆನ್ಸ್ ಬೋರ್ಡು ಮಾಡಿ ಇದಕ್ಕೆ 1.5 ಕೋಟಿ ರೂಪಾಯಿಗಳ ಹಣ ಒದಗಿಸಿದ್ದರು. ಆದರೆ ಇದುವರೆಗೆ ಸುಮಾರು 27 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ ಎಂದರೆ ಈ ಯೋಜನೆ ಉದ್ದೇಶ ಏನಾಯಿತು ? 1972–73ರಲ್ಲಿ ಸ್ಲಂ ಕ್ಲಿಯರೆನ್ಸ್ ಬೋರ್ಡು ಮಾಡಲು ಶ್ರೀಮತಿ ಇಂದಿರಾ ಗಾಂಧಿಯವರನ್ನು ಕರೆದುಕೊಂಡು ಬಂದು ಶಂಕುಸ್ಥಾಪನೆ ಮಾಡಿಸಿದ ಕಾರಣವಾದರೂ ಏನು ? ಇದುವರೆಗೆ ಏಕೆ ಇದರ ಕೆಲಸ ಕಾರ್ಯಗಳಾಗಲಿಲ್ಲ. ಇದು ತಾತ್ಕಾಲಿಕವಾಗಿ ಮಾಡುವ ಯೋಜನೆಯೇ ? ಈ ರೀತಿ ಜನತೆಗೆ ಮಾಡುವುದು ನೋಡಿದರೆ ಇದು ಬರೀ ಮೋಸ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ಸರಕಾರ ಉತ್ತರ ಕೊಡುವಾಗ ವಿವರಣೆ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕನ್ನಡ ಫಿಲಂಗಳ ಬಗ್ಗೆ ಇದುವರೆಗೆ 50 ಸಾವಿರ ರೂಪಾಯಿ ಸಬ್‌ಸಿಡಿ ಕೊಡುತ್ತಿದ್ದರು. ಹಠಾತ್ತಾಗಿ ಈ ಸಾಲಿನಲ್ಲ ಒಂದು ಲಕ್ಷ ರೂಪಾಯಿಗಳು ಕಪ್ಪು ಬಿಳುಪು ಚಿತ್ರಗಳಿಗೆ ಹಾಗೂ ಕಲರು ಫಿಲಂ ಗಳಿಗಾಗಿ ಒಂದೂವರೆ ಲಕ್ಷ ರೂಪಾಯಿಗಳನ್ನು ಈ ಒಂದು ಬಜೆಟ್ಟಿನಲ್ಲಿ ಒದಗಿಸಿದ್ದಾರೆ. ಈ ರೀತಿ ಹಣವನ್ನು ಒದಗಿಸಲು ಯಾರು ವಶೀಲಿಬಾಜಿ ಮಾಡಿದರು ? ಇಷ್ಟು ಬೇಗನೆ 50 ಸಾವಿರದಿಂದ ಸುಮಾರು ಒಂದು ಹಾಗೂ ಒಂದೂವರೆ ಲಕ್ಷ ರೂಪಾಯಿಗಳಿಗೆ ಏರಿಸಲು ಇದ್ದಂತಹ ವಿಶೇಷವಾದ ಕಾರಣಗಳಾದರೂ ಏನಿತ್ತು ?

(ಶ್ರೀ ಹೆಚ್. ಡಿ. ದೇವೇಗೌಡ)

There are still more things to be done.

ಈ ರೀತಿ ಮಾಡಬಾರದು. ಸರಕಾರ ತನ್ನ ಹಣವನ್ನು ಖರ್ಚು ಮಾಡುವಾಗ ಒಂದು ರೀತಿಯಾದ ಇತಿಮತಿಗೊಳಗಾಗಿ ಖರ್ಚು ಮಾಡಬೇಕಾಗುತ್ತದೆ ಇಂದು ನಮ್ಮ ರಾಜ್ಯದಲ್ಲಿ ಅನೇಕ ಕಲಾವಿದರು ಒಂದು ತುತ್ತು ಅನ್ನ ಇಲ್ಲದೆ ಬಹಳ ಕಷ್ಟದಿಂದ ಜೀವನ ಮಾಡುತ್ತಿದ್ದಾರೆ. ಇಂತಹವರಿಗೆ ಸರಕಾರ ಏನಾದರೂ ಸಹಾಯ ಮಾಡಬಾರದೇ ? ಬೀದಿಯಲ್ಲಿ ಇಂದು ಇಂತಹ ಕಲಾವಿದರುಗಳು ಭಿಕ್ಷೆ ಬೇಡಬೇಕಾಗಿ ಬಂದಿದೆ. ಸರಕಾರದಲ್ಲಿರುವ ಮಂತ್ರಿಗಳೇನೋ ಖ್ಯಾತ ಸಿನಿಮಾ ನಟರೊಡನೆ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಕೃಷ್ಣಾರವರು, ಶ್ರೀಮತಿ ಹೇಮಮಾಲಿನಿ ಹಾಗೂ ಇನ್ನಿತರ ನಟರುಗಳೊಡನೆ ಫೋಟೋ ಹಾಕಿಸಿಕೊಂಡು ಇರುವುದು ಪತ್ರಿಕೆಗಳಲ್ಲಿ ಬರುತ್ತಿವೆ. ನಾವೂ ನೋಡುತ್ತಿದ್ದೇವೆ.

ಇಂದು ನಮ್ಮ ರಾಜ್ಯದಲ್ಲಿ ಬಹಳ ಕಲಾವಿದರು ಹೀನಸ್ಥಿತಿಯಲ್ಲಿದ್ದಾರೆ. ಹಲವಾರು ಜನರಿದ್ದಾರೆ. ನಮ್ಮ ರಾಜ್ಯದಲ್ಲಿ ಶ್ರೀಮಾನ್ ಆರ್. ನಾಗೇಂದ್ರ ರಾಯರು ಎನ್ನುವವರು ಇದ್ದಾರೆ. ಹಾಗೇ ನಮ್ಮ ಊರಿನಲ್ಲಿ ಒಬ್ಬರು ವಯಸ್ಸಾಗಿರುವವರು ಹೆಂಗಸರು ಕಲಾವಿದರಾಗಿದ್ದವರು ದೇವಮ್ಮ ಎನ್ನುವವರು, ಬಹಳ ಹೀನಸ್ಥಿತಿಯಲ್ಲಿದ್ದಾರೆ. ಇವರುಗಳು ಜೀವನ ನಡೆಸುವುದೇ ಬಹಳ ಕಷ್ಟವಾಗಿದೆ. ಇಂತಹವರಿಗೆ ತಿಂಗಳಿಗೆ ಐವತ್ತು ಇಲ್ಲವೇ ನೂರು ರೂಪಾಯಿಗಳಷ್ಟು ಸಹಾಯ ಧನವನ್ನು ನಮ್ಮ ಸರಕಾರ ಏಕೆ ಕೊಡಬಾರದು ? ಹಾಗೆ ಮಾಡದೆ ಇದ್ದಕ್ಕಿದ್ದಂತೆ ಇಲ್ಲಿ ನೀವು ಫಿಲಂ ಡೆವಲಪ್‌ಮೆಂಟಿಗಾಗಿ ಹೆಚ್ಚು ಮಾಡಲು ಸರಕಾರದ ಮೇಲೆ ಒತ್ತಡ ತಂದವರಾದರೂ ಯಾರು ? ಇದಕ್ಕೇನು ಕಾರಣ ಎನ್ನುವುದು ನನಗೆ ಗೊತ್ತಿಲ್ಲ, ಸುಮಾರು ಇಪ್ಪತ್ತು ಮೂವ್ವತ್ತು ವರ್ಷಗಳಿಂದ ಬಹಳ ಕಷ್ಟಪಡುತ್ತಿರುವ ಜನ ಒಂದು ಹೊತ್ತು ಕೂಳಿಗೂ ಗತಿ ಇಲ್ಲದಂತಹ ಬಡ ಜನರು ನಮ್ಮ ದೇಶದಲ್ಲಿದ್ದಾರೆ. ಇವರಿಗೆ ತಿಂಗಳಿಗೆ ಒಂದು ನೂರು ಇಲ್ಲವೇ 500 ರೂಪಾಯಿಗಳಷ್ಟು ವೇತನವನ್ನಾದರೂ ಕೊಡಬಹುದು. ಇದಕ್ಕಾಗಿ ನಾನು ಹೇಳುವುದು ಇಂತಹ ಕೆಲಸ ಮಾಡಲು ಹೋಗಬೇಡಿ ಮತ್ತು ಇದರಲ್ಲಿ ಯಾವ ರೀತಿಯ ಉತ್ತೇಜನವೂ ಇಲ್ಲ. ಇದನ್ನು ಖಂಡಿತ ಕೊಡಬಾರದು ಎಂದು ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ.

ಆ ಮೇಲೆ ಹೊಸ ತೆರಿಗೆಗಳನ್ನು ಸರ್ಕಾರ ಏನು ಹಾಕಿದ್ದಾರೆ ಅದರ ಬಗ್ಗೆ ನಾನೊಂದು ಮಾತನ್ನು ಹೇಳಬೇಕಾಗುತ್ತದೆ. ಮಾನ್ಯ ಘೋರ್ಪಡೆಯವರು ಈ ಸಭೆಯಲ್ಲಿ ಇರಬೇಕಾಗಿತ್ತು. ಅವರು ಇಲ್ಲದೇ ಇರುವುದರಿಂದ ಮಾನ್ಯ ಚನ್ನಬಸಪ್ಪನವರಾದರೂ ಬರೆದುಕೊಳ್ಳಬೇಕು. ಮೊದಲನೆಯದಾಗಿ ನಾವು

ಇವತ್ತು ಭೂಮಿ ಆದಾಯದ ಮೇಲೆ ವರಮಾನ ತೆರಿಗೆಯನ್ನು ಹಾಕಿದ್ದೇವೆಂದು ಹೇಳಿದ್ದೀರಿ. ಇದರ ಬಗ್ಗೆ ಪ್ರಥಮವಾಗಿ ಸರ್ಕಾರದಿಂದ ವಿವರಣೆಯನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕೇಂದ್ರಸರ್ಕಾರದವರು ವರಮಾನ ತೆರಿಗೆಯನ್ನು ಅವರು ಅಸ್ಸೆಸ್ ಮಾಡುವಾಗ ಜನರಲ್ ಇನ್‌ಕಂ ಟ್ಯಾಕ್ಸನ್ನು ಅಸ್ಸೆಸ್ ಮಾಡುವಾಗ ವ್ಯವಸಾಯ ಉತ್ಪಾದನೆಯನ್ನೂ ಕೂಡ ಇದಕ್ಕೆ ಸೇರಿಸಿದ್ದಾರೆ. ಆ ರೀತಿ ಒಂದು ಕಡೆ ಅಸ್ಸೆಸ್ ಮಾಡುತ್ತಾರೆ, ಮತ್ತೆ ರಾಜ್ಯ ಸರ್ಕಾರದವರು ಇವತ್ತು ಪುನಃ ವ್ಯವಸಾಯದ ರಂಗದಲ್ಲಿ ತೆರಿಗೆಯನ್ನು ಹಾಕತಕ್ಕಂಥದಕ್ಕೆ ಇವತ್ತು ಎಷ್ಟು ದೂರ ಹೋಗಿದ್ದೀರಿ ಎಂದರೆ ಅದು ಯಾವುದೇ ಬೆಳೆ ಇರಲಿ, ರಾಗಿ ಇರಲಿ, ಜೋಳ ಇರಲಿ, ಯಾವುದೇ ಬೆಳೆ ಬೆಳೆಯಲಿ, ಡಿಟರ್ಮಿನೇಷನ್ ಆಫ್ ರೇಟ್ಸ್ ಇದನ್ನು ಕೂಡ ಗಮನಕ್ಕೆ ತೆಗೆದು ಕೊಳ್ಳುತ್ತಾರೆ. ಮಾನ್ಯ ಬಂಗಾರಪ್ಪನವರು ಮತ್ತು ಕಾಗೋಡು ತಿಮ್ಮಪ್ಪನವರು ಬೆಟರ್‌ಮೆಂಟ್ ಲೆವಿ ಬಗ್ಗೆ ಒಳ್ಳೆಯ ತೀರ್ಮಾನವನ್ನು ಸರ್ಕಾರದವರು ಕೊಟ್ಟರು ಎಂದು ಸಮಾಧಾನ ಪಟ್ಟುಕೊಂಡು. ತಮ್ಮ ಸೋಶಿಯಲಿಸ್ಟ್ ತತ್ವವನ್ನು ಹೇಳಿದ್ದಾರೆ, ಅದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಿಲ್ಲ. ಆದರೆ ನಾನು ನಮ್ಮ ಹಳ್ಳಿಗೆ ಹೋಗಿದ್ದೆ. ಒಂದು ಪಿಕಪ್ ಹಿಂಭಾಗದಲ್ಲಿ ಎಕರೆ ತರೀ ಜಮೀನು ಅಲ್ಲಿದೆ. ಸಣ್ಣ ಹಳ್ಳಿನೀರು ಬಂದರೆ ಬಂತು ಇಲ್ಲದಿದ್ದರೆ ಇಲ್ಲ. ಅಂಥ ಜಮೀನಿಗೆ ಬೆಟರ್‌ಮೆಂಟ್ ಲೆವಿ ಎಂದು 807 ರೂಪಾಯಿಗಳನ್ನು ಹಾಕಿ ನೋಟೀಸ್ ಕೊಟ್ಟಿದ್ದಾರೆ. ಇನ್ನು ವಾಟರ್ ರೇಟ್ 205 ರೂಪಾಯಿಗಳ ನೋಟೀಸ್ ಕೊಟ್ಟಿದ್ದಾರೆ. ಯಾರು ಕೊಟ್ಟಿರುವುದು ಸರ್ಕಾರದವರೇ, ಬೇರೆ ಯಾರೂ ನೋಟೀಸ್ ಕೊಡಲಿಲ್ಲ. ಇನ್ನು ಲ್ಯಾಂಡ್ ರೆವಿನ್ಯೂ 40 ರೂಪಾಯಿಗಳು, ಹಾಗೂ ಮ್ಯೇನ್‌ಟೆನನ್ಸ್ ಚಾರ್ಜ್ 36.75 ಪೈಸೆ ಒಟ್ಟು 1099.90 ಗಳಷ್ಟನ್ನು ಬರೀ 3 ಎಕರೆಗಳಿಗೆ ಹಾಕಿದ್ದಾರೆ. ನಾವು ಈ ಸಭೆಯಲ್ಲಿ ಈ ಚರ್ಚೆ ಮಾಡುವಾಗ ಈ ಕಡೆಯವರು ಹೇಳತಕ್ಕಂಥ ತೀವ್ರತೆಯನ್ನು ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ಕೇವಲ ಏನೋ ಒಂದು ಉತ್ತರವನ್ನು ಕೊಡುವುದು ಬಲ್ಲ. 5,000 ರೂಪಾಯಿಗಳಿಗಿಂತ ಕಡಿಮೆ ವರಮಾನ ಬರತಕ್ಕಂಥವರಿಗೆ, 3 ಎಕರೆ 4 ಎಕರೆಗಳವರಿಗೆ ಒಂದು ಸ್ಕೇಲ್ ಕೊಟ್ಟುಕೊಂಡು ಬಂದಿದ್ದೇವೆ, ಅವರಿಗೆ 1.9 ಪರ್ಸೆಂಟ್, 4 ಪರ್ಸೆಂಟ್ ಬರುತ್ತದೆ ಎನ್ನತಕ್ಕಂಥ ವಿಷಯ ಆ ಮೇಲೆ ಚರ್ಚೆಗೆ ಬರಬೇಕಾಗುತ್ತದೆ, ಆ ವಿಷಯವನ್ನು ಆ ಮೇಲೆ ತಿಳಿಸುತ್ತೇನೆ. ತಾವು ಇದಕ್ಕೆ ಉತ್ತರ ಕೊಡಬೇಕು. 7 ಎಕರೆ ಇರತಕ್ಕಂಥ ಜಮೀನಿಗೆ ಯಾವ ಪ್ರಾಜೆಕ್ಟಿನಿಂದಲೂ ನೀರು ಸಿಕ್ಕುವುದಿಲ್ಲ, ಅಂಥ ಪ್ರಾಜೆಕ್ಟೂ ನಮ್ಮಲ್ಲಿ ಇಲ್ಲ. ಅಂಥ ಜಮೀನಿಗೆ 800 ಚಿಲ್ಲರೆ ರೂಪಾಯಿ ಬೆಟರ್‌ಮೆಂಟ್ ಲೆವಿಯನ್ನು ಹಾಕಿದ್ದಾರೆ ಅದು ಯಾರಿಗೆ ನನಗೇ ಕೊಟ್ಟಿರತಕ್ಕಂಥದ್ದು. ನಮಗೆ ಇಲ್ಲಿ ಬಂದು ಭಾಷಣ ಮಾಡತಕ್ಕಂಥ ಶಕ್ತಿ ಇದೆ. ಅದೇ ಬಡ ರೈತನ ಗತಿ ಏನು? ಅದು ನನಗೆ

(ಶ್ರೀ ಹೆಚ್. ಡಿ. ದೇವೇಗೌಡ)

ಬಂದಿರತಕ್ಕದ್ದು ಎಂದರೆ ನಮ್ಮ ತಂದೆಯವರಿಗೆ ನೋಟೀಸ್ ಬಂದಿರುವುದು. ನೀವು ವ್ಯವಸಾಯಗಾರರು, ಮಾನ್ಯ ಚನ್ನಬಸಪ್ಪನವರು ವ್ಯವಸಾಯಗಾರರು ನಿಮಗೆಷ್ಟು ಆದಾಯ ಬರುತ್ತದೆಯೋ ಅಷ್ಟು ಆದಾಯ ನೋಡುವಂಥ ಸ್ಥಿತಿಗೆ ಒರತಕ್ಕಂಥದ್ದು ಕಷ್ಟವಿದೆ. ಮಾನ್ಯ ಘೋರ್ಪಡೆಯವರು ಒಂದು ಮಾತನ್ನು ಹೇಳಿದರು, ''ಗ್ರಾಮ ನಗರೀಕರಣ'' ಮಾಡುತ್ತೇವೆಂದು ಹೇಳಿದ್ದರು. ಆದು ''ಗ್ರಾಮ ನಿರ್ನಾಮೀಕರಣ'' ಆಗಿ ಉಳಿದಿರುವುದಷ್ಟೇ ಮಾನ್ಯ ಸಭಾಧ್ಯಕ್ಷಣೀಯವರೇ ಪರಕ್ಯಾಪಿಟಾ ಇನ್‌ಕಂ ಅಗ್ರಿಕಲ್ಚರಲ್ ಸೆಕ್ಟಾರ್‌ನಲ್ಲಿ ಹೇಳುವುದಾದರೆ 1951-52 ರಲ್ಲಿ 2ನೂರು ರೂಪಾಯಿಗಳು, 1969-70 ರಲ್ಲಿ 400, ನಾನ್ ಅಗ್ರಿಕಲ್ಚರಲ್ ಸೆಕ್ಟಾರ್‌ನಲ್ಲಿ ಪರ್‌ಕ್ಯಾಪಿಟಾ ಇನ್‌ಕಂ ಹೇಳುವುದಾದರೆ 1950-51ರಲ್ಲಿ 463, ಅದೇ 1969-70 ರಲ್ಲಿ 1050 ಕ್ಕೆ ಏರಿದೆ. ದೇವರಾಜ್ ಅರಸ್‌ರವರ ಸರ್ಕಾರ ಬಂದಮೇಲೆ ಅಗ್ರಿಕಲ್ಚರಲ್ ಸೆಕ್ಟಾರ್‌ನಲ್ಲಿ 200 ರಿಂದ 400ಕ್ಕೆ ಬಂದಿದ್ದಾರೆ. ಆದು ಅರ ಹೊಡೆದು ಹೊಡೆದೂ ಇಲ್ಲಿಗೆ ಬಂದು ನಿಲ್ಲಿಸಿದ್ದಾರೆ. ನಾನ್ ಅಗ್ರಿಕಲ್ಚರಲ್ ಸೆಕ್ಟಾರ್‌ನಲ್ಲಿ 463 ರಿಂದ 1050ಕ್ಕೆ ಹೋಗಿದೆ. ಆದುದರಿಂದ ವ್ಯವಸಾಯ ರಂಗದಲ್ಲಿರತಕ್ಕಂಥ ಜನ ಎಷ್ಟು ಮುಂದಕ್ಕೆ ಹೋಗಿದ್ದಾರೆ? ಮಾನ್ಯ ದೇವರಾಜ ಅರಸ್‌ರವರು ಚನ್ನಬಸಪ್ಪನವರು ಮೈಸೂರಿನಿಂದ ಬೆಂಗಳೂರಿಗೆ ಓಡಾಡುವಾಗ ದಾರಿಯಲ್ಲಿ ನೋಡಿರಬಹುದು, ಕೆಲವು ದೊಡ್ಡ ಸಾಹುಕಾರರು ಗ್ರೇಪ್ ಗಾರ್ಡನ್ ಮಾಡಿದ್ದಾರೆ. ಸ್ವಲ್ಪ ಪೋಲಿ ಹಣ ಇರುತ್ತದೆಯಲ್ಲಾ, ಬ್ಲಾಕ್ ಮನಿಯನ್ನು ವೈಟ್ ಆಗಿ ಕನ್‌ವರ್ಟ್ ಮಾಡಬೇಕೆಂದು, ಕೆಲವರು ಶೋಕಿಗಾಗಿ ಕುದುರೆ ಸಾಕಿದಹಾಗೆ ಅಂಥವರನ್ನು ಲೆಕ್ಕದಲ್ಲಿಟ್ಟುಕೊಂಡು, ವ್ಯವಸಾಯರಂಗದಲ್ಲಿ ಭಾರಿ ಮೇಲಕ್ಕೆ ಹೋಗಿದ್ದಾರೆ ಎಂದು ''ಗ್ರಾಮ ನಾಗರೀಕರಣ'' ಮಾಡುತ್ತೇವೆಂದು ಹೊರಟು ಅದು ಗ್ರಾಮ ನಿರ್ನಾಮೀಕರಣ ಮಾಡುವುದಕ್ಕೆ ಹೊರಟ ಹಾಗಿದೆ ಇದು ಯೋಗ್ಯವಲ್ಲ ಇದನ್ನು ಪುನಃ ಆಲೋಚನೆ ಮಾಡಿ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಧ್ಯಕ್ಷಣೀಯವರೇ, ನಾನು ಹಳ್ಳಿಯಲ್ಲಿ 10 ವರ್ಷ ವಾಸ ಮಾಡುತ್ತಿರುವಾಗ ಪಟ್ಟಣಕ್ಕೆ ಬರಬೇಕು ಎನ್ನತಕ್ಕಂಥ ಆಶೆ ಇತ್ತು, ಆದುದರಿಂದ ಈಗ ಇಲ್ಲಿಗೆ ಬಂದಿದ್ದೇನೆ ನೀವು ಹಳ್ಳಿಯೊಳಗೆ ಯಾವ ಸವಲತ್ತುಗಳನ್ನು ಕೊಟ್ಟಿದ್ದೀರಿ ? ನೀವು ತೆಗಿಸಿದಂಥ ಭಾವಿಗಳಲ್ಲಿ ಸೇದುವ ಭಾವಿಗಳಲ್ಲಿ ನೀರಿಲ್ಲ. ಪ್ರತಿ ವರ್ಷವೂ ಡೀಪಿಂಗ್ ಮಾಡಿಸುತ್ತೇವೆ. ನೀರು ಕೆಳಕ್ಕೆ ಹೋಗುತ್ತಲೇ ಇದೆ. ಬಾವಿಯಲ್ಲಿ ನೀರು ಇಲ್ಲದಾಗ ಕೆರೆಯಲ್ಲಿ ಹಳ್ಳದಲ್ಲಿ ಮಣ್ಣಿನೊಳಕ್ಕೆ ಪಾತಿ ಮಾಡಿ, ಗುಂಡಿ ತೋಡಿ, ಆ ಹೊಲಸು ನೀರನ್ನೇ ಶುದ್ಧಿ ಮಾಡಿಕೊಂಡು ಕುಡಿಯಬೇಕು. ಇದು ಯಾವ ಹಣೆಬರಹ ? ಅದೇ ಪಟ್ಟಣದಲ್ಲಿ ಹಿತಕರವಾದ ಸಿಹಿ ಪಾನೀಯ

ವನ್ನು ಇಲ್ಲಿಯುವರು ಕುಡಿಯುತ್ತಾರೆ. ಅಲ್ಲಿ ಅವರ ಸ್ಥಿತಿ ಹಾಗಿದೆ. ಇನ್ನು ಹಳ್ಳಿಗಳಲ್ಲಿ ಯಾವುದಾದರೊಂದು ಸ್ಕೂಲನ್ನು ಓಪನ್ ಮಾಡಿರಿ ಎಂದು ಕೇಳಿದರೆ ಅಲ್ಲಿಯ ಪಾಪ್ಯುಲೇಷನ್ ಕಾಂಟ್ರಿಬ್ಯೂಷನ್ ಮಾಡಲಿ, ಎಂದು ಹೇಳುತ್ತೀರಿ, ಒಂದು ಆಸ್ಪತ್ರೆ, ಕಸಾಯಿ ಆಸ್ಪತ್ರೆ ಅದಕ್ಕೂ ಕಾಂಟ್ರಿಬ್ಯೂಷನ್ ಕೊಡಬೇಕು ಎಂದು ಹೇಳುತ್ತೀರಿ ಇದು ಎಲ್ಲವೂ ತೆರಿಗೆಯಲ್ಲವೇ ? ರಾಜ್ ಕಮಿಟಿ ಬರೆದ ಎಂದು ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದೀರಿ, ಇವೆಲ್ಲವೂ ತೆರಿಗೆಯಲ್ಲವೇ ಎಂದು ಕೇಳಬೇಕಾಗುತ್ತದೆ. ವ್ಯವಸಾಯ ಮಾಡದ ಅನುಭವ ಇಲ್ಲದವರಿಗೆ ಈ ಒಂದು ಕಮಿಟಿ ಮಾಡಿ ಅವನಿಗೆ ವಹಿಸಿಕೊಟ್ಟಿದ್ದೀರಿ. ನಾನು ಎಷ್ಟೋ ಕಮಿಟಿಗಳನ್ನು ನೋಡಿದ್ದೇವೆ. ಫ್ಯಾನ್ ಕೆಳಗೆ ಕುಳಿತುಕೊಂಡು ಮಾಡುವುದಲ್ಲ. ಹಳ್ಳಿಗಳಲ್ಲಿ ಯೊವುದಾದರೊಂದು ಚಿಕ್ಕ ಕಾಯಿಲೆ ವಾಸಿಯಾಗದೇ ಹೋದರೆ ಅವನು ಬೆಂಗಳೂರಿಗೆ ಬರಬೇಕಾಗುತ್ತದೆ. ಅಲ್ಲಿ ದೊಡ್ಡ ಆಸ್ಪತ್ರೆಯಿರುವುದಿಲ್ಲ, ಅವರು ಆ ಊರಿನಿಂದ ಬೆಂಗಳೂರಿಗೆ ಬರಬೇಕಾದರೆ 200-250 ಮೈಲಿ ದೂರವಾಗುತ್ತದೆ. ಇದರಿಂದ ಅವನಿಗೆ ತಗಲತಕ್ಕಂಥ ಖರ್ಚನ್ನು ಯಾರು ಕೊಡುತ್ತಾರೆ ಸ್ವಾಮಿ ? ಅವನ ಮಗ ಎಸ್. ಎಸ್. ಎಲ್. ಸಿ. ಓದಬೇಕು ಹಳ್ಳಿಯಲ್ಲಿ ಹೈಸ್ಕೂಲ್ ಇಲ್ಲ, ಒಂದು ಹೈಸ್ಕೂಲ್ ಮಾಡಬೇಕೆಂದರೆ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಹೇಳುತ್ತೀರಿ, ಅವನಿಗೆ ಸರ್ಕಾರದಿಂದ ಯಾವ ಬಾಬ್ತು ಪುಕ್ಸಟ್ಟೆ ಇಲ್ಲವೇ ಇಲ್ಲ. ಸ್ವಾಮಿ ಈ ದೇಶದಲ್ಲಿ ಎಷ್ಟು ರೈತರು ಕಾರುಗಳನ್ನು ಇಟ್ಟುಕೊಂಡಿದ್ದಾರೆ ? ನಾವು ಲೆಕ್ಕ ಹಾಕಿ ನೋಡುವುದಾದರೆ ನಾನ್ ಅಗ್ರಿಕಲ್ಚರಲ್ ಸೆಕ್ಟರ್‌ನಲ್ಲಿ ಎಷ್ಟು ಜನ ಕಾರುಗಳನ್ನು ಮಾಡಿದ್ದಾರೆ, ಎಷ್ಟು ಜನರ ಮನೆಯಲ್ಲಿ ಸೋಫಾ ಸೆಟ್‌ಗಳಿವೆ ? ಎಂಬುದನ್ನೆಲ್ಲಾ ನೋಡಿದರೆ ಗೊತ್ತಾಗುತ್ತದೆ. ಇನ್ನು ಗೊಬ್ಬರಕ್ಕೆ 100ಕ್ಕೆ 90 ಪರ್ಸೆಂಟ್‌ನಷ್ಟು ಜಾಸ್ತಿಯಾಗಿದೆ. ಜನತಾ ಬಜಾರಿನಲ್ಲಿ ಕಂಟ್ರೋಲ್ ಕ್ಲಾತ್‌ನ್ನು ಹಂಚುತ್ತಿದ್ದೀರಿ, ಅದೇ ಹಳ್ಳಿಗಳಲ್ಲಿರುವ ಬಡ ಜನರಿಗೆ ಒಂದು ತುಂಡು ಬಟ್ಟೆ ಸಿಕ್ಕುವುದಿಲ್ಲ, ಅವರಿಗೆ ಒಂದು ತುಂಡು ಬಟ್ಟೆ ಹಂಚುವುದಿಲ್ಲ. ಜನತಾ ಬಜಾರ್, ಸೂಪರ್ ಬಜಾರ್‌ಗಳ ಮೂಲಕ ಇಲ್ಲಿಯ ಜನರಿಗೆ ವ್ಯವಸ್ಥಿತ ರೀತಿಯಲ್ಲಿ ಅವರ ಜೀವನ ಸುಖವಾಗಿರಬೇಕು ಹಾಗೆ ಮಾಡಿಕೊಡುತ್ತಿದ್ದೀರಿ, ಗ್ರಾಮ ನಾಗರೀಕರಣ ಎಂದು ಏನು ಹೊರಟಿದ್ದೀರಿ, ಇವತ್ತು ಅವನ ತಿಥಿ ಮಾಡಬೇಕೆಂದು ಹೊರಟಿದ್ದೀರಿ. ಅವನ ತಿಥಿ ಮಾಡಿ ಉದ್ದಿನವಡೆ ತಿನ್ನಿಸಬೇಕೆಂದು ಹೊರಟಿದ್ದೀರಿ.

3-30 P. M.

ಬೆಂಗಳೂರು ಮುಂತಾದ ಕಡೆಗಳಲ್ಲಿ ಜನತಾಬಜಾರ್‌ಗಳ ಮೂಲಕ ಜನಗಳಿಗೆ ಆರಿಸಿದ ಬೇಳೆ ಮುಂತಾದ ಕಾಳುಗಳನ್ನು ಒದಗಿಸುತ್ತಿದ್ದಾರೆ. ಹಳ್ಳಿಗಳಲ್ಲಿ ಒಂದು ಕೆ. ಜಿ, ಸಕ್ಕರೆ ಸಿಕ್ಕಿದರೆ ಮಹಾ ಪುಣ್ಯ. ಇವೊತ್ತು ಗ್ರಾಮಾಂತರ

(ಶ್ರೀ ಹೆಚ್. ಡಿ. ದೇವೇಗೌಡ)

ಪ್ರದೇಶಗಳಲ್ಲಿ ಜನಗಳಿಗೆ ಎಷ್ಟು ಅಕ್ಕಿಯನ್ನು ಕೊಡುತ್ತಿದ್ದೀರಿ? ಇವೊತ್ತಿನ ದಿವಸ ಇವರು ಯಾವುದೇ ಒಂದು ವಾದವನ್ನು ತೆಗೆದು ಜನತೆಯ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಹೊರಟಿದ್ದಾರೆ. ರೈತನ ಮೇಲೆ ಬೆಟರ್‌ಮೆಂಟ್ ಲೆವಿ ಹಾಕಿದ್ದೀರಿ. ಈ ಸಂದರ್ಭದಲ್ಲಿ ಶ್ರೀಮಾನ್ ಘೋರ್ಪಡೆಯವರು ಈ ಸಭೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಇವೊತ್ತು ಶ್ರೀಮಾನ್ ಶ್ರೀಕಂಠಯ್ಯನವರು ವಿದ್ಯುಚ್ಛಕ್ತಿಯ ಮಂತ್ರಿಗಳಾಗಿದ್ದಾರೆ. ಇವೊತ್ತು ಒಬ್ಬ ವ್ಯವಸಾಯಗಾರನಿಗೆ ನಮ್ಮ ರಾಜ್ಯದಲ್ಲಿ ಒಂದು ಯೂನಿಟ್ಟಿಗೆ 15 ಪೈಸಾ ಚಾರ್ಜ್ ಮಾಡುತ್ತಿದ್ದಾರೆ ಆದರೆ ಕೈಗಾರಿಕೋದ್ಯಮಿಗೆ ಒಂದು ಯೂನಿಟ್ಟಿಗೆ 2 ಪೈಸೆಯಂತೆ ಕೊಡುತ್ತಾರೆ. ಶ್ರೀಮಾನ್ ಘೋರ್ಪಡೆಯವರ ಕಂಪೆನಿಗೆ ಒಂದು ಯೂನಿಟ್ಟಿಗೆ 3 ಪೈಸಾ ಚಾರ್ಜ್ ಮಾಡುತ್ತಿದ್ದಾರೆ. ಭೂಮಿಯಲ್ಲಿ ದುಡಿದು ಉತ್ಪಾದನೆ ಮಾಡತಕ್ಕ ರೈತನಿಗೆ ಒಂದು ಯೂನಿಟ್ಟಿಗೆ 15 ಪೈಸಾ ಚಾರ್ಜ್ ಮಾಡುತ್ತಿದ್ದಾರೆ. ಕೈಗಾರಿಕೋದ್ಯಮಿಗೆ ಒಂದು ಯೂನಿಟ್ಟಿಗೆ 2-3 ಪೈಸಾ What is the sin the poor farmer has committed? ಇದು ಎಂತಹ ಮನೋಭಾವನೆ? ಏತಕ್ಕೆಂದರೆ ಅವರು ಇವರನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುತ್ತಾರೆ ಹಿಂದಿನ ಸರ್ಕಾರದವರು ಅಲ್ಯೂಮಿನಿಯಂ ಫ್ಯಾಕ್ಟರಿಗೆ ಕೊಟ್ಟಿರುವ ಟ್ಯಾರೀಫ್ ರಿವೈಜ್ ಮಾಡಬೇಕು ಎಂದು ನಾನು ಅರ್ಜಿ ಮಾಡುತ್ತಿದ್ದೇನೆ. "In Kerala power is generated 5 paise at unit and supplied to the Indian Aluminium at 2 paise a unit" ಇವೊತ್ತು ಇದರ ಬಗ್ಗೆ ಸರ್ಕಾರದ ಧೋರಣೆ ಬದಲಾವಣೆಯಾಗಬೇಕು. ಭೂಮಿಯಲ್ಲಿ ಬೆಳೆಯತಕ್ಕ ರೈತನಿಗೆ ರಿಯಾಯಿತಿ ಇಲ್ಲ. ಕಾಫಿಪ್ಲಾಂಟರುಗಳಿಗೆ ಕನ್‌ಸೆಷನ್ ಕೊಟ್ಟಿದ್ದಾರೆ. ಯಾವ ಪುರುಷಾರ್ಥಕ್ಕೆ ರೈತ ದುಡಿಯಬೇಕು? ಕಾಫಿಪ್ಲಾಂಟರುಗಳಿಗೆ ಮರು ಬೆಳೆ ಇಡುವುದಕ್ಕೆ ಅನುಕೂಲ ಒದಗಿಸಿ ಕೊಟ್ಟು ಭತ್ತ ರಾಗಿ ಬೆಳೆಯುವವನಿಗೆ ಆ ಸೌಲಭ್ಯವನ್ನು ಕೊಡುವುದಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಬಿ. ಬೈರಪ್ಪಾಜಿ :—ಹಿಂದೆ ವೀರೇಂದ್ರಪಾಟೀಲರ ಸರ್ಕಾರ ಇದ್ದಾಗ ಎಲ್ಲಾ ಮನ್ನಾಮಾಡಿ ಕೊಟ್ಟಿದ್ದೀರಾ?

ಶ್ರೀ ಹೆಚ್. ಡಿ. ದೇವೇಗೌಡ :—ಕಳೆದ ವರ್ಷ ಮತ್ತು ಈ ವರ್ಷ 34 ಕೋಟಿ ರೂಪಾಯಿಗಳ ತೆರಿಗೆಯನ್ನು ಹಾಕಿದ್ದಾರೆ. ಒಂದು ಟನ್ ಗೊಬ್ಬರಕ್ಕೆ 100 ರೂ. ಇದ್ದದ್ದು ಇವೊತ್ತು 190 ರೂಪಾಯಿಗಳಾಗಿದೆ. ಮಾನ್ಯ ಸಭಾಧ್ಯಕ್ಷರೇ ನಾನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ಪಕ್ಷದ ರಾಜಕಾರಣ ದೃಷ್ಟಿ ಬಿಟ್ಟು ಗ್ರಾಮಾಂತರ ಪ್ರದೇಶದ ಜನಗಳನ್ನು ನಿರ್ವಿಕಾರ ಭಾವನೆಯಿಂದ ನೋಡಿ.

ಅವರ ಮೇಲೆ ತೆರಿಗೆಯನ್ನು ಹಾಕಬೇಡಿ. ಪಕ್ಷದ ರಾಜಕೀಯವನ್ನು ಬಿಟ್ಟು ಹೊರಗಡೆ ಬಂದು ಹೋರಾಟ ಮಾಡಬೇಕು. ಕೃಷಿ ಆದಾಯ ತೆರಿಗೆಯನ್ನು ಕೈ ಬಿಡಬೇಕು. ಅರ್ಬನ್ ಟ್ಯಾಕ್ಸ್ ಹಾಕತಕ್ಕದ್ದರ ಬಗ್ಗೆ ನನ್ನ ಅಡ್ಡಿ ಇಲ್ಲ. ಇವೊತ್ತು ಸರ್ಕಾರದವರು ಏನು ನಿರ್ಣಯ ಮಾಡಿದ್ದಾರೆ: 2400 ಚದರಡಿ ವಿಸ್ತೀರ್ಣಕ್ಕೆ ಮೀರದೆ ವಾಸಕ್ಕಾಗಿ ಬಳಕೆಯಾಗುವ ನಗರ ಭೂಮಿಗಳಿಗೆ ಈ ಹೊಸ ತೆರಿಗೆ ಬೀಳುವುದಿಲ್ಲ. 60 × 40 ಅಡಿ ಉದ್ದದ ಸೈಟಿಗೆ 2 ಲಕ್ಷ ರೂಪಾಯಿ ಬೆಲೆ ಆದರೆ ಒಂದು ಪರ್ಸೆಂಟ್ ತೆರಿಗೆಯಂತೆ 2 ಸಾವಿರ ರೂಪಾಯಿಗಳನ್ನು ಕೊಡ ಬೇಕಾಗುತ್ತದೆ. ಈಗ ಚಿಕ್ಕಪೇಟೆಯಲ್ಲಿ ಒಂದು ಅಂಗಡಿಗೆ 2 ಲಕ್ಷ 3 ಲಕ್ಷ ರೂಪಾಯಿಗಳಾಗುತ್ತದೆ. ಮಾರ್ಕೆಟ್ ವ್ಯಾಲ್ಯೂ ಪ್ರಕಾರ ಅವರಿಗೆ ಒಂದು ಪರ್ಸೆಂಟ್‌ನಂತೆ ತೆರಿಗೆಯನ್ನು ಹಾಕಿದರೆ 3 ಸಾವಿರ ರೂಪಾಯಿಗಳ ತೆರಿಗೆಯನ್ನು ಕೊಡಬೇಕು. ಕಾರ್ಪೊರೇಷನ್ ಟ್ಯಾಕ್ಸ್ ಮತ್ತು ಈ ಟ್ಯಾಕ್ಸ್ ಎರಡನ್ನೂ ಸೇರಿಸಿ ದರೆ ಅವನ ಕತೆ ನಿರ್ನಾಮವಾಗುತ್ತದೆ. ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಎಲ್ಲಾ ಕಡೆಗೂ ಇದು ಅನ್ವಯವಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ಪುನರ್ ವಿಮರ್ಶೆ ಮಾಡಬೇಕು ರೆಂಟಲ್ ವ್ಯಾಲ್ಯೂ ಮೇಲೆ ಬೇಕಾದರೆ ಈ ತೆರಿಗೆಯನ್ನು ಹಾಕಬಹುದು. ಮಾರ್ಕೆಟ್ ವ್ಯಾಲ್ಯೂ ಮೇಲೆ ಈ ತೆರಿಗೆಯನ್ನು ಹಾಕಬಾರದು. ಆ ರೀತಿ ಮಾರ್ಕೆಟ್ ವ್ಯಾಲ್ಯೂ ಮೇಲೆ ತೆರಿಗೆಯನ್ನು ಹಾಕಿದರೆ ಕಷ್ಟವಾಗುತ್ತದೆ. ಬೆಲ್ಲದ ಮೇಲೆ ಎಣ್ಣೆಯ ಮೇಲೆ ಕ್ರಿಮಿನಾಶಕಗಳ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿದ್ದಾರೆ. ಇದು ಜನರ ಮೇಲೆ ಬೀಳುತ್ತದೆ. ಈಗ ಬೆಲ್ಲದ ಮೇಲೆ 10 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಹಾಕಿದರೆ ಡೀಲರ್ಸ್ ಯಾರೂ ಕೊಡುವುದಿಲ್ಲ. ಬೆಲೆಯಲ್ಲೇ ಒಂದು ಕ್ವಿಂಟಾಲಿಗೆ 165 ರೂಪಾಯಿ ಬೆಲೆ ಇದ್ದರೆ ಅದಕ್ಕೆ ಟ್ಯಾಕ್ಸ್ ಸೇರಿಸಿ 175 ರೂಪಾಯಿ ಬೆಲೆಯನ್ನು ಡೀಲರ್ ಫಿಕ್ಸ್ ಮಾಡುತ್ತಾನೆ. ಈ ದೃಷ್ಟಿಯಿಂದ ಬೆಲ್ಲದ ಮೇಲೆ ಎಣ್ಣೆಯ ಮೇಲೆ ಪೆಸ್ಟಿಸೈಡ್ಸ್ ಮತ್ತು ಗನ್ನಿ ಬ್ಯಾಗ್ ಮೇಲೆ ಮತ್ತೆ ಸೇಲ್ಸ್ ಟ್ಯಾಕ್ಸ್ ಹಾಕಿಟ್ಟಿ ರುವುದು, ಅದರಲ್ಲೂ ಎಸೆನ್ಷಿಯಲ್ ಕಮಾಡಿಟೀಸ್ ಮೇಲೆ ತೆರಿಗೆಯನ್ನು ವಿಧಿಸಿರು ವುದು ಯೋಗ್ಯವಲ್ಲ ಅದನ್ನು ಕೈಬಿಡಬೇಕು ಎಂದು ನಾನು ಹೇಳುತ್ತೇನೆ.

ಟ್ರಾನ್ಸ್‌ಪೋರ್ಟ್ ಮೇಲೆ 2 ಕೋಟಿ ರೂಪಾಯಿಗಳ ತೆರಿಗೆಯನ್ನು ಹಾಕಿ ದ್ದಾರೆ. ಅದೂ ಕೂಡ ಪ್ರಯಾಣಿಕರ ಮೇಲೆ ಬೀಳುತ್ತದೆ. ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು. ಲೆಟರ್ ಆಫ್ ಕ್ರೆಡಿಟ್ ಜಾರಿಗೆ ತಂದರು.

SRI D. B. KALAMANKAR :—Kindly give the alternative suggestion for taxation. If not on these items, on what items you what to be taxed?

SRI H. D. DEVEGOWDA :—In my preamble itself I have made out a case. You try to get some more funds from the Centre. I have made out a case. ಕೇಂದ್ರ ಸರ್ಕಾರದವರು 900 ಕೋಟಿ ರೂಪಾಯಿಗಳ ಅಡೀಷನಲ್ ಟ್ಯಾಕ್ಸ್ ಹಾಕಿದ್ದಾರೆ. ಅದಕ್ಕೆ ಕರೆಸ್ಪಾಂಡಿಂಗ್ ಆಗಿ ಕೇಂದ್ರ ಸರ್ಕಾರದಿಂದ ನಮಗೆ ಅಸಿಸ್ಟೆನ್ಸ್ ಬಂದಿಲ್ಲ. ಇವೊತ್ತು ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಬರಬೇಕಾಗಿರತಕ್ಕ ನೆರವು ಮತ್ತು ಭಾಗದ ಬಗ್ಗೆ ಹೋರಾಟ ಮಾಡಬೇಕು. ಇಂಟರ್ನಲ್ ರಿಸೋರ್ಸಸ್ ಹುಡುಕುವುದಕ್ಕೆ ಹೋಗಿ ಜನತೆಯ ಮೇಲೆ ತೆರಿಗೆಯ ಹೊರೆಯನ್ನು ಹೊರಿಸುವುದಕ್ಕೆ ಹೋಗಬೇಡಿ.

ಲೆಟರ್ ಅಫ್ ಕ್ರೆಡಿಟ್ ಸಿಸ್ಟಮ್ ಅನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತಂದರು. ಈ ಬಗ್ಗೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಪದೇ ಪದೇ ಹೇಳುತ್ತಾರೆ. ಇದರ ಅಂಕಿ ಅಂಶಗಳು ಮತ್ತು ಇದರ ಪ್ರಾಕ್ಟಿಕಲ್ ಅಸ್ಪೆಕ್ಟ್ಸ್ ಬಗ್ಗೆ ವಿವರಣೆ ಕೊಡಬೇಕು. ಈ ಬಗ್ಗೆ ನಾನು ತಮಗೆ ಒಂದು ನಿದರ್ಶನ ಕೊಡುತ್ತೇನೆ.

ಸುಮಾರು 4 ವರ್ಷಗಳಿಂದಲೂ ಏನು ಪಂಪ್‌ಸೆಟ್ಟಿಗೆ ಖರ್ಚು ಮಾಡಿದ್ದಾರೋ ಅದನ್ನು ಲೆಕ್ಕ ತೆಗೆದರೆ ಗೊತ್ತಾಗುತ್ತದೆ. 1972–73ರಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್‌ನಲ್ಲಿ 3 ಲಕ್ಷ ಬಾವಿಗಳಿಗೆ ಪಂಪ್‌ಸೆಟ್ಸ್ ಎನ್‌ರೈಸ್ ಮಾಡಬೇಕೆಂದು ಇತ್ತು. ಅದರಲ್ಲಿ ಒಂದೂವರೆ ಲಕ್ಷ ಎನ್‌ರೈಸ್ ಆಗಿದೆ. ಇನ್ನೂ 20 ಸಾವಿರ ಎನ್‌ರೈಸ್ ಮಾಡಬೇಕೆಂದು ಮಾಡಿದ್ದಾರೆ. ಆದರೆ ಡಿಸೆಂಬರ್ 73ರೊಳಗೆ ಕೇವಲ 10 ಸಾವಿರ ಮಾತ್ರ ಅಚೀವ್‌ಮೆಂಟ್ ಮಾಡಿದ್ದಾರೆ. ಅವರ ಫಿಗರ್ಸ್ ಪ್ರಕಾರ 15 ಸಾವಿರ ಪಂಪ್ ಸೆಟ್‌ಗಳಿಗೆ ಅಚೀವ್ ಮಾಡುತ್ತೇವೆಂದು ಹೇಳಿದ್ದರು. ರಾಜ್ಯಪಾಲರ ಭಾಷಣದಲ್ಲಿ ಈ ವರ್ಷ 10,431 ಪಂಪ್‌ಸೆಟ್ಟುಗಳಿಗೆ ವಿದ್ಯುತ್ತನ್ನು ಒದಗಿಸಲು ಸಮರ್ಥವಾಗಿತ್ತು ಎಂಬುದಾಗಿ ಹೇಳಿದ್ದಾರೆ. ಬಜೆಟ್ಟಿನಲ್ಲಿ ಈ ಸಭೆ ಇದರ ಬಗ್ಗೆ ಅಂಗೀಕಾರ ಕೊಟ್ಟ ಮೇಲೆ How can that letter of credit overide sanction of this House? What is that letter of credit, when this House has given its sanction and made sufficient provision in the budget? It is dam shameful on the part of Government. ಮಾನ್ಯ ಶ್ರೀ ಚನ್ನಬಸಪ್ಪನವರು ಈಗ ಬಂದು ಕೂತಿದ್ದಾರೆ. ಸಾಮಾನ್ಯವಾಗಿ ಆಲೂರಿನ ಒಂದು ಸಬ್ ಡಿವಿಷನ್ನಿನಲ್ಲಿ 2 ಲಕ್ಷ ರೂಪಾಯಿಗಳನ್ನು ಕೇವಲ ಒಂದು ವರ್ಷಕ್ಕೆ ಖರ್ಚು ಮಾಡಿದ್ದಾರೆ. ಕಳೆದ ವರ್ಷ ಒಂದೊಂದು ಡಿವಿಷನ್ನಿಗೆ 20 ಲಕ್ಷ ರೂಪಾಯಿಗಳಷ್ಟು ಖರ್ಚು ಆಗಿರಬಹುದು. ಬಳ್ಳಾರಿ ಸಬ್ ಡಿವಿಜನ್ನಿನಲ್ಲಿ 3 ಲಕ್ಷ ರೂಪಾಯಿಗಳನ್ನೂ, ಸಕಲೇಶಪುರದಲ್ಲಿ 4 ಲಕ್ಷ ರೂಪಾಯಿಗಳನ್ನೂ ಖರ್ಚು ಮಾಡಿದ್ದಾರೆ. ಹಿಂದೆ ಇವರೇ ಪಿ.ಡಬ್ಲ್ಯು. ಡಿ. ಮಿನಿಸ್ಟರ್ ಆಗಿದ್ದಾಗ ಶರವೇಗದಲ್ಲಿ ಓಡುತ್ತಿದ್ದರು. ಈಗ ನಿಮ್ಮ ದಾರಿಯೇ

ಬೇರೆಯಾಗಿದೆ. ಓಪನ್ನಿ ಕನ್‌ಫೆಸ್ ಟುಡೆ: ನಿಮ್ಮಲ್ಲಿ ಹಣ ಇದೆ. ನೀವು ಅಲ್ಲಿನ ಕೆಲಸಗಳನ್ನು ಸರಿಯಾಗಿ ಮಾಡುವುದಕ್ಕೆ ತಯಾರಾಗಿಲ್ಲ. ಅಂದಮೇಲೆ ನಿಮ್ಮಲ್ಲಿ ಹಣವಿಲ್ಲವೆಂದು ಏಕೆ ಹೇಳುತ್ತೀರಿ? How much additional income has come and I want to ask where it has gone; how it has been spent? ಇವತ್ತು ಹೇಮಾವತಿ ಅಲ್ಲೇ, ಹಾರಂಗಿ ಅಲ್ಲೇ, ಕಪಿನಿ ಅಲ್ಲೇ, ಮಾನ್ಯ ಶ್ರೀ ನಂಜೇಗೌಡರು 1974ರೊಳಗೆ ನೀರು ಕೊಡುತ್ತೇವೆಂದು ಭಾಷಣ ಮಾಡಿದರು. ಆದರೆ ಅವು ಅಲ್ಲಿಯೇ ಇವೆ. ಹಣ ಎಲ್ಲಿ ಹೋಯಿತು? ಆ ಹಣವನ್ನು ರಾಜಕೀಯ ಮಾಡುವ ಜನರನ್ನು ಅಂದರೆ ರಾಜಕೀಯ ಭಟ್ಟಂಗಿಗಳನ್ನು ಹೊರಗಡೆ ಬೆಳೆಸುವುದಕ್ಕೆ ಹೋಯಿತು. ಹಿಂದೆ ರಾಜರುಗಳ ಕಾಲದಲ್ಲಿ ಇಂತಹ ಒಂದು ರೀತಿಯ ಪ್ರವೃತ್ತಿ ನಡೆದುಕೊಂಡು ಬರುತ್ತಿತ್ತು. ಹಿಂದೆ ರಾಜರುಗಳ ಕಾಲದಲ್ಲಿ ಏನಾದರೂ ಒಂದು ಹೊಗಳಿಕೆ ಮಾಡಿದರೆ, ಅಂತಹವನಿಗೆ ಒಂದು ಊರನ್ನೇ ಬಳುವಳಿಯಾಗಿ ಕೊಡುತ್ತಿದ್ದರು. I am giving concrete examples; I am not making any bald statement. There must be some norms. ಇವರು ಎಷ್ಟೋ ಕಾರ್ಪೊರೇಷನ್‌ಗಳನ್ನು ಮಾಡಿದ್ದಾರೆ. ಪ್ರತಿಯೊಂದು ಕಾರ್ಪೊರೇಷನ್ನಿಗೆ ಒಬ್ಬ ಚೇರ್ಮನ್, ಅವನಿಗೆ ಲೆಕ್ಕವಿಲ್ಲದಷ್ಟು ಸಿಬ್ಬಂದಿ, ಆ ಕಾರ್ಪೊರೇಷನ್ನಿಗೆ ಎಷ್ಟೋ ಜನ ಡೈರೆಕ್ಟರ್ಸ್, ಇದೇ ರೀತಿ ಹ್ಯಾಂಡ್‌ಲೂಮ್ ಅಡ್ವೈಜರಿ ಬೋರ್ಡಿಗ 41 ಜನ ಮೆಂಬರುಗಳು. ಹೀಗೆ ನಾನಾ ಕಾರ್ಪೊರೇಷನ್‌ಗಳು ಇನ್ನೂ ರಿಲೀಜ್ ಆಗುತ್ತಲೇ ಇವೆ ಅಲ್ಲಿ ಯಾವನಾದರೂ ಕಲೆಕ್ಷನ್ ಚೆನ್ನಾಗಿದೆಯೆಂದು ಹೇಳಿದರೆ, ಅಂತಹವನನ್ನು ಹೊಗಳುತ್ತಾರೆ. ಅಂತಹವರಿಗೆ ರಾಜಕೀಯ ಭಟ್ಟಂಗಿಗಳೆಂದು ಹೆಸರು. ಅಂತಹವರಿಗೆ ಏನೂ ಕಸಬು ಗೊತ್ತಿಲ್ಲ. ಸುಮ್ಮನೆ ಹೊಗಳುವುದೇ ಅವರ ಕರ್ತವ್ಯ. ಇವರು ಇದುವರೆಗೂ ಮಾಡಿರತಕ್ಕ ಕಾರ್ಪೊರೇಷನ್‌ಗಳ ಒಂದು ಪಟ್ಟಿಯನ್ನು ನಾನು ಈಗಾಗಲೇ ಮಾಡಿದ್ದೇನೆ. ಎಷ್ಟು ಕಾರ್ಪೊರೇಷನ್‌ಗಳನ್ನೂ ಮತ್ತು ಎಷ್ಟು ಕಮಿಟಿಗಳನ್ನು ಈ ಸರ್ಕಾರದವರು ಮಾಡಿದ್ದಾರೆಂಬುದನ್ನು ಹೇಳುತ್ತೇನೆ.

SRI K. PUTTASWAMY.—Once Mr. Nehru said democracy is sharing of power.

SRI H. D. DEVE GOWDA.—Alright. It is something like distributing of exchequer's money and public resources. ಜನರು ತೆರಿಗೆ ತುಂಬುತ್ತಾರೆ. ಅದನ್ನು ಚೊಕ್ಕಟವಾಗಿ ಕಾನೂನು ಚೌಕಟ್ಟಿನಲ್ಲಿ ಹಂಚಿಕೊಳ್ಳುವುದು. ಅಷ್ಟಾದರೆ ನಮ್ಮ ಜನರ ಬಡತನ ಹೋಯಿತೇ? ಏನೋ ಇಲ್ಲಿ ಪಾಸ್ ಮಾಡಿದ್ದೇವೆಂದು ಊರೊಳಗೆ ತಿರುಗಾಡುವುದು. ಇಂತಹ ವಿಷಯಗಳು ನನ್ನಲ್ಲಿ ಎಷ್ಟೋ ಇವೆ. ಅವನ್ನೆಲ್ಲಾ ಹೇಳುವುದಕ್ಕಾಗುವುದಿಲ್ಲ.

(ಶ್ರೀ ಹೆಚ್. ಡಿ. ದೇವೇಗೌಡ)

ಇವತ್ತು ಈ ದೇಶದಲ್ಲಿ ಈ ಸರ್ಕಾರ ಬಂದಮೇಲೆ ಏನೇನು ಮಾಡಿದ್ದಾರೆಂಬು ದನ್ನು ಒಂದೊಂದಾಗಿ ವಿಶದವಾಗಿ ಅಮೇಲೆ ಹೇಳುತ್ತೇನೆ. ಮಾನ್ಯ ಶ್ರೀ ಘೋರ್ಪಡೆಯವರು ಈಗ ಸಭೆಗೆ ಬಂದರು. ಇನ್ನೊಂದು ಸಾರಿ ಅನುತ್ಪಾದಕ ವೆಚ್ಚವನ್ನು ಹೇಗೆ ಮಾಡಿದ್ದಾರೆಂಬುದನ್ನು ಹೇಳಬೇಕಾಗುತ್ತದೆ. ಸುಮ್ಮನೆ ಅನಾವಶ್ಯಕವಾಗಿ ಖರ್ಚುಮಾಡುವುದು ಬೇಡ. ಅಡ್ಮಿನಿಸ್ಟ್ರೇಷನ್ ಎಕ್ಸ್‌ಪೆಂಡಿಚರ್ ಎಷ್ಟು? ಸೂಪರ್‌ಸ್ಕೇಲ್ ಐ.ಎ.ಎಸ್. ಆಫೀಸರ್ಸ್‌ನ್ನಾಗಿ ಅನೇಕರನ್ನು ಮಾಡಿ ದ್ದಾರೆ. ಏತಕ್ಕೆ ಅಷ್ಟು ಜನ? ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅವರು ಐ.ಎ.ಎಸ್. ಅಫೀಸರ್ ಆಗಿದ್ದಾರೆ, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೋಸ್ಕರ ಒಬ್ಬ ಐ.ಎ.ಎಸ್. ಆಫೀಸರ್. ಹೇಗಾದರೂ ಮಾಡಿ ಅಂತಹವರನ್ನೆಲ್ಲಾ ಎಲ್ಲೆಲ್ಲಿ ತುಂಬಬೇಕೆಂದು ಯೋಚನೆ ಮಾಡುವುದೇ ಇವರ ಕೆಲಸವಾಗಿದೆ. ಏಕೆ ಇಷ್ಟು ಜನ? Small scale Industries Corporation is only a limb of the Industries Department and there the Chairman is the Superscale IAS Officer while only an IAS Officer is there in the Industries department itself. ಅಂತಹವರಿಗೆ ಪ್ರೊಮೋಷನ್ ಕೊಟ್ಟು ಅವರಿಗೆ ಜಾಗ ಹುಡುಕುವುದಕ್ಕೆ ಈಗ ಇವರಿಗೆ ಕಷ್ಟವಾಗಿದೆ. ಏತಕ್ಕೋಸ್ಕರ ಅಡ್ಮಿನಿಸ್ಟ್ರೇಷನ್ ಎಕ್ಸ್‌ಪೆಂಡಿಚರ್ ಇಷ್ಟು ಹೆಚ್ಚುಮಾಡಿದ್ದಾರೋ ಗೊತ್ತಿಲ್ಲ ಯಾರದೋ ಒತ್ತಾಯಕ್ಕೆ ಮಣಿದು ಈ ರೀತಿ ಹೆಚ್ಚಿಗೆ ಎಸ್ಟಾಬ್ಲಿಷ್‌ಮೆಂಟಿಗೆ ಖರ್ಚುಮಾಡುವುದು ಸರಿಯಾದುದಲ್ಲ. ನಮ್ಮ ರಿಕ್ವೈರ್‌ಮೆಂಟ್ಸ್ ನೋಡಿಕೊಂಡು ಸಿಬ್ಬಂದಿಗೆ ಖರ್ಚುಮಾಡಬೇಕು. ಅದರಿಂದ ತಮ್ಮ ಈ ಒಂದು ನೀತಿ ನಿಜವಾಗಿ ಯೋಗ್ಯ ವಾದುದಲ್ಲ. ಇನ್ನು ಸರ್ಕಾರದ ನೌಕರರಿಗೆ ಅಲೊಯನ್ಸ್ ಹೆಚ್ಚಿಗೆ ಕೊಟ್ಟಿದ್ದೇವೆ ಎಂದು ಇದರಲ್ಲಿ ಹೇಳಿದ್ದಾರೆ. ಸರ್ಕಾರದ ನೌಕರರು ಅದರಿಂದ ಚೌರ ಮಾಡಿ ಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ನಿಜವಾಗಿಯೂ ಅವರ ಪರಸ್ಥಿತಿ ಆ ರೀತಿಯಾಗಿಯೇ ಆಗಿದೆ. ಕಾಸ್ಟ್ ಆಫ್‌ಲಿವಿಂಗ್ ಜಾಸ್ತಿಯಾಗಿದೆ. ಕೇಂದ್ರ ಸರ್ಕಾರದವರು ಡಿ. ಎ ಯನ್ನು ಎನ್‌ಹ್ಯಾನ್ ಮಾಡುವಾಗ ಒಂದು ನ್ಯಾಷನಲ್ ಪಾಲಿಸಿಯನ್ನು ಇವಾಲ್ವ್ ಮಾಡಬೇಕು. ರಾಜ್ಯ ಸರ್ಕಾರಗಳ ನೌಕರರನ್ನು ಇದರಿಂದ ಗೊಂದಲಕ್ಕೆ ಈಡುಮಾಡುವುದು ಸರಿಯಲ್ಲ. ಇದರ ಬಗ್ಗೆ ಏಕೆ ಅವರು ಇಂತಹ ನೀತಿಯನ್ನು ಅನುಸರಿಸುತ್ತಿದ್ದಾರೋ ಗೊತ್ತಿಲ್ಲ. ನನಗೆ ಏನೂ ಅವರ ನೀತಿ ಅರ್ಥವಾಗುತ್ತಾ ಇಲ್ಲ. ಅವರಿಗೂ ಹೆಲ್ಪ್‌ಲೆಸ್ ಕಂಡೀಷನ್ಸ್ ಇರಬಹುದು ಆದರೂ ಅವರು ಈ ರೀತಿ ಮಾಡುವುದು ಸರಿಯಲ್ಲ. ನೌಕರರು ಆಗಿರುವವರು ಅನೇಕ ವೇಳೆ ಹಸಿದುಕೊಂಡೇ ಕೆಲಸಗಳನ್ನು ಮಾಡುತ್ತಾರೆ. ಒಂದು ಹೊತ್ತು ಊಟಮಾಡಿ ಕೆಲಸಮಾಡುವವರೂ ಇದ್ದಾರೆ. ವಾರಕ್ಕೆ ಕೇವಲ ಒಂದು ದಿನ

## Mr. Deputy Speaker in the Chair

(ಶ್ರೀ ಹೆಚ್. ಡಿ. ದೇವೇಗೌಡ)

ಆದರೆ ಇದು ನನಗೂ ಮತ್ತು ಮುಖ್ಯಮಂತ್ರಿಗಳಿಗೂ ನೇರವಾಗಿ ನಡೆದಿರತಕ್ಕ ಸವಾಲುಗಳಿವು. ಇವುಗಳನ್ನು ಮಂತ್ರಿಮಂಡಲದ ಬಗ್ಗೆ ತರತಕ್ಕ ಆ ಒಂದು ಅವಿಶ್ವಾಸ ನಿರ್ಣಯದ ರೀತ್ಯಾ ಪರಿಹರಿಸಬೇಕೆಂದರೆ ಅದು ಸಾಧ್ಯವಿಲ್ಲ. ಆ ಅವಿಶ್ವಾಸ ನಿರ್ಣಯಕ್ಕೂ ಈ ನಮ್ಮಿಬ್ಬರ ಒಂದು ಸವಾಲಿಗೂ ಸಂಬಂಧವಿಲ್ಲ. ಅವಿಶ್ವಾಸ ನಿರ್ಣಯದ ನಿಯಮಾವಳಿಗಳು ಪ್ರೊಸೀಜರ್ ಮತ್ತು ಅದರ ವ್ಯಾಪ್ತಿಯೇ ಬೇರೆ. ಈ ನಮ್ಮಿಬ್ಬರ ಸವಾಲಿನ ವ್ಯಾಪ್ತಿಯೇ ಬೇರೆ. ಇವು ಆ ಮಂತ್ರಿ ಮಂಡಲದ ಬಗ್ಗೆ ತರತಕ್ಕ ಅವಿಶ್ವಾಸ ನಿರ್ಣಯದಲ್ಲಿ ಸೇರುವುದಿಲ್ಲ. ಇವುಗಳೇ ಬೇರೆ ಏಕೆಂದರೆ ಮುಖ್ಯ ಮಂತ್ರಿಗಳು ತಾವೇ ಸ್ವಯಂ ಪ್ರೇರಿತವಾಗಿ ಕಾಲುಕೆರೆದುಕೊಂಡು ಯಾರಾದರೂ ನಾನು ಆಡಳಿತವನ್ನು ದುರುಪಯೋಗ ಮಾಡಿಕೊಂಡಿದ್ದೇನೆ ಅಕ್ರಮವಾಗಿ ಕಾನೂನು ಬಾಹಿರವಾಗಿ ನಡೆದುಕೊಂಡಿದ್ದೇನೆಂಬುದನ್ನು ರುಜುವಾತು ಮಾಡಿದರೆ ನಾನು ಈ ಮುಖ್ಯಮಂತ್ರಿ ಸ್ಥಾನದಲ್ಲೇ ಇರುವುದಿಲ್ಲ ಎಂದು ಅವರು ಒಂದು ಸವಾಲನ್ನು ಹಾಕಿದ್ದಾರೆ. ಅದೇ ರೀತಿ ನಾನೂ ಸಹಾ ಅವರ ಬಗ್ಗೆ ನಾನು ಹೇಳತಕ್ಕ ಆಪಾದನೆಗಳನ್ನು ರುಜುವಾತು ಮಾಡದಿದ್ದರೆ ನಾನೂ ಕೂಡ ಈ ರಾಜಕೀಯದಿಂದ ಬಿಟ್ಟು ಹೊರಗೆ ಹೋಗುತ್ತೇನೆಂದು ಸವಾಲನ್ನು ಹಾಕಿದ್ದೇನೆ. ನಮ್ಮಿಬ್ಬರ ಸವಾಲನ್ನೂ ಗಣನೆಗೆ ತೆಗೆದುಕೊಂಡು ಒಂದು ನಿಷ್ಪಕ್ಷಪಾತವಾದ ಜುಡಿಷಿಯಲ್ ಎನ್‌ಕ್ವೈರಿ ಸಮಿತಿಯನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಒಂದು ಮಾರ್ಗವನ್ನು ಬಿಟ್ಟು ಈ ಸದನದಲ್ಲೇ ಕುಳಿತು ನನ್ನ ಆಪಾದನೆಗಳನ್ನು ರುಜುವಾತು ಮಾಡಿದರೆ ಅದು ಸಾಧ್ಯವಾಗದ ಮಾತು. ಇಲ್ಲಿ ನಾನು ಕುಳಿತುಕೊಂಡು ಆ ಅಪರಾದಗಳ ಬಗ್ಗೆ ಎವಿಡೆನ್ಸ್‌ನ್ನು ಕೊಡುವುದಕ್ಕಾಗುವುದಿಲ್ಲ. ಆ ನನ್ನ ಆಪಾದನೆಗಳೇನೆಂದರೆ ಅವುಗಳನ್ನು ಈಗ ಒಂದೊಂದನ್ನಾಗಿ ನಾನು ಓದುತ್ತೇನೆ.

*Charges confined to Chief Minister only :*

1) Excess payment of about Rs. 98.86 lakhs to Sree Balaji Engineering Construction Co., in Hemavathi Project.

2) Excess payment of about Rs. 18 lakhs to Sri Shankaranarayana Construction Co., in Ghataprabha & Malaprabha projects.

ಸ್ನಾನಮಾಡುವವರೂ ಇದ್ದಾರೆ, ಕೆಲವು ಕಡೆಗಳಲ್ಲಿ ಪ್ರತಿದಿನವೂ ಸ್ನಾನಮಾಡುವವರೂ ಇದ್ದಾರೆ. ಅವರಲ್ಲಿಯೂ ಪ್ರಾಮಾಣಿಕರಾದವರೂ ಹಾಗೂ ಅಪ್ರಮಾಣಿಕರಾದವರೂ ಇದ್ದಾರೆ. ಅವರಲ್ಲಿ ಕೆಲವರು ಪಾಲಿಟಿಷಿಯನ್ಸ್ ಸಹ ಇದ್ದಾರೆ. ಅಡ್ಮಿನಿಸ್ಟ್ರೇಟಿವ್ ಮೆಷನರಿಯಲ್ಲಿ ಎಲ್ಲ ವರ್ಗದವರೂ ಇದ್ದಾರೆ. ಆದ್ದರಿಂದ ಸರ್ಕಾರದವರು ಈ ದಿಶೆಯಲ್ಲಿ ಬಹಳ ತೀವ್ರವಾಗಿ ಆಲೋಚನೆ ಮಾಡಬೇಕು. ಅವರಿಗೆ ಹೆಚ್ಚಿನ ಸಹಾಯವನ್ನು ಕೇಂದ್ರಸರ್ಕಾರದವರು ಕೊಡುವ ಹಾಗೆ ನೀಡಬೇಕು.

ಇನ್ನು ಕಂಪಲ್ಸರಿ ಸ್ಮಾಲ್ ಸೇವಿಂಗ್ಸ್ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈಗ ಏನಾಗಿದೆಯೆಂದರೆ, ಒಂದು ಸಿಮೆಂಟ್ ಮೂಟೆ ಯಾರಾದರೂ ಮೈನರ್ ರಿಪೇರಿ ಮಾಡಿಕೊಳ್ಳಬೇಕೆಂದು ಅರ್ಜಿ ಹಾಕಿದರೆ, ಅಲ್ಲಿ ಮೂರು ರೂಪಾಯಿಗಳವರೆಗೆ ಅದಕ್ಕೆ ಲಂಚ ಕೊಡಬೇಕು. ಯಾವುದಕ್ಕೇ ಆಗಲೀ ಒಂದು ಅರ್ಜಿ ಹಾಕಿದರೆ ಅದಕ್ಕೆ ಲಂಚ. ಒಂದು ತಾಲ್ಲೂಕು ಆಫೀಸಿಗೆ ಹೋದರೆ ಅಲ್ಲಿ ಹಣ ತುಂಬಬೇಕು. ಸಣ್ಣ ಉಳಿತಾಯ ಯೋಜನೆ ಇದರಿಂದ ಹೇಗೆ ಆಗುತ್ತದೆ? ಗೊಬ್ಬರಕ್ಕೆ ಒಂದು ಕಾರ್ಡ್ ಮಾಡಿಸಬೇಕಾದರೆ ಅಲ್ಲಿ ದುಡ್ಡು ಕೊಡಬೇಕು. ಕಂಪಲ್ಸರಿ ಫೀ ಬೇರೆ ಹಾಕುತ್ತಾರೆ. ಇದು ನಿಜವಾಗಿ ಯೋಗ್ಯವಾದುದಲ್ಲ. ಜನರಿಗೆ ವಿಶೇಷವಾಗಿ ಈಗ ಇನ್‌ಡೈರೆಕ್ಟ್ ಟ್ಯಾಕ್ಸ್ ಬೀಳುತ್ತದೆ. ಇವರ ಈ ಒಂದು ಧೋರಣೆ ಏನಿದೆಯೋ ಅದರ ಪ್ರಕಾರ ಎಲ್ಲರೂ ಆ ರೀತಿಯಾಗಿ ಕೊಡುವುದಕ್ಕಾಗುವುದಿಲ್ಲ. ಒಂದು ಸಿಮೆಂಟ್ ಮೂಟೆಗೆ ಹೆಚ್ಚಿಗೆ 18 ರೂಪಾಯಿಗಳನ್ನು ಕೊಟ್ಟು ಬಡ ಜನರು ಯಾವ ರೀತಿಯಲ್ಲಿ ಮನೆಯ ರಿಪೇರಿಯನ್ನು ಮಾಡಬೇಕು? ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸರಕಾರದವರು ತಿಳಿಸಬೇಕು.

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಒಂದು ಮಾತನ್ನು ತಿಳಿಸಿದರು. ಮಾನ್ಯ ಮುಖ್ಯಮಂತ್ರಿಗಳ ಬಿಜಾಪುರ ಭಾಷಣದ ಸಂದರ್ಭದಲ್ಲಿ ಈ ಸಭೆಯಲ್ಲಿ ಅವರ ಸವಾಲನ್ನು ಸ್ವೀಕಾರ ಮಾಡಿದರೆ, ಆದರ ಬಗ್ಗೆ ನಿಮ್ಮ ಆಪಾದನೆಗಳನ್ನು ಮಂಡಿಸಬೇಕೆಂದು ಹೇಳಿದರು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಸಹ ಈ ಸಭೆಯಲ್ಲಿ 2-3 ಸಾರಿ ಹೇಳಿದ್ದಾರೆ. ಅಂತಹ ಕೆಲವು ಆಪಾದನೆಗಳನ್ನು ಈ ಸಭೆಯಲ್ಲಿಡುವುದಕ್ಕೆ ನಾನು ಹಿಂದುಮುಂದು ನೋಡುತಿದ್ದೇನೆಂದು ಹೇಳಿದರು. ಇವತ್ತು ನಾನು ಸರ್ಕಾರದ ವಿರುದ್ಧವಾಗಿ ಮಾಡುವಂತಹ ಆಪಾದನೆಗಳು ಇಲ್ಲವಲ್ಲ. ಅದಕ್ಕೆ ಬೇರೆ ಸಮಯವನ್ನು ತೆಗೆದುಕೊಳ್ಳುತ್ತೇನೆ. ಯಾರ್ಯಾರು ತಪ್ಪುಮಾಡಿದ್ದಾರೆಯೋ ಆ ಮಂತ್ರಿಗಳ ಮೇಲೆ ಮುಂದೆ ಚಾರ್ಜ್ ಮಾಡುತ್ತೇನೆ.

3) Undue favour shown to M/s. Nirmal Engineering Construction Co., to release about Rs. 3.4 lakhs.
4) Undue favour shown while taking disciplinary action against the top P. W. D. officers.

5) Undue favour shown while entrustment of work of preparation on drawings, designs and estimates for remodelling of the K. R. Market, Bangalore, to M/s. Karekar Sundaram, Architects.

6) Grant of land to Krishna Flour Mills — property worth about Rs. 6 lakhs in Bangalore.

7) Undue favour shown while disposing of 2,500 tonnes of bajra to Sri Saiya Ram and Ganashyam & Co.,

8) Grant of 'no objection' certificate to alienate and conversion of about 287 acres of revenue land in S. No. 3........etc., in Narasipur village, Bangalore North Taluk (Densha Estate).

9) Grant of 20 acres of land to Dr. M. D. Nataraj, in Bomenahalli, Nelamangala Taluk.

10) Allotment of two sites to Mr. M. D. Nataraj by City Improvement Trust Board.

I am prepared to give all evidence before the Commission of Enquiry which is going to probe into the matter. I am going to stand by the challenge. An impartial judicial probe only will decide this matter under the Commission of Enquiry Act. ಇಷ್ಟು ಮಾತುಗಳನ್ನು ಹೇಳಿ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ :—ಆ ಜಮೀನು ಕನ್‌ವರ್‌ಷನ್ ಆದದ್ದು ಯಾವಾಗ ? ನಾನು ಕೇಳುತ್ತಿರುವುದಕ್ಕೆ ಏನು ಕಾರಣ ಎಂದರೆ—1974ನೇ ಏಪ್ರಿಲ್ ಒಂದರ ಬಾಗಾಯ್ತು, ಭೂಸುಧಾರಣೆ ಶಾಸನ ಜಾರಿಗೆ ಬರುತ್ತದೆ. ಯಾರೊಬ್ಬರೂ ಯಾರಿಗೂ ಭೂಮಿಯನ್ನು ವರ್ಗಾವಣೆ ಮಾಡಬಾರದೆಂದು ಅದರಲ್ಲಿದೆ.

ಶ್ರೀ ಎಚ್. ಡಿ. ದೇವೇಗೌಡ :—ವ್ಯವಸಾಯದ ಭೂಮಿಯನ್ನು ವರ್ಗಾವಣೆ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಒಂದು ಕಾನೂನನ್ನು ಮಾಡಿದರೋ ಆಗಲೇ ಅದನ್ನು ಏಲನೇಟ್ ಮಾಡಿದ್ದಾರೆ.

ಶ್ರೀ ಕೆ. ಅರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ) :—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್ಥಿಕ ಸಚಿವರು 1975-76ನೇ ಸಾಲಿಗೆ ತಂದಿರತಕ್ಕ ಆಯ ವ್ಯಯ ಪಟ್ಟಿಯನ್ನು ನಾನು ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆ ಸ್ವಾಗತಮಾಡತಕ್ಕ ಕಾಲದಲ್ಲಿ ಕೆಲವು ಸೂಕ್ತ ಸಲಹೆಗಳನ್ನು ಕೊಡುವುದಕ್ಕೆ ನಾನು ಇಚ್ಚಿಸುತ್ತೇನೆ.

ಇಲ್ಲಿಯವರೆಗೂ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮದೇ ಆದ ಭಾಷೆ ಮತ್ತು ಶೈಲಿಯಲ್ಲಿ ಕೆಲವು ವಿಷಯುಗಳನ್ನು ಈ ಸದನದ ಮುಂದಿಟ್ಟಿದ್ದಾರೆ. ಅವರು ತಮ್ಮ ಹೇಳಿಕೆಯಲ್ಲಿ ಈ ಬಡ್ಜೆಟ್ಟನ್ನು ಒಂದು ''ಪುರಸಭೆಯ ಬಡ್ಜೆಟ್'' ಇದ್ದಹಾಗಿದೆ ಎಂದು ಹೇಳಿದ್ದಾರೆ. ಆದರೆ ನಾನು ಈ ಬಡ್ಜೆಟ್ಟನ್ನು ಒಂದು ''ಬ್ಯಾಲೆನ್ಸ್ಡ್ ಪ್ರೋಗ್ರೆಸೀವ್ ಬಡ್ಜೆಟ್'' ಎಂದು ಕರೆಯುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕೆ ಕಾರಣವಾದರೂ ಇಷ್ಟೆ : ನಾವು ಅನಾವಶ್ಯಕವಾಗಿ ಬಡ್ಡಿ ಕೊಟ್ಟು ಹಣವನ್ನು ಸಾಲಮಾಡದೆ ನಮ್ಮಲ್ಲಿ ಇದ್ದ ಹಣದಲ್ಲೇ ನಾವು ವ್ಯವಹಾರ ನಡೆಸಿದ್ದೇವೆ. ಅಂದರೆ 'ಕಟ್ ಯುವರ್ ಕೋಟ್ ಅಕಾರ್ಡಿಂಗ್ ಟು ಯುವರ್ ಕ್ಲಾತ್'' ಪರೆನುಡಿಯ ಎಂದಹಾಗೆ. ನಮ್ಮ ಪಕ್ಷದ ಸರ್ಕಾರ ಆಡಳಿತವನ್ನು ವಹಿಸಿಕೊಳ್ಳತಕ್ಕ ಕಾಲದಲ್ಲಿ ಹಿಂದಿದ್ದ ಸರ್ಕಾರ 72 ಕೋಟಿ ಓವರ್ ಡ್ರಾಫ್ಟನ್ನು ಬಿಟ್ಟು ಹೋಗಿತ್ತೆಂಬುದನ್ನು ಅವರು ಮರೆಯಬಹುದು. ನಾವು ಹೊರಗಡೆಯಿಂದ ಹಣವನ್ನು ತರದೆ ಇದ್ದ ನಮ್ಮಲ್ಲಿದ್ದ ಹಣದಲ್ಲೇ ಇಲಾಖೆವಾರ್ ಹಂಚಿಕೆ ಮಾಡಿದ್ದೇವೆ. ಇಡೀ ಜಗತ್ತಿನಲ್ಲಿ ಉಂಟಾಗಿರತಕ್ಕ ಹಣದುಬ್ಬರದ ವಿಚಾರವನ್ನು ನಮ್ಮ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡೂ ಅರ್ಥಮಾಡಿಕೊಂಡಿವೆ. ಆದರೆ ಮಾನ್ಯ ದೇವೇಗೌಡರು ಆ ಕೇಂದ್ರ ಸರ್ಕಾರ ನಮ್ಮ ಸಂಸ್ಥಾನದ ಬಗ್ಗೆ ಕೇಂದ್ರ ಸರ್ಕಾರ ಒಂದು ಮಲತಾಯಿ ಧೋರಣೆಯನ್ನು ಇಟ್ಟುಕೊಂಡಿದೆ ಎಂದು ಒಂದು ಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ. ನಾವು ಕೇಂದ್ರಸರ್ಕಾರದ ಕೈಗೊಂಬೆಗಳು ಎಂದು ಕರೆದಿದ್ದಾರೆ. ಹಣದ ನೆರವಿಗೆ ನಾವು ಹೆಚ್ಚಾಗಿ ಕೇಂದ್ರ

ದವರನ್ನೇ ಅನುಸರಿಸಬೇಕೆಂದು ಟೀಕಿಸಿದ್ದಾರೆ. ನಮ್ಮ ಆರ್ಥಿಕ ನೀತಿ ಬಹಳ ತೊಂದರೆಗಳಿಗೆ ಎಡೆ ಕೊಟ್ಟಿದೆಯೆಂದು ಟೀಕೆಮಾಡಿದ್ದಾರೆ. ನಮ್ಮ ನೀತಿಯ ಫಲ ವಾಗಿ ಆಹಾರ ಪದಾರ್ಥಗಳ ಬೆಲೆ ಏರಿಕೆಯನ್ನು ಕೆಲವು ಉದಾಹರಣೆಗಳಿಂದ ತೋರಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಅವರಿಗೆ ಕೆಲವು ಅಂಕಿಅಂಶಗಳ ಆಧಾರದಿಂದ ಯಾವ ದೇಶದಲ್ಲಿ ಪ್ರಗತಿ; ಬೆಳವಣಿಗೆ, ಹೊಸ ಆರ್ಥಿಕ ಅಧ್ಯಾಯ ತೆಗೆಯುತ್ತೇವೆಯೋ ? ಅಂದರೆ Developing Economy ಏನಿದೆ ಇಂತಹ ವಾತಾವರಣ ಸಂಭವಿಸುವುದು ಸಹಜ ಎಂದು ಮತ್ತೊಮ್ಮೆ ಒತ್ತಿ ಹೇಳಲು ಪ್ರಯತ್ನಿಸುತ್ತೇನೆ.

ನನಗೆ ಈ ಸಂದರ್ಭದಲ್ಲಿ ಅನ್ನಿಸುವುದು ಕೇಂದ್ರ ಸರಕಾರದವರು ನಮ್ಮ ಮೇಲೆ ಮಲತಾಯಿ ಧೋರಣೆ ತೋರಿಸುತ್ತಿಲ್ಲ. ಆದರೆ ಕಾರಣಾಂತರದಿಂದ ಹಣ ಕೊಡುವುದು ಸ್ವಲ್ಪ ನಿಧಾನವಾಗಿರಬಹುದು. ಮುಖ್ಯವಾಗಿ ಕೇಂದ್ರದ ನೆರ ವನ್ನು ಅಪೇಕ್ಷೆ ಮಾಡುವ ಎರಡು ಯೋಜನೆಗಳು ನಮ್ಮ ಮುಂದಿರುವುವು. ಒಂದು ಕಾಳಿ ನದಿ ಯೋಜನೆ ಇನ್ನೊಂದು ವಿಜಯನಗರ ಸ್ಟೀಲ್ ಪ್ಲಾಂಟಿಗೆ ಸಂಬಂಧಪಟ್ಟ ಯೋಜನೆ. ಇದರ ಬಗ್ಗೆ ವಿರೋಧ ಪಕ್ಷದವರಿಗೆಷ್ಟು ಆಸಕ್ತಿಯಿದೆಯೋ ಅಷ್ಟೇ ಆಸಕ್ತಿ ನಮಗೂ ಇದೆ. ವಿಜಯನಗರ ಸ್ಟೀಲ್ ಪ್ಲಾಂಟಿಗೆ ಹಣ ಬರುವುದಿಲ್ಲ ವೆಂದು ಎಷ್ಟೋ ಸಂದರ್ಭಗಳಲ್ಲಿ ದೇವೇಗೌಡರು ಹೇಳಿದ್ದಾರೆ. ಯಾವ ದೃಷ್ಟಿ ಯಿಂದ ಅವರು ಈ ಯೋಜನೆಯನ್ನು ನೋಡುತ್ತಿದ್ದಾರೋ ಎಷ್ಟು ಪ್ರಾಮುಖ್ಯತೆ ಯನ್ನು ಅವರು ಇದಕ್ಕೆ ಕೊಡುತ್ತಿದ್ದಾರೋ ನಾವೂ ಸಹ ಅಷ್ಟೇ ಪ್ರಾಮುಖ್ಯತೆ ಯನ್ನು ಕೊಟ್ಟು ಇದರ ಕಡೆ ಅಷ್ಟೇ ಆಸಕ್ತಿಯಿಂದ ಗಮನ ಹರಿಸುತ್ತಿದ್ದೇವೆ. ವಿಜಯನಗರ ಸ್ಟೀಲ್ ಪ್ಲಾಂಟಿನ ಕೆಲಸ ನಡೆದರೆ ಇತರ ಕಾಂಪ್ಲೆಕ್ಸ್ ಕೈಗಾರಿಕೆ ಗಳಿಗೆ ಕೂಡ ಸಹಾಯವಾಗುವುದು, ಹೆಚ್ಚು ವಿದೇಶಿ ವಿನಿಮಯ ದೊರೆಯುವುದು ಕೈಗಾರಿಕಾಭಿವೃದ್ಧಿಯಾಗುವುದು ಎಂದು ನಾವು ಅರ್ಥಮಾಡಿಕೊಂಡಿದ್ದೇವೆ. ಒಂದು ಸಣ್ಣ ಉದಾಹರಣೆ ಹೇಳುವುದಾದರೆ ಕುದುರೆ ಮುಖ ಯೋಜನೆಗೆ IRAN ದೇಶದಿಂದ 400 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಡಿಸುತ್ತಿದ್ದಾರೆ. ಇದರಿಂದ ಹಣ ನಮಗೆ ಹೊರಗಿನಿಂದ ಬಂದ ಹಾಗೆ ಆಗಲಿಲ್ಲವೇ ? ಕುದುರೆ ಮುಖ ಪ್ರಾಜೆಕ್ಟಿನಿಂದ ಎಷ್ಟು ಕೈಗಾರಿಕೆಗಳಾಗಬಹುದೆಂಬುದನ್ನು ಯೋಚನೆ ಮಾಡಿ ? ಹಾಗಿರುವಾಗ ಏಕೆ? ಈ ಪರಿಸ್ಥಿತಿಯಲ್ಲಿದ್ದೇವೆಂದರೆ ಅನೇಕ ನ್ಯಾಷನಲ್ ಪ್ರಾಬ್ಲಮ್ಸ್ ನಮ್ಮ ಮುಂದೆ ಇವೆ, ಬೆಲೆಯೇರಿಕೆ, ಕ್ಷಾಮ ಡಾಮರ ಅಂತರ-ರಾಷ್ಟ್ರೀಯ ಪರಿಸ್ಥಿತಿ, ತೈಲ ಬೆಲೆ, ಮುಂತಾದುವು ಬರುತ್ತಿವೆ, ಇದನ್ನು ಒಪ್ಪುತ್ತೇನೆ. ಆದರೆ ಒಂದು ಸಂತೋಷದ ವಿಚಾರ. ಈ ಒಂದು ವರ್ಷ ಇತರ ವರ್ಷಗಳಿಗಿಂತಲೂ ಒಳ್ಳೆಯ ಮಳೆ ಬೆಳೆಯಾಗಿದೆ. ತಮಗೆ ಗೊತ್ತಿರುವ ಹಾಗೆ 'ಅನ್‌ಪ್ರೆಸೀಡೆಂಟೆಡ್ ಡ್ರಾಟ' ಬಂದುದನ್ನು ಮರೆಯುವುದಕ್ಕಾಗುವುದಿಲ್ಲ.

4-00 P.M.

(ಶ್ರೀ ಕೆ. ಆರ್. ಎಸ್. ನಾಯ್ಡು)

ಹೋದ ವರ್ಷ ಅಭಾವ ಪರಿಸ್ಥಿತಿ ಬಂದು ಅದಕ್ಕೆ 62 ಕೋಟಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡಬೇಕಾಯಿತು. ಅತಿವೃಷ್ಟಿ ಮತ್ತು ಅನಾವೃಷ್ಟಿ ಯುಂಟಾಯಿತು, ದಕ್ಷಿಣ ಕನ್ನಡದಲ್ಲಿ ಅತಿವೃಷ್ಟಿಯೂಯಿತು, ಅದರ ಕಷ್ಟ ಸುಖವನ್ನು ಅರ್ಥ ಮಾಡಿಕೊಳ್ಳಬಹುದು. ಆದರೂ ಕೂಡ, ಎಲ್.ಐ.ಸಿ. ಯಿಂದ ಡಾ. ಪೈರವರು ಒಂದೂವರೆ ಕೋಟಿ ಹಣ ಸಹಾಯ ದೊರಕಿಸಿಕೊಟ್ಟರು. ಅದರಿಂದ ಈ ಸಮಸ್ಯೆ ಸ್ವಲ್ಪ ಮಟ್ಟಿಗೆ ಪರಿಹಾರವಾಯಿತು. ಕ್ಷಾಮ ಬಾರದಿರುವ ವರ್ಷವೇ ಇಲ್ಲ, ಒಂದು ವರ್ಷ ಮಳೆ ಬಂದರೆ ಇನ್ನೊಂದು ವರ್ಷ ಬರುವುದಿಲ್ಲ. ಹೀಗೆ ಕ್ಷಾಮ ಬರುತ್ತಿದೆ. ಇದು ನಮ್ಮ ಕೈಲಿಲ್ಲ. ಬಾಂಗ್ಲಾ ದೇಶದ ಒಂದು ಕೋಟಿ ಜನರನ್ನು ನಾವು ಸಾಕಬೇಕಾಯಿತು. 990 ಕೋಟಿ ರೂಪಾಯಿಗಳ ಹಣ ಕೊಡುತ್ತಿದ್ದೇವೆ, ನಮಗೆ ನೆರವು ಮಾತ್ರ ದೊರೆಯುತ್ತಿಲ್ಲವೆಂದು ಹೇಳಿದರು. ಆದರೆ ಅದನ್ನು ಕೇಂದ್ರ ಸರಕಾರದವರು ಏತಕ್ಕೆ ಉಪಯೋಗ ಮಾಡುತ್ತಿದ್ದಾರೆ, ಹೇಗೆ ಉಪಯೋಗ ಮಾಡುತ್ತಿರುವರು ಎಂಬುದನ್ನು ನಾವು ಕೂಲಂಕಷವಾಗಿ ನೋಡಬೇಕು. ಅದನ್ನು ದೇಶದ ಎಲ್ಲಾ ಭಾಗಗಳಿಗೂ ಉಪಯೋಗ ಮಾಡುತ್ತಿದ್ದಾರೆ, ಡಿಫೆನ್ಸ್‌ಗೆ ಎಷ್ಟು ಖರ್ಚಾಗುತ್ತಿದೆಯೆಂಬುದನ್ನು ನೋಡಬಹುದು ? ಇಂಟರ್‌ನ್ಯಾಷನಲ್ ಪ್ರಾಬ್ಲಮ್ಸ್ ಸಾಲ್ವ್ ಮಾಡಬೇಕು, ಅಟಾಮಿಕ್ ಎನರ್ಜಿಗೆ ಖರ್ಚುಮಾಡಿದ್ದಾರೆ ? ಇದನ್ನೆಲ್ಲಾ ವಿರೋಧ ಪಕ್ಷದ ನಾಯಕರ ಟೀಕೆಗೆ ಉತ್ತರವಾಗಿ ಹೇಳಬೇಕಾಗಿದೆ. ಅಟಂ ಬಾಂಬನ್ನು ತಯಾರಿಸಿ ನಮ್ಮದು ಆರನೆಯ ರಾಷ್ಟ್ರವಾಗಿದೆ. ಇದಕ್ಕೆಲ್ಲಾ ಹಣವೆಲ್ಲಿಂದ ಬರಬೇಕು ? ಆದುದರಿಂದ ಕೇಂದ್ರಸರ್ಕಾರದ್ದು ಮಲತಾಯಿ ದೋರಣೆಯಲ್ಲ. ಎಕನಾಮಿಕ್ ಗ್ರೋತ್ ಆಗಬೇಕು, ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್, ಪ್ರೊಡಕ್ಷನ್ ಓರಿಯೆಂಟೆಡ್ ಆಗಬೇಕು ಎಂದು ಹೇಳಿದರು. ಅದು ನನಗೆ ಅರ್ಥವಾಗಿದೆ. ಪ್ರೊಡಕ್ಷನ್ ವಿಚಾರ ತೆಗೆದುಕೊಂಡರೆ ವಿದ್ಯುಚ್ಛಕ್ತಿ, ಇರಿಗೇಷನ್, ಅಗ್ರಿಕಲ್ಚರ್ ಇವು ಮುಖ್ಯವಾದ ಬಾಬುಗಳು. ಹೆಚ್ಚು ಬೆಳೆದರೆ ತಾನೆ ದೇಶಕ್ಕೆ ಹಂಚಲು ಸಾಧ್ಯ ? ಆದುದರಿಂದ ಉತ್ಪತ್ತಿ ಮಾಡಲು ಸೌಲತ್ತು ಕೊಡುತ್ತಿದ್ದೇವೆ. ಮಳೆ ಒಂದೊಂದು ಸಲ ಬರುವುದಿಲ್ಲ, ಹೈಡಲ್ ಎಲೆಕ್ಟ್ರಿಕ್ ಪ್ರಾಜೆಕ್ಟ್ ನಮ್ಮ ಹತ್ತಿರ ಇರುವುದು, ಲಿಂಗನಮಕ್ಕಿಗೆ ಮಳೆ ಹೆಚ್ಚಾಗಿ ಬಂದಾಗ ಕರೆಂಟ್ ಹೆಚ್ಚು ಉತ್ಪತ್ತಿ ಯಾಗುವುದು. ಬಾರದಿದ್ದಾಗ ಕರೆಂಟ್ ಸಾಕಷ್ಟು ದೊರೆಯುವುದಿಲ್ಲ. ಇದಕ್ಕಾಗಿ ಥರ್ಮಲ್ ಪ್ಲಾಂಟ್, ನ್ಯೂಕ್ಲೀಯರ್ ಪ್ಲಾಂಟ್ ಪಡೆಯಬೇಕು ಎಂದು ಕೇಂದ್ರದಲ್ಲಿ ಪ್ರಯತ್ನ ಮಾಡಿ ಇದಕ್ಕೆ ಕೇಂದ್ರಕ್ಕೆ ಪೈಲಟ್ ಪ್ರಾಜೆಕ್ಟ್ ಮಾಡಿ ಕಳಿಸಿದ್ದೇವೆ. ಕೇಂದ್ರದ ನೆರವು ಪಡೆಯಲು ಪ್ರಯತ್ನ ಮಾಡಿದ್ದೇವೆ. ಅಗ್ರಿಕಲ್ಚರ್ ಮತ್ತು ಇರಿಗೇಷನ್ನಿಗೆ ಸಂಬಂಧಪಟ್ಟ ಯೋಜನೆಗಳ ಕೆಲಸ ಒಂದು

ದಿವಸದಲ್ಲಾಗುವುದಿಲ್ಲ. ಇರಿಗೇಷನ್ ಪೊಟೆನ್ಷಿಯಲ್ 27 ವರ್ಷಗಳಲ್ಲಿ ಸೇಕಡ 8ರಷ್ಟಾಗಿದೆ, ಅದೇ ನಮ್ಮ ಪಕ್ಕದ ಪ್ರಾಂತಗಳಲ್ಲಿ ಸೇಕಡ 20-30ರಷ್ಟಿದೆ, ಇದು ನಮ್ಮ ತಪ್ಪೇ? ಕೊಳವೆ ಬಾವಿಗಳನ್ನು ತೆಗೆಯುವರು ನೀರೇ ಇರುವುದಿಲ್ಲ ಎಂದು ದೇವೇಗೌಡರು ಹೇಳಿದರು. ನೆಲದಲ್ಲಿ ನೀರಿಲ್ಲದಿದ್ದರೆ ಅದಕ್ಕೆ ನಾವು ಜವಾಬ್ದಾರರೇ? ಬಾವಿಗಳಲ್ಲಿ ನೀರು ಕಡಿಮೆಯಾದರೆ ಅದು ನಮ್ಮ ತಪ್ಪೇ? ಕಾಳಿ ನದಿ ಯೋಜನೆ ಕಾರ್ಯರೂಪಕ್ಕೆ ಬಂದರೆ ವಿದ್ಯುತ್ತಿನ ದರ ಇಡೀ ದೇಶದಲ್ಲಿ ಕಡಿಮೆ ಬೀಳುವುದು. ಅದೇ ನಮ್ಮ ಪಕ್ಕದ ಪ್ರಾಂತಗಳಲ್ಲಿ ದರ ಹೆಚ್ಚು. ಇರಿಗೇಷನ್ ವಿಷಯದಲ್ಲಿ ನಾವು ಮುಂದುವರೆಯಬೇಕಾಗಿದೆ, ಕಾವೇರಿ, ಕೃಷ್ಣ ಮುಂತಾದ ನದಿಗಳ ನೀರಿನ ಬಗ್ಗೆ ಇಂಟರ್ ಸ್ಟೇಟ್ ಡಿಸ್ಪ್ಯೂಟ್ ಇದೆ. ಹಿಂದಿನ ಸಂದರ್ಭಕ್ಕೆ ತಕ್ಕಂತೆ ಆಗ ಒಪ್ಪಂದ ಮಾಡಿಕೊಂಡಿದ್ದರು. ಈಗ ಕಣ್ಣು ಬಿಟ್ಟು ನೋಡಿ ನಮಗೆ ದೊರೆಯಬೇಕಾದ್ದನ್ನು ಪಡೆಯಲು ಪ್ರಯತ್ನ ಮಾಡುತ್ತಿದ್ದೇವೆ. ಪಕ್ಕದ ಪ್ರಾಂತದಲ್ಲಿ 24 ಲಕ್ಷ ಎಕರೆ ನೀರಾವರಿಯಾಗಿದ್ದರೆ ನಮ್ಮಲ್ಲಿ ಕೇವಲ 8 ಲಕ್ಷ ಇದೆ. ನಮ್ಮ ಹಕ್ಕುಗಳಿಗೆ ನಾವು ಹೊಡೆದಾಡಬೇಕಾಗಿದೆ. ಇರಿಗೇಷನ್ ಪೊಟೆನ್ಷಿಯಲ್ಲಿಗಾಗಿ ಮೈನರ್, ಮೀಡಿಯಂ ಮತ್ತು ಮೇಜರ್ ಇರಿಗೇಷನ್ ಮುಂತಾದ ಮೂರು ಯೋಜನೆಗಳನ್ನು ಮಾಡಿದ್ದೇವೆ. ಅದಕ್ಕೆ ಹಣ ಬೇಕು. ನಮ್ಮಲ್ಲಿ ಇರಿಗೇಷನ್ ಸೌಲಭ್ಯ ಕಡಿಮೆ, ಅನೇಕರು ಆಕಾಶ ನೋಡಿ ವ್ಯವಸಾಯ ಮಾಡುವರು. ಗ್ರಾಮಾಂತರಗಳಲ್ಲಿ ಸೇಕಡ 80 ಮಂದಿಗೆ ನಾಲ್ ಇಲ್ಲ, ಡ್ಯಾಂಗಳಿಲ್ಲ, ಸೇಕಡ 20 ಮಂದಿಗೆ ಸೌಕರ್ಯವಿದೆ. ನಮ್ಮ ದೇಶ ವ್ಯವಸಾಯದ ದೇಶ, ನೇಗಿಲಯೋಗಿಗೆ ಸಹಾಯವಾಗಬೇಕು ಎಂದು ಮುಂತಾಗಿ ಕವಿಗಳು ವರ್ಣಿಸುವರು. ನಾವು ಮುಖ್ಯವಾಗಿ ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯಬೇಕು. ಆಗತಾನೆ ಹಂಚಿಕೆ ಕ್ರಮ ಸುಲಭವಾಗುವುದು? ಬರಿಕೈಲಿ ಮೊಳಹಾಕಲು ಆಗುತ್ತದೆಯೇ?

ಬೆಲೆಯೇರಿಕೆ ವಿಚಾರ ಹೇಳುತ್ತಿದ್ದರು ಶ್ರೀ ದೇವೇಗೌಡರು? ಅದು ನಮ್ಮ ಕೈಲಿ ಇಲ್ಲ. ನಾವು ಸಹ ಅದನ್ನು ತಡೆಗಟ್ಟಲು ಬೇಕಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕೆ ಎಲ್ಲರೂ ಸಹಕಾರ ನೀಡಬೇಕು. ಬೆಲೆಯೇರುವುದಕ್ಕೆ ಕಾರಣ ಶೇಕಡ 20ರಷ್ಟು ಬಂಡವಾಳಗಾರರು; ಸ್ಮಗ್ಲರ್ಸ್, ಬ್ಲಾಕ್ ಮಾರ್ಕೆಟಿಯರ್ಸ್, Speculators ಮುಂತಾದವರು ಇವರೇ ಮುಖ್ಯ ಕಾರಣರು. ಇದಕ್ಕೆ ಪಂಜಾಬಿನಲ್ಲಿ ಶ್ರೀ ಕೈರಾನ್‌ರವರು ಆಕ್ಷನ್ ತೆಗೆದುಕೊಂಡ ಹಾಗೆ ಇಲ್ಲೂ ತೆಗೆದುಕೊಂಡರೆ ಆಗ ಮಾತ್ರ ಅನುಕೂಲವಾಗುವುದು. ನಮಗೂ ಸಾಮಾನ್ಯ ಜನರ ಹಿತದೃಷ್ಟಿಯ ಕಡೆ ಹೆಚ್ಚು ಗಮನವಿದೆ. ಅವರ ಮಧ್ಯೆ ಇರಬೇಕೆಂಬ ಆಸೆಯಿದೆ, ವರ್ಷೇವರ್ಷೆ ಮೈನರ್ ಇರಿಗೇಷನ್ ಕೆಲಸಗಳನ್ನು ಕೈಗೊಳ್ಳುತ್ತಿದ್ದೇವೆ. ಕೆಲವು ಕಡೆ ಡ್ಯಾಂಗಳಾಗಿವೆ. ಕೆಲವು ಕಡೆ ಕಾಲುವೆಗಳಾಗಬೇಕು. ಮತ್ತೆ ಕೆಲವು ಕಡೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾಗಿ . ಈಗ ಐದಾರು ಪ್ರಾಜೆಕ್ಟುಗಳಿವೆ. ಕಬಿನಿ,

(ಶ್ರೀ . ಆರ್. ಎಸ್. ನಾಯ್ಡು)

ಘಟಪ್ರಭ, ಮಲಪ್ರಭ, ಹೇಮಾವತಿ, ಹಾರಂಗಿ ಇವು ಮುಖ್ಯವಾದುವು, ಈ ಪ್ರಾಜೆಕ್ಟುಗಳಿಗೆ ಸಾಕಷ್ಟು ಹಣ ಒದಗಿಸಿಕೊಳ್ಳಬೇಕು. ಈಗಿನ ಪರಿಸ್ಥಿತಿಯಲ್ಲಿ ಎಲ್ಲಾ ಪ್ರಾಜೆಕ್ಟ್‌ಗಳಿಗೆ ಹಂತ ಹಂತವಾಗಿ ಹಣ ಒದಗಿಸಲಾಗುತ್ತಿದೆ. ಕೆಲವು ಸಂದರ್ಭದಲ್ಲಿ ಅಡ್ವಾನ್ಸ್ ಕಂಟ್ರಿಬ್ಯೂಷನ್ ಸಹ ಹೊಲಸು ಮಾಡಿದರು ಸರಿಯೇ ? ನಮ್ಮ ಜನರು ಹಣ ಕೊಡಲು ತಯಾರಿದ್ದಾರೆ. ಅವರಿಗೆ ಬೇಕಾಗಿರುವುದು ಈ ಪ್ರಾಜೆಕ್ಟ್‌ಸ್‌ಗಳ ಪೂರೈಕೆ ಅಂತೂ, ಇವುಗಳನ್ನೆಲ್ಲಾ ಒಂದೇ ಸಲ ಮುಗಿಸಬೇಕಾದರೆ ಕೊನೆ ಪಕ್ಷ ಸುಮಾರು 600-700 ಕೋಟಿ ರೂಪಾಯಿಗಳು ಬೇಕು, ಎಲ್ಲಿಂದ ಒಂದೇ ಸಲ ಹಣ ನಾವು ತರಬೇಕು ? ಆದ್ದರಿಂದ ನಾವು ಒಂದು ಫೇಸ್ಡ್ ಪ್ರೋಗ್ರಾಂ (Phace programme) ಹಾಕಿಕೊಂಡು ಕೆಲಸ ಮಾಡುತ್ತಿದ್ದೇವೆ. ಜೊತೆಗೆ ತಮಗೆ ಗೊತ್ತಿರುವ ಹಾಗೆ, ನಮ್ಮ ಹಣಕಾಸಿನ ಸಚಿವರು ಹಳೆಯ ಟ್ಯಾಂಕುಗಳ ರಿಪೇರಿಯ ಬಗ್ಗೆ ಹೇಳಿದ್ದಾರೆ. ಡಿಸಿಲ್ಟಿಂಗ್ ಆಫ್ ಟ್ಯಾಂಕ್ಸ್‌ಗೋಸ್ಕರ ಸ್ವಲ್ಪ ಹಣವನ್ನು ಕೊಟ್ಟಿದ್ದಾರೆ. ಸಾಯಿಲ್ ಕನ್ಸರ್ವೇಷನ್‌ನಿಂದ ಎಷ್ಟೋ ಸಹಾಯವಾಗಿದೆ. ಏಕೆಂದರೆ, ಎಲ್ಲಿ ನೀರು ಸಿಕ್ಕುತ್ತದೆ ಅಲ್ಲಿ ನೀರು ಸರ್ಕ್ಯುಲೇಟ್ ಆಗಿ ಹೆಚ್ಚಿನ ಕೊಳವೆ ಭಾವಿ ಮಾಡಲಿಕ್ಕೆ ಬರುತ್ತದೆ: ಜಲ ಬರದೇಹೋದರೆ ಅದಕ್ಕೆ ಯಾರು ಜವಾಬ್ದಾರಿ? ಅದಕ್ಕೋಸ್ಕರ ಒಂದು "ಅಂಡರ್ ವಾಟರ್ ಸೆಲ್" ಮಾಡಿ, ಅದರಲ್ಲಿ ವಾಟರ್ ಡಿವೈನರ್ಸ್ ಸಹ ಇಟ್ಟುಕೊಂಡು ಸಹಾಯ ಮಾಡುತ್ತಿದ್ದಾರೆ. ಇದು ಯಾರ ತಪ್ಪು ? ಜಲ ನಮ್ಮ ಕೈಯಲಿ ಇರುತ್ತದೆಯೇ ?

ಬಾವಿಗಳ ಬಗ್ಗೆ ಹೇಳುತ್ತೇನೆ, ನಮ್ಮ ಸರ್ಕಾರದವರು 30-40 ಸಾವಿರ ಬಾವಿಗಳನ್ನು ತೋಡಿಸಿದ್ದುದು ನಿಜ ಇದಕ್ಕೆ ಕೊಟ್ಟ ಹಣದಿಂದ ರೈತರು ತಮ್ಮ ಮಗಳ ಮದುವೆ ಮಾಡಿಕೊಂಡರೆ, ಮತ್ತು ಇದನ್ನು ಬೇರೆ ರೀತಿಯಲ್ಲಿ ದುರುಪಯೋಗಿಸಿದರೆ ನಾವು ಏನು ಮಾಡುವುದು ? ಆದ್ದರಿಂದ ಇದರ ಬಗ್ಗೆ ಅವರ ಒಂದು ವಾದ ಸರಿಯಲ್ಲ ಎಂದು ನಾನು ಹೇಳುತ್ತೇನೆ.

ಆಹಾರ : 64 ಲಕ್ಷ ಟನ್ ಆಹಾರವನ್ನು ನಾವು ಪ್ರಕ್ಯೂರ್ ಮಾಡಬೇಕು ಎಂದು ಸರ್ಕಾರ ಹೊರಟಿದೆ. ಹಿಂದೆ ರೈತನಿಗೆ ಸರಿಯಾದ ಬೆಲೆ ಸಿಕ್ಕುತ್ತಾ ಇರಲಿಲ್ಲ. ನಾವು ಈಗ ರೈತರಿಗೆ ಸಪೋರ್ಟಿಂಗ್ ಪ್ರೈಸ್ ಕೊಡುತ್ತಿದ್ದೇವೆ. ಸುಗ್ಗಿ ಕಾಲದಲ್ಲಿ ಆಹಾರ ಧಾನ್ಯಗಳ ಬೆಲೆ ಸರ್ರನೆ ಇಳಿಯುತ್ತಿತ್ತು. ಈಗ ನಾವು ಸುಗ್ಗಿಯ ಕಾಲದಲ್ಲಿಯೂ ರೈತನಿಗೆ ಒಳ್ಳೆಯ ಸಪೋರ್ಟಿಂಗ್ ಬೆಲೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದಕ್ಕೆ ಒಂದು ನಿದರ್ಶನವನ್ನು ಕೊಡಬೇಕಾದರೆ, ರಾಗಿಯ ಬೆಲೆ ಯಾವಾಗ 200 ರೂಪಾಯಿ ಇತ್ತು ? 30 ರೂಪಾಯಿಗೆ

ಒಂದು ಪಲ್ಲ ರಾಗಿ ಇದ್ದುದನ್ನು ನಾವು ಕಂಡಿದ್ದೇವೆ. ಫರ್ಟಿಲೈಸರ್ಸ್ ಬೆಲೆ ಜಾಸ್ತಿಯಾಯಿತು. ಇದಕ್ಕೆ ಯಾರು ಕಾರಣರು ? ಫರ್ಟಿಲೈಜರ್ಸ್ ಬಂದಮೇಲೆ ಪ್ರತಿಯೊಬ್ಬರೂ ಇದನ್ನು ಉಪಯೋಗಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಾವು ಹಿಂದಿನ ಕಂದಾಚಾರದ ಪ್ರಕಾರ ''ಗ್ರೀನ್ ಮನ್ಯೂರ್'' ಮಾಡುವುದನ್ನು ಬಿಟ್ಟು ಫರ್ಟಿಲೈಸರ್ಸ್ ಬೇಕು ಎಂದರೆ ಇದಕ್ಕೆ ಯಾರು ಕಾರಣರು ? ಇದರ ಡಿಸ್ಟ್ರಿಬ್ಯೂಷನ್ ಇನ್ನೂ ಸಹ ನಾವು ಕಾರ್ಡ ಹೋಲ್ಡರ್ಸ್‌ಗೆ ಕೊಡಬೇಕು ಎಂದು ಮಾಡಿದ್ದೇವೆ. ಇದರ ಬಗ್ಗೆಯೂ ಇಲ್ಲಿ ಬೇಕಾದಷ್ಟು ಭಾಷಣ ಆಯಿತು. ಪ್ರತಿಯೊಂದರಲ್ಲಿಯೂ ಸುವ್ಯವಸ್ಥಿತ ರೀತಿಯಲ್ಲಿ ಮೀಡಿಯಂ ಫಾರ್ಮರ್ಸ್‌ಗೆ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೆ ಸಹಾಯ ಮಾಡಲಿಕ್ಕೆ ಇದನ್ನು ಮಾಡಿದ್ದೇವೆ.

ಅನಿಮಲ್ ಹಸ್ಬೆಂಡರಿ ಬಗ್ಗೆ, ಇದರ ಬಗ್ಗೆ ನಾವು ಏನೂ ಮಾಡಿಲ್ಲ ಎಂದು ಹೇಳಿದರು. ನಮ್ಮ ಸರ್ಕಾರ ಬಂದಮೇಲೆ ಈ ಬಾಬಿಗೋಸ್ಕರ 51 ಕೋಟಿ ರೂ. ಗಳನ್ನು ಖರ್ಚು ಮಾಡಿದ್ದೇವೆ. ಹಾಲಿನ ರೇಟಿನ ಬಗ್ಗೆ ನಾವು ಪಕ್ಕದ ಸಂಸ್ಥಾನಗಳನ್ನು ನೋಡಿದಾಗ ನಾವು ಇದರ ಬೆಲೆಯನ್ನು ಹೆಚ್ಚೇನೂ ಮಾಡಿಲ್ಲ ಎಂದು ಹೇಳಬೇಕಾಗುತ್ತದೆ. ವ್ಯವಸಾಯದ ಗ್ರೀನ್ ರೆವಲ್ಯೂಷನ್ ಆದ ಹಾಗೆ, ಅನಿಮಲ್ ಹಸ್ಬೆಂಡರಿಯಲ್ಲಿ ವೈಟ್ ರೆವಲ್ಯೂಷನ್ ಆಗುತ್ತದೆ. ರೈತನಿಗೆ ತಕ್ಷಣ ಹಣ ಸಿಕ್ಕಬೇಕಾದರೆ, ಅದು ಹಾಲಿನಲ್ಲಿಯೇ, ಇನ್ನು ಯಾವ ರೀತಿಯಲ್ಲಿಯೂ ಅವನಿಗೆ ತಕ್ಷಣ ಹಣ ಸಿಕ್ಕುವುದಿಲ್ಲ ಎನ್ನುವುದನ್ನು ತಾವೂ ಒಪ್ಪಿಕೊಳ್ಳುತ್ತೀರಿ ಎಂದು ನಂಬಿದ್ದೇನೆ.

ಇನ್ನು ಕೈಗಾರಿಕೆಗಳ ಬಗ್ಗೆ, ನಮ್ಮ ಮಂತ್ರಿಗಳು ಇಂಡಸ್ಟ್ರೀಸ್‌ಗಳನ್ನು ಡೀಸೆಂಟ್ರಲೈಸ್ ಮಾಡಬೇಕು. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇವುಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ರೂರಲ್ ಇಂಡಸ್ಟ್ರೀಸ್ ಸ್ಕೀಂ ಏನು ಇದೆ, ಇದರಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್, ಅರ್ಬನ್ ಡೆವಲಪ್‌ಮೆಂಟ್ ಬ್ಯಾಂಕ್ ಇದ್ದಹಾಗೆ ರೂರಲ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಮಾಡಿದರೂ ಸಹ ಇದಕ್ಕೆ ಅನುಕೂಲವಾಗುವುದು. ಕೈಗಾರಿಕೆಗಳನ್ನು ಹೆಚ್ಚಿನ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದರಿಂದ ಸಾಮಾನ್ಯ ಜನತೆಗೆ ಸಹಾಯವಾಗುತ್ತದೆ; ಉದ್ಯೋಗ ಅವಕಾಶ ಅಲ್ಲಿಯ ಜನರಿಗೆ ದೊರಕುತ್ತೆ ಮತ್ತು ವಲಸೆ ಬರುವುದು ತಪ್ಪುತ್ತೆ.

ಸೀರಂ ಇನ್ಸ್‌ಟಿಟ್ಯೂಟ್ ನಮ್ಮ ರಾಜ್ಯದಲ್ಲಿದೆ. ಸಾಧ್ಯವಾದ ಮಟ್ಟಿಗೆ ಬೇಕಾದ ಔಷಧಿಯನ್ನು ಇದು ತಯಾರು ಮಾಡುತ್ತಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಇದಕ್ಕೆ ಪ್ರೋತ್ಸಾಹ ಕೊಟ್ಟು ಇದರಲ್ಲಿ ವೆಟರ್ನರಿ ಗ್ರಾಜುಯೇಟ್ಸ್‌ಗೆ ಏನಕರೇಜ್‌ಮೆಂಟ್ ಕೊಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಈ Instituteನ್ನು ಸರ್ವ ವಿಧದಲ್ಲಿಯೂ ಉತ್ತೇಜನಗೊಳಿಸಬೇಕು.

ಶ್ರೀ ಕೋಣಂದೂರು ಲಿಂಗಪ್ಪ :—ಅಲ್ಲಿರುವ ಡೈರೆಕ್ಟರಿಗೆ ಭಡ್ತಿ ಕೊಟ್ಟಿದ್ದೀರಾ ?

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು :—ನಮಗೆ ಬೇಕಾದ್ದು ಕ್ವಾಲಿಟಿ, ಕ್ವಾಂಟಿಟಿ ಅಲ್ಲ. ಸಮಯೋಚಿತವಾಗಿ ಎಲ್ಲಾ ವರ್ಗದವರನ್ನು ಉತ್ತೇಜನ ಕೊಡಬೇಕು, ಸ್ವಾಮಿ

ಫಾರೆಸ್ಟ್ ಬಗ್ಗೆ ಬೇಕಾದಷ್ಟು ನಾವು ಮಾತನಾಡಿದ್ದೇವೆ. ಫುಡ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು plantation corporation forest Industrial corporation ಇತ್ಯಾದಿಗಳನ್ನು ಮಾಡಿದ್ದಾರೆ. ಇಲ್ಲಿ ಇದರ ಬಗ್ಗೆ ಕೇವಲ ಭಾಷಣ ಮಾತ್ರ ಆಗುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು 14 ಪರ್ಸೆಂಟ್ ಕಾಡು ಮಾತ್ರ ಇದೆ. ನ್ಯಾಷನಲ್ ಲೆವಲ್ 23 ಪರ್ಸೆಂಟ್ ಇದೆ ತಮಗೆ ಗೊತ್ತಿರಬಹುದು. ಬರೀ ಭಾಷಣದಿಂದ ಇದರ ಅಭಿವೃದ್ಧಿಯಾಗುವುದಿಲ್ಲ. Aforestation ಫಾರೆಸ್ಟ್ ಸ್ಕೀಂ ನ್ನು ಹೆಚ್ಚಿನ ರೀತಿಯಲ್ಲಿ ಮಾಡಿ, ಇದರಿಂದ ಜನರಿಗೆ ಸಹಾಯ ಮಾಡಬೇಕು. ಇಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅರಣ್ಯ ಇಲಾಖೆಗೂ ಮತ್ತು ರೆವಿನ್ಯೂ ಇಲಾಖೆಗೂ ನಿಕಟ ಸಂಬಂದ ಇರಬೇಕು. ಈಗಿನ ಪರಿಸ್ಥಿತಿಯಲ್ಲಿ ಇಲಾಖೆಯನ್ನು ಮ್ಯಾನೇಜ್ ಮಾಡುವವರು ಒಬ್ಬರು, ಆದರ ಲಾಭವನ್ನು ಪಡೆಯುವವರು ಒಬ್ಬರು. ಇಲಾಖೆಗಳಲ್ಲಿ ಒಂದಕ್ಕೊಂದಕ್ಕೆ "ಕೋಆರ್ಡಿನೇಷನ್" ಇರಬೇಕು, ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂಡಸ್ಟ್ರೀಸ್, ಸ್ಪೀಸಸ್ ಕಮರ್ಷಿಯಲ್ ಸ್ಪೀಸಿಸ್, ಮತ್ತು ಎಕನಾಮಿಕ್ ಸ್ಪೀಸಿಸ್ ಇವುಗಳ ಬಗ್ಗೆ ಹೊಸ ಹೊಸ ವಿಧಾನಗಳನ್ನು ಕಂಡುಹಿಡಿಯುತ್ತಿದ್ದಾರೆ. ಇವತ್ತಿನ ದಿವಸ ನಾವು ಫಾರೆಸ್ಟ್ ವೆಲ್ತನ್ನು ಅಭಿವೃಧ್ಧಿ ಮಾಡಲಿಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

ಫ್ಯಾಮಿನ್ ಬಗ್ಗೆ, ಡ್ರಾಟ್ ಪ್ರೋನ್ ಏರಿಯಾ ಎಂದು ಯಾವುದನ್ನು ಕರೆದಿದ್ದೀರೋ ಅಲ್ಲಿ ಯಾವಾಗಲೂ ಡ್ರಾಟ್ ಇರುತ್ತದೆ. ಇದಕ್ಕೂ ಸ್ವಲ್ಪ ಹೆಚ್ಚು ಹಣವನ್ನು ಒದಗಿಸಿದ್ದರೆ ಚೆನ್ನಾಗಿರುತ್ತಿತ್ತು. ಇವುಗಳನ್ನು ಪರ್ಮನೆಂಟ್ ಫ್ಯಾಮಿನ್ ಪ್ಲೇಸಸ್ ಎಂದು ಕರೆದು, ಒಂದು "ಪರ್ಮನೆಂಟ್ ಫ್ಯಾಮಿನ್ ರಿಲೀಫ್ ಕಮಿಟಿಯನ್ನು" ಮಾಡಿದರೆ ತಪ್ಪಾಗುವುದಿಲ್ಲ, ಈ ಕಮಿಟಿಗೆ ಹಣವನ್ನು ಕೊಟ್ಟು ಅನೇಕ ಇಲಾಖೆಗಳ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಸಹಾಯಕವಾಗುತ್ತದೆ. ಹಾರ್ಟಿಕಲ್ಚರ್, ಸಿರಿಕಲ್ಚರ್, ಫಿಷರೀಸ್ ಮುಂತಾದ ಇಲಾಖೆಗಳವರು ಒಂದು ಪ್ರೋಗ್ರಾಂ ಹಾಕಿಕೊಂಡು ಈ ಸ್ಥಳಗಳಲ್ಲಿ ಕೆಲಸ ಮಾಡಿದರೆ ಒಳ್ಳೆಯದು.

ಎಕನಾಮಿಕ್ ಗ್ರೋತ್ ಮತ್ತು ಎಂಪ್ಲಾಯಮೆಂಟ್ ಓರಿಯೆಂಟೆಡ್ ಸ್ಕೀಂ ಸ್ ಬಗ್ಗೆ ಮಾನ್ಯ ದೇವೇಗೌಡರು ಹೇಳಿದರು. ಫಾರೆಸ್ಟ್ ಸ್ಟೇಷನ್ ಸ್ಕೀಂ ಗಳನ್ನು ತೆಗೆದುಕೊಂಡರೆ ನಮ್ಮ ಜನರಿಗೆ ಕೆಲಸ ಸಿಕ್ಕುವುದಿಲ್ಲವೇ? ಲ್ಯಾಂಡ್ ರಿಫಾರಮ್ಸ್ ರ ಫಲವಾಗಿ. ಇವತ್ತು ನಮಗೆ ಸಿಕ್ಕುವುದು 4 ಲಕ್ಷ ಎಕರೆ ಜಮೀನು ಮಾತ್ರ. ಇದರಿಂದ ಗೇಣಿದಾರರಿಗೂ ಮತ್ತು ಬಂಡವಾಳ ಶಾಹಿಗಳಿಗೂ ಇರುವ ಸಂಬಂಧ ಸ್ವಲ್ಪ ಕಡಿಮೆಯಾಗುತ್ತದೆ. ಮತ್ತು ಉಳುವವನೇ ಭೂಮಿಯ ಒಡೆಯನಾಗುತ್ತಾನೆ. ಇದರಲ್ಲಿಯೂ ಎಷ್ಟು ಹಿಂಸೆಯಾಗುತ್ತದೆ ಎನ್ನುವುದೂ ತಮಗೆ ಗೊತ್ತಿದೆ. ಬಂಡವಾಳಷಾಹಿಗಳ ಪಾತ್ರ ಈಗ ಹೆಚ್ಚಾಗಿದೆ.

ಇಂಡಸ್ಟ್ರೀಸ್ ಬಗ್ಗೆ ಮಾತನಾಡುವಾಗ ನನಗೆ ಮಾನ್ಯ ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರು ನೆನಪು ಆಗುತ್ತದೆ. ನಮ್ಮ ಮಂಗಳೂರು ಪೋರ್ಟಿಗೆ ಕೇಂದ್ರದವರು ಹಣ ಕೊಟ್ಟಿದ್ದಾರೆ. ಕೇಂದ್ರ ಸರಕಾರದವರು ಏನೂ ಕೊಡು ಕೊಡುವುದಿಲ್ಲ ಎಂದು ಮಾನ್ಯ ದೇವೇಗೌಡರು ಹೇಳುತ್ತಿದ್ದರು. ಇದು ಯಾರ ದುಡ್ಡು ? ಭಟ್ಕಲ್ ಬಂದರು ಮಲ್ಪೆ ಬಂದರುಗಳು ಇವೆ. ಆದರೆ ಮಂಗಳೂರು ಬಂದರಿಗೆ ಸುಮಾರು 200 ಕೋಟಿ ರೂಪಾಯಿಗಳನ್ನು ಯಾರು ಕೊಟ್ಟಿದ್ದಾರೆಂದು ನಾನು ಕೇಳುತ್ತೇನೆ. ಕೇಂದ್ರ ಸರಕಾರವಲ್ಲವೇ ?

ಹಾಗೆಯೇ ಹೊಸ ಸೋಪ್ ಫ್ಯಾಕ್ಟರಿ ಮಾಡಬೇಕು ಎನ್ನುವ ಪ್ರಯತ್ನವನ್ನು ನಮ್ಮವರು ಮಾಡುತ್ತಿದ್ದಾರೆ. ವಿಶ್ವೇಶ್ವರಯ್ಯನವರು ಭದ್ರಾವತಿ ಕಾರ್ಖಾನೆ ತೆಗೆದಾಗ ಟೀಕೆ ಟಿಪ್ಪಣಿಗಳನ್ನು ಮಾಡಿದಂಥವರು ಅನೇಕರು. ಈಗ ಅದು ಈ ವರ್ಷ 2 ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಿದೆ ಎಂಬುದು ಸಂತೋಷ ಸಮಾಚಾರ. ಇದರ ಚರಿತ್ರೆಯಲ್ಲಿ ಎಂದೂ ಇಲ್ಲದ ಲಾಭವನ್ನು ಈ ವರ್ಷ ಮಾಡಿದೆ. ಯಾವ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಇಷ್ಟು ಲಾಭ ಬಂದಿದೆ.? ನಾವು ಅಧಿಕಾರ ತೆಗೆದುಕೊಂಡ ಮೇಲೆ ಎರಡು ಕೋಟಿ ರೂಪಾಯಿಗಳ ಆದಾಯ ಬರುವ ಹಾಗೆ ಮಾಡಿದ್ದೇವೆ. ಮೊನ್ನೆ ತಾನೇ, ಲೇದರ್ ಬೋರ್ಡ್ ಕಾರ್ಪೋರೇಷನ್, ವೂಲ್ ಬೋರ್ಡ್ ಕಾರ್ಪೋರೇಷನ್ ಮಾಡಿದ್ದಾರೆ. ಇದರಿಂದ ನೂರಾರು ಜನರಿಗೆ ಕೆಲಸ ಸಿಕ್ಕುತ್ತದೆ. ಎಕನಾಮಿಕ್ ಗ್ರೋತ್ ಏನೂ ಇಲ್ಲ ಎಂದು ಹೇಳಿದ್ದಕ್ಕೋಸ್ಕರ ಉತ್ತರ ಕೊಡುತ್ತಿದ್ದೇನೆ. ಈ ಇಂಡಸ್ಟ್ರೀಸ್‌ಗಳನ್ನು ಮಾಡಿದವರು ಯಾರು ?

ರೋಡಗಳ ಬಗ್ಗೆ, ರೂರಲ್ ಕಮ್ಯುನಿಕೇಷನ್ ಬೇಕು. ಒಪ್ಪಿಕೊಳ್ಳುತ್ತೇನೆ. ಆದರೆ ಎಲ್ಲಾ ಮೂಲಗಳಿಂದ ಬರುವ ಹಣವನ್ನು ರೋಡು ಮತ್ತು ಸೇತುವೆಗಳನ್ನು ಕಟ್ಟುವುದಕ್ಕೆ ಉಪಯೋಗಿಸುತ್ತಿದ್ದಾರೆ. ಫಾರೆನ್ ಎಕ್ಸ್‌ಚೇಂಜ್ ಗಳಿಸುವುದಕ್ಕೋಸ್ಕರ ಸಕ್ಕರೆ ಹೊರದೇಶಕ್ಕೆ ಕಳುಹಿಸುವುದು, ಮೋಟಾರ್ ವೆಹಿಕಲ್ ಟ್ಯಾಕ್ಸನ್ನು ರೋಡುಗಳಿಗೆ ಉಪಯೋಗಿಸುವುದು ಆದರೆ ಒಳ್ಳೆಯದು. ಆದರೆ ಒಟ್ಟಿನಲ್ಲಿ ಕಾಮನ್ ಮ್ಯಾನ್‌ಗೆ ಹೆಚ್ಚು ಟ್ಯಾಕ್ಸ್ ಹಾಕಬಾರದು.

ಶ್ರೀ ಕೋಣಂದೂರು ಲಿಂಗಪ್ಪ:— ಅವರು ಅಲ್ಲಲ್ಲಿ ಜಾಸ್ತಿ ಹಿಡಿಯುತ್ತಿದ್ದಾರೆ. ಹಾಜಿ ಮಸ್ತಾನ್, ಯೂಸೂಫ್ ಪಟೇಲ್, ಬಖಿಯಾ ಅವರನ್ನು ಹಿಡಿದು ಹಾಕಿದರು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.—ಸ್ಮಗ್ಲರ್ಸ್‌ನ್ನು ಹಿಡಿದು ಹಾಕುವುದು ನಮ್ಮ ನೀತಿ. ಅದೇನೂ ತಪ್ಪಲ್ಲವಲ್ಲಾ? ಯಾರು ತಪ್ಪು ಮಾಡಿದರೂ ಶಿಕ್ಷೆಗೆ ಗುರಿಯಾಗಬೇಕು.

MR. DEPUTY SPEAKER.—They are not here. The last name mentioned by the hon. Member *S*ri Lingappa stands expunged. Those persons whom he has mentioned are not here to defend themselves.

SRI S. M. KRISHNA.—I take strong objections to such insinuatory references to dignotories.

ಶ್ರೀ ಕೋಣಂದೂರು ಲಿಂಗಪ್ಪ.—ಅವ್ಯವಹಾರ ಮಾಡಿದವರ ಹೆಸರು ಹೇಳುವುದು ತಪ್ಪೇ ?

MR. DEPUTY SPEAKER.—If the hon. Member wants to drag on the matter, I will expunge all the names. I am bound by the Rules of Procedure. Let the matter be dropped there only.

ಶ್ರೀ ಕೆ. ಆರ್. ಶ್ರೀ ನಿವಾಸುಲುನಾಯಿಡು.--ಇನ್ನು ರೋಡ್ಸ್ ವಿಚಾರ ಹೇಳುವುದಾದರೆ ಮುಖ್ಯವಾಗಿ ನಮ್ಮಲ್ಲಿ ಮೇಜರ್ ರೋಡ್ಸ್‌ಗೆ ಕೇಂದ್ರದವರು ಸಹಾಯ ಮಾಡುತ್ತಿದ್ದಾರೆ. ನಮ್ಮಲ್ಲಿ ಸ್ಟೇಟ್ ಹೈವೇ ಇದೆ ಮತ್ತು ನಾಷನಲ್ ಹೈವೇ ಇವೆ. ವಿಲೇಜ್ ರೋಡ್ಸ್ ಇದೆ. ಇವಕ್ಕೆಲ್ಲಾ ಹಣ ಸಹಾಯ ಮಾಡುತ್ತಿದ್ದಾರೆ. ಹಿಂದೆಷ್ಟೂ ಇಷ್ಟು ರೋಡ್ ಆಗಿರಲಿಲ್ಲ. ನಿಮ್ಮ ಕಾಲದಲ್ಲೇ ಎಷ್ಟು ರೂರಲ್ ಕಮ್ಯೂನಿಕೇಷನ್ ರೋಡುಗಳು ಆಗಿವೆ ಹೇಳಿ. ಬರೀ ಟೀಕೇ ಮಾಡುವುದೇ ಆಗಿದ್ದರೆ ಎಷ್ಟು ಒಳ್ಳೆಯ ಕೆಲಸ ಮಾಡಿದ್ದೇವೆ ಅದನ್ನೂ ಹೇಳಲಿ. ಈ ಅಂಶವನ್ನು ಶ್ರೀ ಅರುಮುಗಂರವರು ತಮ್ಮ ವರದಿಯಲ್ಲಿ ಒಪ್ಪಿಕೊಂಡಿದ್ದಾರೆ. ಇದು ಒಳ್ಳೆ ಕೆಲಸವಲ್ಲವೇ ?

---

word/words expunged as ordered by the chair

ಇನ್ನು ಎಜುಕೇಷನ್ ಬಗೆಗೆ ಹೇಳುವುದಾದರೆ ಹೋದ ವರ್ಷ 24 ಸಾವಿರ ಗ್ರಾಜುಯೇಟ್ಸ್ ಆಗಿದ್ದಾರೆ, ಈ ವರ್ಷ 36 ಸಾವಿರ ಗ್ರಾಜುಯೇಟ್ ಆಗುವುದಾದರೆ ಹಾಗಾದರೆ ವಿದ್ಯಾಭ್ಯಾಸ ಕೊಟ್ಟದ್ದು ತಪ್ಪೇ ? ಪ್ರಧಾನ ಮಂತ್ರಿಗಳಾದ ಇಂದಿರಾಗಾಂಧಿಯವರು ಸೈನ್‌ಟಿಸ್ಟ್ ಮತ್ತು ಟೆಕ್ನಾಲಜಿಸ್ಟ್‌ಗೆ ಬಗ್ಗೆ ಏನು ಹೇಳಿದರು ಎಂದರೆ ? job creaters ಆಗಬೇಕು job hunters ಆಗಬಾರದು ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ ಆಗಬೇಡಿ ಎಂದು. ಆ ರೀತಿ ಎಜುಕೇಷನ್ ಕೊಡುವುದು ತಪ್ಪು. ಪ್ರತಿಯೊಬ್ಬರೂ ವಿದ್ಯಾವಂತರಾಗಿ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳಲೇಬೇಕು. ಈವೊತ್ತಿನ ವಿದ್ಯಾಭ್ಯಾಸ ಜಾಬ್ ಓರಿಯೆಂಟೆಡ್ ವಿದ್ಯಾಭ್ಯಾಸ ಆಗಬೇಕು ; ಎನ್ನುವುದನ್ನು ನಾನು ಒಪ್ಪುತ್ತೇನೆ. ಈವೊತ್ತಿನ ದಿವಸ ಕಾಲೇಜು, ಯೂನಿವರ್ಸಿಟಿಗಳಲ್ಲಿ we have to improve the quality of education. ಹಿಂದಿನ ಬಡ್ಜೆಟ್ ನೋಡಿದರೆ ಈ ವಿದ್ಯಾಭ್ಯಾಸಕ್ಕೆ ಸರ್ಕಾರದವರು 80 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ, ಅದರ ಹಿಂದಿನ ವರ್ಷ 60 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ ಆದರೆ, ಈ ವರ್ಷ ಸುಮಾರು 93 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಇದು ಪ್ರೊಗ್ರೆಸೀವ್ ಬಡ್ಜೆಟ್ ಅಲ್ಲವೇ ಸ್ವಾಮಿ ? ತಾವೇ ಹೇಳಿ. ಸ್ವಾಮಿ, ನಮ್ಮ ದೇಶದಲ್ಲಿ ಅವರು ವಿದ್ಯಾವಂತರಾದ ಮಾತ್ರಕ್ಕೆ ಅವರು ಜಾಬ್ ಹಂಟರ್ಸ್ ಆಗಬೇಕಾಗಿಲ್ಲ. ಆದುದರಿಂದ ನಾನು ಅವರಿಗೆ ವಿದ್ಯಾಭ್ಯಾಸ ಕೊಡುವುದೇನೂ ತಪ್ಪಲ್ಲ. ಆದರೆ ಅವರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವ ಹಾಗೆ ರಾಜ್ಯದಲ್ಲಿರುವ ಹಿರಿಯ ನಾಯಕರು ಅವರಿಗೆ ಹುರಿದುಂಬಿಸಬೇಕು. ಅವರು ಕಾಲೇಜಿನಲ್ಲಿ, ಯೂನಿವರ್ಸಿಟಿಯಲ್ಲಿ ಎಕನಾಮಿಕ್ಸ್ ಓದುವುದರಿಂದ, ಸೋಷಯಲ್ಸ್ ಓದುವುದರಿಂದ ಅವರು ಹೇಳಿದ್ದನ್ನು ಅರ್ಥ ಮಾಡಿಕೊಳ್ಳುತ್ತಾರೆ. ಇದರ ಬಗ್ಗೆ ಕಂಪಲ್ಸರಿ ಎಜುಕೇಷನ್ ಸ್ಕೀಮ್ ಮಾಡಿರುವುದನ್ನು ತಾವು ಒಪ್ಪಿಕೊಳ್ಳುತ್ತೀರಿ. ಆದರೆ ಅದನ್ನು ಇಂಪ್ರೂ ಮಾಡಬೇಕು. ಇದು ವಿದ್ಯಾರ್ಥಿಗಳದ್ದು ತಪ್ಪೇ ಅಥವಾ ಅವರನ್ನು ಪ್ರೋತ್ಸಾಹಿಸುವುದರಲ್ಲಿ ತಪ್ಪೇ, ಇದನ್ನು ಯೋಚನೆ ಮಾಡಿ.

ಇನ್ನು ಲಿಬರ್‌ಲೈಸೇಷನ್ ಗ್ರಾಂಟ್ ಇನ್ ಕೋಡ್ ಮಾಡಿದ್ದೇವೆ. ಈ ಬಗ್ಗೆ ಮೊನ್ನೆ ಭಾಷಣ ಮಾಡಿ ಹೇಳಿದ್ದಾರೆ. ಆದರೆ ರಾಜ್ಯದಲ್ಲಿರುವ ಪ್ರೈವೇಟ್ ಇನ್ಸ್ಟಿಟ್ಯೂಷನ್ ಕಮರ್ಷಿಯಲ್ ಇನ್ಸ್ಟಿಟ್ಯೂಟ್‌ಗಳಾಗಿ ಆಗಿರಬಾರದು. ಅವಕ್ಕೆ ಎನ್‌ಕರೇಜ್ ಮಾಡಬೇಕು. ಆದರೆ ಅದನ್ನು ಒಂದು ಕಂಟ್ರೋಲ್‌ನಲ್ಲಿ ಇರಬೇಕು ಎಂದು ಒಂದು ಹೆಜ್ಜೆ ಮುಂದೆ ಇಟ್ಟರೆ ಅದು ಸಹಜವೇ ಅಲ್ಲವೇ ಸ್ವಾಮಿ, ತಾವು ಯೋಚನೆ ಮಾಡಿ. ಇನ್ನು ಅದರ ಬಗ್ಗೆ ಒಂದು ವಿಚಾರ ಹೇಳುವುದಾದರೆ ನಮ್ಮ ಮಕ್ಕಳಿಗೆ ಆಡಿಯೋ ವಿಜುಯಲ್ ಎಜುಕೇಷನ್‌ಗೆ ಕೇಂದ್ರದವರು ನೆರವಿಗೆ ಬಂದಿದ್ದಾರೆ. ಅದು ಒಳ್ಳೆಯದಲ್ಲವೇ ಹೇಳಿ ಸ್ವಾಮಿ.

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು)

ಇನ್ನು ಸ್ಪೋರ್ಟ್ ಮತ್ತು ಯೂತ್ ಸರ್ವಿಸಸ್ ಬಗ್ಗೆ ಹೇಳುವುದಾದರೆ ಕೇಂದ್ರ ಸರ್ಕಾರದವರು ನೆರವು ನೀಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆ. ಅವರು ಏನೂ ಕೊಡುತ್ತಾ ಇಲ್ಲ ಎಂದು ಹೇಳಿದರೆ ಅದು ಸರಿಯೇ ? All work and no play makes a dull boy" ಎಂಬ ಪಡೆ ನುಡಿಯನ್ನು ಜ್ಞಾಪಿಸಿಕೊಳ್ಳಬೇಕು.

ಇನ್ನು ಹೌಸಿಂಗ್ ಪ್ರಾಬ್ಲಮ್ ಬಗ್ಗೆ ಹೇಳುವುದಾದರೆ ಇದು ಒಂದು ನ್ಯಾಷನಲ್ ಪ್ರಾಬ್ಲಮ್ ಒಂದೇ ವರ್ಷದಲ್ಲಿ ಈ ಬಗ್ಗೆ 5 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಹೋದ ವರ್ಷ 14 ಸಾವಿರ ಮನೆಗಳನ್ನು ಕಟ್ಟಿಸಿದ್ದಾರೆ. ಈ ವರ್ಷ 20 ಸಾವಿರ ಮನೆಗಳನ್ನು ಕಟ್ಟಿಸುವುದಕ್ಕೆ 5 ಕೋಟಿ ರೂಪಾಯಿ ಒದಗಿಸಿದ್ದಾರೆ. ಈ ಹೌಸಿಂಗ್ ಪ್ರಾಬ್ಲಮ್‌ಗೆ ಕೇಂದ್ರದವರೂ ಕೂಡ ಸಹಾಯ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಈ ಸ್ಕೀಮನ್ನು ಜಾರಿಗೆ ತರಲು ಹೌಸಿಂಗ್ ಬೋರ್ಡನ್ನು ರಚಿಸಿರುವುದು ತಮ್ಮ ಗಮನ ಸೆಳೆಯಲು ಬಯಸುತ್ತೇನೆ.

ಇನ್ನು ಸ್ಲಂ ಕ್ಲಿಯರೆನ್ಸ್ ಬಗ್ಗೆ ಹೇಳುವುದಾದರೆ ಕೇಂದ್ರ ಸರ್ಕಾರದವರು ಖಚಿತವಾಗಿ ಹೇಳಿದ್ದಾರೆ. 8 ಲಕ್ಷ ಪ್ರಜೆಗಳು ಎಲ್ಲಿ ಯಾವ ಪಟ್ಟಣದಲ್ಲಿ ಇದ್ದಾರೋ ಅಲ್ಲಿ ಸಹಾಯ ಮಾಡುತ್ತೇವೆ ಎಂದು. ಮತ್ತು ಅನೇಕ ಫೈನಾನ್ಸ್ ಇನ್ಸ್ಟಿಟ್ಯೂಷನ್ಸ್‌ನಿಂದಲೂ ಈ ಹೌಸಿಂಗ್ ಪ್ರಾಬ್ಲಮ್ಸ್‌ಗೆ ಸಹಾಯ ಮಾಡುತ್ತಿದ್ದಾರೆ. ಅಲ್ಲದೆ ಈಗ ಹೌಸಿಂಗ್ ಬೋರ್ಡ್‌ನವರು ಏನು ಒಂದು ಹುಡ್ಕೋ ಸ್ಕೀಂ ತೆಗೆದುಕೊಂಡಿದ್ದಾರೆ ಅದಕ್ಕೆ ಅವರು ಸಹಾಯ ಮಾಡುತ್ತಿಲ್ಲವೇ ಹೇಳಿ. ಈ ರೀತಿಯಾಗಿ ಕೇಂದ್ರ ಸರ್ಕಾರದವರು ನಮಗೆ ನೆರವು ನೀಡುತ್ತಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಬೇಕು.

ಆರೋಗ್ಯ ಇಲಾಖೆ, ಇನ್ನು ಹೆಲ್ತ್ ಬಿಲ್‌ಗೆ ಹಿಂದಿನ ವರ್ಷಕ್ಕಿಂತ ಹೆಚ್ಚು ಹಣ ಒದಗಿಸಿದ್ದಾರೆ ಎಂದು ಹೇಳಬಹುದು. ಉದಾಹರಣೆಗೆ ಆಲ್ ಇಂಡಿಯಾ ಮೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್‌ಗೆ ಮತ್ತು ಟ್ಯೂಬರ್‌ಕ್ಯೂಲೋಸಿಸ್ ಮತ್ತು ಸೆಂಟ್ ಜಾನ್ ಮೆಡಿಕಲ್ ಕಾಲೇಜಿಗೆ ಇದಕ್ಕೆ ಕೇಂದ್ರದವರು ನಮಗೆ ಸಹಾಯ ನೀಡಿಲ್ಲವೇನು ? ಇನ್ನು ಅವರು ಮಲತಾಯಿ ಧೋರಣೆ ತಾಳುತ್ತಿದ್ದಾರೆ ಎಂದು ಹೇಳಿದರೆ ಜನ ಮೆಚ್ಚುತ್ತಾರೇನು ? ಇದನ್ನು ತಾವೇ ಸ್ವಲ್ಪ ಆಲೋಚನೆ ಮಾಡಿ ಹೇಳಿ.

ಇನ್ನು ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಹೇಳುವುದಾದರೆ ಇದಕ್ಕೆ ಈಗ ಒಂದು ಕಮೀಷನ್ ಮಾಡಿದ್ದಾರೆ. ತಮಗೆಲ್ಲರಿಗೂ ಗೊತ್ತಾದ ವಿಷಯವಲ್ಲವೇ ?

ಶ್ರೀ ಕೋಣಂದೂರು ಲಿಂಗಪ್ಪ.—ಮೊದಲು ವರದಿ ಕೊಡಿ.

ಶ್ರೀ ಕೆ. ಆರ್. ಶ್ರೀವಾಸುಲು ನಾಯಿಡು.—ವನ್ ಆಫ್ ದಿ ಬೆಸ್ಟ್ ಇನ್ ದಿ ಕಂಟ್ರಿ ವರದಿ ಕೊಡುತ್ತೇನೆ. ಇನ್ನು ಹರಿಜನ ಮತ್ತು ಗಿರಿಜನರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಇವರು ಬಹಳ ನೊಂದ ಜನ, ಇವರಿಗೆ ಸಹಾಯ ಮಾಡಬೇಕೆಂದು ಇವರಿಗೆ ಒಂದು ಲೀಗಲ್ ಸೆಲ್ ಮಾಡಿದ್ದಾರೆ, ಇದರ ಜೊತೆಗೆ ಐ. ಜಿ. ಪಿ. ಆಫೀಸಿನಲ್ಲೂ ಕೂಡ ಒಂದು ವಿಶೇಷ ಸ್ಪೆಷಲ್ ಸೆಲ್ ಮಾಡಿದ್ದಾರೆ. ಈ ರೀತಿಯಾಗಿ ಹಿಂದೆ ಅವರಿಗೆ ಒಂದು ವಿಶೇಷವಾದ ಸಹಾಯ ಎಲ್ಲಿ ಮಾಡಿದ್ದಾರೆ ಹೇಳಿ. ನಾವು ಒಳ್ಳೆ ಕೆಲಸ ಮಾಡಿದ್ದನ್ನು ತಾವು ಒಪ್ಪಿಕೊಳ್ಳಿ ಟೀಕೆ ಮಾಡಬೇಡಿ.

ಇನ್ನು ಡೆವಲಪ್‌ಮೆಂಟ್ ಆಫ್ ವೆಸ್ಟರ್ನ್ ಪಾರ್ಟ್ಸ್‌ಗೆ ಯಾವ ರೀತಿ ಒಂದು ಬೋರ್ಡ್ ಮಾಡಿದ್ದೀರೋ ಅದೇ ರೀತಿ ಡೆವಲಪ್‌ಮೆಂಟ್ ಆಫ್ ಬ್ಯಾಕ್‌ವರ್ಡ್ ಏರಿಯಾಸ್‌ಗೆ ಒಂದು ಬೋರ್ಡ್ ಆಗಬೇಕು. ಅವರ ಪುರೋಭಿವೃದ್ಧಿಯಾಗಲು ಸಹಾಯವಾಗುತ್ತೆ. ಕರಾವಳಿಯಲ್ಲಿರತಕ್ಕಂಥ ಜನರಿಗೆ ಮಲೆನಾಡು ಏರಿಯಾದಲ್ಲಿರತಕ್ಕಂಥ ಜನಕ್ಕೆ ದೈವದತ್ತವಾಗಿ ಬಂದಿರತಕ್ಕಂಥ ಸಂಪತ್ತು, ಖನಿಜಸಂಪತ್ತು ಇದೆ. ಆದುದರಿಂದ ಆ ಸಂಪತ್ತು ಉಪಯೋಗಿಸಿಕೊಂಡು ದೇಶದ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಯಾವ ರೀತಿಯಾಗಿ ಡೆವಲಪ್‌ಮೆಂಟ್ ಆಫ್ ವೆಸ್ಟರ್ನ್ ಪಾರ್ಟ್ಸ್ ಅಂತ ಒಂದು ಬೋರ್ಡ್ ಏನು ಮಾಡಿದ್ದೀರೋ ಅದೇ ರೀತಿ ಬ್ಯಾಕ್‌ವರ್ಡ್ ಏರಿಯಾ ಆಗಿರತಕ್ಕಂಥ ತುಮಕೂರು, ಚಿತ್ರದುರ್ಗ, ಬಳ್ಳಾರಿ, ಮತ್ತು ಬಿಜಾಪುರ ಮುಂತಾದ ಪ್ರದೇಶಗಳಿಗೆ ಒಂದು ಡೆವಲಪ್‌ಮೆಂಟ್ ಬೋರ್ಡ್ ಆಗಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ದಿ ಬಡ್ಜೆಟ್ ಈಸ್ ಎ ಪ್ರೋಗ್ರೆಸೀವ್ ಒನ್ ಎಂದು ಹೇಳಬಹುದು.

ಇನ್ನು ನಮ್ಮ ಕನ್ನಡ ಭಾಷೆ ಬಗ್ಗೆ ಹೇಳುವುದಾದರೆ ಶ್ರೀ ಅನಂತ ಸುಬ್ಬರಾಯರು ಒಂದು ಕೀಬೋರ್ಡ್ ಅಂತ ಮಾಡಿ ಬಹಳ ವರ್ಷವಾಯಿತು. ಅದು ಬಂದಿರುವುದು ಬಹಳ ಸಂತೋಷ. ನಮ್ಮ ಕನ್ನಡ ಭಾಷೆಯನ್ನು ಈಗ ಹೆಚ್ಚು ಹೆಚ್ಚು ಬಳಸುವುದಕ್ಕಾಗಿ 2000 ಕನ್ನಡ ಟೈಪ್‌ರೈಟರನ್ನು ಆರ್ಡರ್ ಮಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ :—ಆರ್ಡರ್ ಮಾಡಿ ಎಷ್ಟು ದಿವಸವಾಯಿತು ? ಯಾವಾಗ ಬರುತ್ತದೆ ?

ಶ್ರೀ ಕೆ. ಆರ್ ಶ್ರೀನಿವಾಸಲು ನಾಯಿಡು :—ತಮಗೆ ಹೇಳುವುದಾದರೆ ಅವರು ಆರ್ಡರ್ ಮಾಡಿದ್ದಾರೆ, ಬರುತ್ತದೆ. ಯಾವಾಗ ಬರುತ್ತದೆ ಎಷ್ಟು ದಿವಸದಲ್ಲಿ ಬರುತ್ತದೆ ಎಂದರೆ ಆರ್ಡರ್ ಕೊಟ್ಟ ಮೇಲೆ ಬಂದೇ ಬರುತ್ತದೆ ಸ್ವಾಮಿ

ಉಪಾಧ್ಯಕ್ಷರು :—ಮಧ್ಯೆ ಇಂಟರ್‌ಪ್ಟ್ ಮಾಡಬೇಡಿ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು .—ಇನ್ನು ಸರ್ಕಾರೀ ನೌಕರರ ಬಗ್ಗೆ ಹೇಳುವುದಾದರೆ ಅವರಿಗೆ ಕೇಂದ್ರದ ಮಾದರಿಯಲ್ಲಿ ತುಟ್ಟಿಭತ್ಯದ ಒಂದು ಕಂತು ಕೊಡಬೇಕು ಅಂತ ತೀರ್ಮಾನ ಮಾಡಿ ಡಿ. ಎ. ಹೆಚ್ಚಿಸಿದ್ದಾರೆ. ಇದರ ಜೊತೆಗೆ ಅವರು ಒಂದಿಷ್ಟು ನೆರವು ನೀಡುವುದಕ್ಕಾಗಿ ಅನೇಕ ಕ್ರಮಗಳನ್ನು ಕೈಗೊಂಡಿದ್ದಾರೆ. ಇದರ ಜೊತೆಗೆ ಓಲ್ಡ್ ಏಜ್ ಪೆನ್‌ಷನ್ ಕೂಡ 10 ರೂಪಾಯಿ ಜಾಸ್ತಿ ಮಾಡಿದ್ದಾರೆ. ಅವರ ಬಗ್ಗೆ ಎಷ್ಟು ಸಹಾಯ ಮಾಡಬೇಕೋ ಅಷ್ಟನ್ನು ಸರ್ಕಾರದವರು ಮಾಡಿದ್ದಾರೆ. ವಿಧವೆಯರಿಗೆ ಸಹ 10 ರೂಪಾಯಿಗಳನ್ನು ಹೆಚ್ಚಿಸಿದ್ದಾರೆ.

ಇನ್ನು ಅರ್ಬನ್ ಟ್ಯಾಕ್ಸ್ ಬಗ್ಗೆ ಶ್ರೀಮಾನ್ ದೇವೇಗೌಡರು ಹೇಳಿದರು. ಈ ಬಗ್ಗೆ ಹೇಳುವುದಾದರ ಯಾವ ಸರ್ಕಾರವೇ ತಾನೇ ಟ್ಯಾಕ್ಸ್ ಇಲ್ಲದೇ ಸರ್ಕಾರವನ್ನು ನಡೆಸುವುದಕ್ಕಾಗುತ್ತದೆ ಹೇಳಿ ಸ್ವಾಮಿ. ಸರ್ಕಾರದವರು ಹಾಕಿರುವ ಟ್ಯಾಕ್ಸನ್ನು ಕೊಡುವುದು ನಮ್ಮ ಮುಖ್ಯ ಕರ್ತವ್ಯ. Tax Evident ಎಷ್ಟು ಜನರಿದ್ದಾರೆ. ಸರ್ಕಾರಕ್ಕೆ ಬರುವ ಹಣ ಕಮ್ಮಿಯಾಗುವುದಿಲ್ಲವೇ ? ಪ್ರತಿಯೊಬ್ಬರು ತಮ್ಮ ಜವಾಬ್ದಾರಿಯನ್ನು ಅರಿತು, ನಡೆದುಕೊಳ್ಳುವುದು ನಮ್ಮ ಕರ್ತವ್ಯವಲ್ಲವೇ ಸ್ವಾಮಿ.

ಹಿಂದೆ ಹಾಕಿದ ಟ್ಯಾಕ್ಸುಗಳು ಹಾಗೇ ಬಾಕೀ ಉಳಿದಿವೆ. ಇದನ್ನೂ ಇನ್ನೂ ಪೂರ್ಣವಾಗಿ ವಸೂಲು ಮಾಡಲಾಗಲಿಲ್ಲ. ತೆರಿಗೆ ಹಾಕಬೇಕು. ತೆರಿಗೆ ಹಾಕದೇ ಇದ್ದರೆ ಜನರಿಗೆ ಯಾವ ಅನುಕೂಲಗಳನ್ನೂ ಮಾಡುವುದಕ್ಕಾಗುವುದಿಲ್ಲ. ಇದು ಎಲ್ಲರಿಗೂ ತಿಳಿದಿರುವ ವಿಚಾರ. ಹಾಗೆ ನಮ್ಮ ಶ್ರೀ ದೇವೇಗೌಡರು ಮಾತಾಡುವಾಗ ಲೆಟರ್ ಆಫ್ ಕ್ರೆಡಿಟ್ ಬಗ್ಗೆ ತಿಳಿಸಿದರು. ಇದು ಸರಿಯಲ್ಲ. ಹಾಗೇ ಹಿಂದೆ ನಮ್ಮ ಸರಕಾರ ಅನೇಕ ಕಮಿಟಿಗಳನ್ನೂ ಮಾಡಿದ್ದರು. ಇದರಲ್ಲಿ ಸರಿಯಾಗಿ ಕೆಲಸಗಳಾಗಲಿಲ್ಲ ಎಂದರು. ಮತ್ತು ಆಡ್ಮಿನಿಸ್ಟ್ರೇಟಿವ್ ಮೆಷಿನರಿ ಬಗ್ಗೆ ಕೆಲವು ಮಾತುಗಳನ್ನು ಹೇಳಿದರು. ನಾವು ನಮ್ಮ ಸರಕಾರ ಬಂದ ಮೇಲೆ ಹೊಸದಾಗಿ ಅಡ್ಮಿನಿಸ್ಟ್ರೇಟಿವ್ ಮೆಷಿನರಿ ಮಾಡಲಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು ನಾಲ್ಕುವರೆ ಲಕ್ಷ ನೌಕರರುಗಳಿಗಾಗಿ ಸುಮಾರು 105 ಕೋಟಿಯಷ್ಟು ಹಣ ಖರ್ಚು

ಮಾಡುತ್ತಿದ್ದೇವೆ, ಎಂದರೆ, ಮೂರನೇ ಒಂದು ಭಾಗದಷ್ಟು ಹಣವನ್ನು ವೆಚ್ಚ ಮಾಡುತ್ತಿದ್ದೇವೆ. ಇದರಲ್ಲಿ ಎಫಿಷಿಯನ್ಸಿ ಇಲ್ಲ ಎಂದು ಹೇಳುವದು ಸರಿಯಲ್ಲ. ನಮ್ಮ ಸರಕಾರ ಬಂದಮೇಲೆ ಅನೇಕ ಒಳ್ಳೆಯ ಮತ್ತು ಯೋಗ್ಯವಾದ ಹಾಗೂ ಉಪಯುಕ್ತವಾದ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದೆ. ಇನ್ನು "ಫಿಲಂ ಬಗ್ಗೆ" ಟೀಕೆ ಮಾಡಿದರು ಇದು ಸರಿಯಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಮಿನಿ ಥಿಯೇಟರು ಮಾಡಲು ಇದರ ಹಣ ವಿನಿಯೋಗವಾಗುತ್ತದೆ. ಇದರ ಉದ್ದೇಶ ನಮ್ಮ ಗ್ರಾಮಾಂತರ ಪ್ರದೇಶದಲ್ಲಿರುವವರನ್ನು ಅಭಿವೃದ್ಧಿ ಮಾಡಿ ಇದರಿಂದ ಜನತೆಗೆ ಒಂದು ರೀತಿಯ ವಿದ್ಯಾಭ್ಯಾಸ ಕೊಡಲು ಸಹಾಯಕವಾಗಿದೆ. ಗ್ರಾಮಾಂತರ ಪ್ರದೇಶಗಳಿಗೂ ನಗರವಾಸಿಗಳಿಗೂ ಸ್ವಲ್ಪಮಟ್ಟಿನ ಅನುಕೂಲ ಗಳನ್ನು ಮಾಡಲು ಮಾಡಿರುವ ಯೋಜನೆ. ಒಳ್ಳೆಯದಲ್ಲವೇ ?

This is one of the easiest channels. When we want benifits but at the same time, we must share the burden also. Without taxation how can we run the Administration? ಕಲೆಯ ಅಭಿವೃದ್ಧಿಗಾಗಿ

4-30 P.M.

ಉತ್ತೇಜನ ಕೊಡಬೇಕೆಂದು ಮಾಡಿರುವುದು ಸರಿಯಲ್ಲ ಎಂದು ಹೇಳುವುದು ಯೋಗ್ಯವಲ್ಲ. ಮೊದಲು ಬರೀ 50 ಸಾವಿರ ಕೊಡುತ್ತಿದ್ದರು. ಇದನ್ನು ಈಗ ಒಂದು, ಒಂದೂವರೆ ಲಕ್ಷದಷ್ಟು ಹೆಚ್ಚು ಮಾಡಿರುವುದರಿಂದ ಇದೇನೂ ಹೆಚ್ಚಲ್ಲ. ಇದರಿಂದ ಗ್ರಾಮಾಂತರ ಪ್ರದೇಶದ ಜನಗಳಿಗೆ ಬಹುಮಟ್ಟಿನ ಅನುಕೂಲಗಳಾಗು ತ್ತವೆ ಇನ್ನು ಭೂಸುಧಾರಣೆ ತಂದಿರುವುದರಿಂದ ಸುಮಾರು 36 ಸಾವಿರ ಜನರು ಲ್ಯಾಂಡ್‌ಲೆಸ್ ಹೋಲ್ಡರುಗಳಾಗುತ್ತಾರೆ. ಇವರಿಗೆ ದುಡ್ಡೆಲ್ಲಿಂದ ಬರ ಬೇಕೆಂದು ಹೇಳಿದರು. ಇದಕ್ಕೆ ಸರಕಾರ ಒದಗಿಸಿಕೊಡುತ್ತಾರೆ. ಮತ್ತು Compensation ಕೊಡಲು Nationalaised Bank ಹಣ ಸಹಾಯ ಮಾಡಲು ಮುಂದೆಬರಬೇಕು.

ಮಾನ್ಯ ಅರ್ಥ ಸಚಿವರು ಇಲ್ಲಿ ಮಂಡಿಸಿರುವ ಆಯುವ್ಯಯ ಪತ್ರ ತುಂಬಾ ಸೂಕ್ತವಾಗಿದೆ. ಇದನ್ನು ಎಲ್ಲರೂ ಒಪ್ಪಬೇಕೆಂದು ಹೇಳುತ್ತೇನೆ ಮತ್ತು ಇದಕ್ಕೆ ನನ್ನ ಸಂಪೂರ್ಣ ಬೆಂಬಲ ಕೊಡುತ್ತೇನೆ ಮತ್ತು ಮಾನ್ಯ ಅಧ್ಯಕ್ಷರು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಜೈ ಕರ್ನಾಟಕ.

*ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕ ಆಯುವ್ಯಯ ಪತ್ರವನ್ನು ತೀರಾ ಅನಿವಾರ್ಯ ವಾಗಿ ವಿರೋಧಿಸಬೇಕಾಗಿದೆ. ಕಾರಣವೇನೆಂದರೆ, ಏನಾದರೂ ಮೂಲಭೂತವಾದ ಬದಲಾವಣೆಗಳನ್ನು ಮಾಡುವುದಕ್ಕೆ ಕೆಲವಾರು ಆಸ್ತಿಭಾರಗಳು ಇರಬೇಕು. ಇದರಿಂದ ಆಯುವ್ಯಯದ ಉದ್ದೇಶ ಸಾಧನೆಯಾಗುತ್ತದೆ ಎನ್ನುವ ನಂಬಿಕೆ ಇಟ್ಟು ಕೊಂಡಿರತಕ್ಕ ನಾವುಗಳು ಇಂದು ಆ ನಂಬಿಕೆಯನ್ನು ಸಂಪೂರ್ಣವಾಗಿ ಕೈ ಬಿಡಬೇಕಾಗಿ ಬಂದಿದೆ. ಇದರಲ್ಲಿ ಏನೂ ಇಲ್ಲ. ಎಲ್ಲಾ ಬರೀ ಅಡ್ಜಸ್ಟುಮೆಂಟಿ ನಲ್ಲೇ ಆಗಿದೆ. ಒಂದು ಸುತ್ತು ಒಂದು ಕಡೆಗೆ ತಿರುಗಿಸುವುದು. ಇನ್ನೊಂದು ಸುತ್ತು ಬೇರೆ ಕಡೆಗೆ ತಿರುಗಿಸುವುದು. ಹೀಗೆ ಯಾವ ಹೊಂದಾಣಿಕೆಯೂ ಇಲ್ಲ ದಂತಹ ಒಂದು ಆಯುವ್ಯಯ ಪತ್ರವಾಗಿದೆ ಆ ರೀತಿಯಲ್ಲಿ ಇಲ್ಲಿ ಸರ್ಕಸ್ ಮಾಡುತ್ತಾ ಕೆಲವಾರು ವಿಚಾರಗಳನ್ನು ಹೇಳಿದ್ದಾರೆ. ಏನಾದರೂ ಈ ದೇಶದಲ್ಲಿ ಇಲ್ಲವೇ ಸಮಾಜದಲ್ಲಿ ಸ್ವಲ್ಪವಾದರೂ ಬದಲಾವಣೆಗಳನ್ನು ಮಾಡಲು ಇದರಲ್ಲಿ ಅಡಿಪಾಯವನ್ನು ಹಾಕಿದ್ದಾರೆಯೇ ಎಂದರೆ ಇದರಲ್ಲಿ ಏನೂ ಮಾಡಿಲ್ಲ ಎನ್ನುವುದು ಗೊತ್ತಾಗುತ್ತದೆ. ಇದಕ್ಕೆ ಕಾರಣ ಜನ್ಮಾಂತರದಿಂದ ಬಂದಿರುವ ಹಳೆಯ ಕಾಂಗ್ರೆಸ್ಸು ನೀತಿಗಳ ನೆನಪುಗಳು ಇನ್ನೂ ಪರಿಣಾಮಕಾರಿಯಾಗಿ ಹೋಗಿಲ್ಲ. ಸಮಾಜವಾದಿ ಸರಕಾರದಲ್ಲಿ ನಂಬಿಕೆ ಇರುವ ಸರಕಾರ ಎಂದು ನಾವು ನಂಬಿಕೆ ಇಟ್ಟಿದ್ದೆವು ಮತ್ತು ಇವರ ಸರಕಾರ ಬಂದ ಮೇಲೆ ಅನೇಕ ರೀತಿಯಾದ ಬದಲಾವಣೆಗಳಾಗಬಹುದು ಎಂದು ನಂಬಿದ್ದೆವು. ಆದರೆ ಇಂದು ಆ ನಮ್ಮ ನಂಬಿಕೆಯೆಲ್ಲಾ ಸುಳ್ಳಾದವು. ಆ ರೀತಿ ನಂಬಿಕೆ ಇಟ್ಟುಕೊಳ್ಳುವುದು ತಪ್ಪು ಎಂದು ನಮ್ಮ ಭಾವನೆಯಾಗಿದೆ. ಸ್ವಾತಂತ್ರ್ಯ ಬಂದು ಸುಮಾರು ಇಪ್ಪತ್ತೇಳು ವರ್ಷಗಳಾದರೂ ಪ್ರಜಾಪ್ರಭುತ್ವ ತತ್ವದ ಮೇಲೆ ಆಡಳಿತ ನಡೆಸುತ್ತೇವೆ ಎಂದು ಬಂದಿರುವ ಸರಕಾರ ಸಮಾಜವಾದ ಎಂದು ಬಾಯಲ್ಲಿ ಹೇಳುತ್ತಾ ಜನರ ಮೇಲೆ ತೆರಿಗೆಗಳನ್ನು ಹಾಕುತ್ತಿದ್ದಾರೆ ಮತ್ತು ಕೆಲವು ಕಡೆ ತೆರಿಗೆಗಳನ್ನು ಕಡಿಮೆ ಮಾಡುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಏನು ಪರಿಣಾಮವಾಗುತ್ತದೆ ಎಂದರೆ ಶಕ್ತಿ ಇರುವವರು ಇನ್ನಷ್ಟು ಅವರ ಶಕ್ತಿಗಳನ್ನು ಬಲಪಡಿಸಿಕೊಳ್ಳುತ್ತಾರೆ ಬಡವ ರಾಗಿರುವವರು ಇನ್ನಷ್ಟು ಬಡವರಾಗುತ್ತಿದ್ದಾರೆ ಇದರ ಮಧ್ಯದಲ್ಲಿ ಇರುವ ಅಂತರವನ್ನು ಕಡಿಮೆ ಮಾಡುವುದಕ್ಕೆ ಯಾವ ರೀತಿಯಾದ ಬದಲಾವಣೆಗಳನ್ನೂ ಮಾಡುವಂತಹ ಒಂದು ಶಬ್ದವಾದರೂ ಮಾನ್ಯ ಅರ್ಥ ಸಚಿವರು ಭಾಷಣದಲ್ಲಿ ನಮಗೆ ಕಾಣಲಿಲ್ಲ. ಕಳೆದ ಎರಡು ಮೂರು ವರ್ಷಗಳಿಂದಲೂ ನಮ್ಮ ಕರ್ಣಾಟಕ ರಾಜ್ಯದಲ್ಲಿ ಏನು ಹಿಂದುಳಿದ ಹಾಗೂ ದುರ್ಬಲವರ್ಗದ ಜನರು ಇದ್ದಾರೋ ಇವರ ಅಂತರವನ್ನು ಕಡಿಮೆ ಮಾಡುವಂತಹ ಸಾಧನೆಗಳನ್ನು ಸರಕಾರ ಇದುವರೆಗೆ ಮಾಡಲಿಲ್ಲ ಎನ್ನುವುದು ನಮ್ಮ ಇತಿಹಾಸದಲ್ಲಿ ಸೇರಿಹೋಗುತ್ತದೆ. ಎಲ್ಲ ಕ್ಷೇತ್ರ ಗಳಲ್ಲೂ ಇದರ ದಾಖಲೆಗಳು ಸಿಗುತ್ತವೆ. ಇಂತಹ ಒಂದು ಮೂಲಭೂತವಾದ ಬದಲಾವಣೆಗಳನ್ನು ಮಾಡಿರುವಂತಹ ಒಂದು ಶಬ್ದವೂ ಅವರ ಭಾಷಣದಲ್ಲಿ

ನಮಗೆ ಸಿಗಲಿಲ್ಲ. ಇದು ಈಗಿರುವ ಅಂತರವನ್ನು ಕಡಿಮೆ ಮಾಡಲು ಸಾಧ್ಯವಾಗಲಿಲ್ಲ. ಇದು ಹೇಗಿದೆ ಎಂದರೆ ಬೀದಿಯಲ್ಲಿ ಗೂಳಿ ಬಿಟ್ಟರು ಎನ್ನುವಂತೆ ಯಾವ ಅಂತರವನ್ನೂ ಕಡಿಮೆ ಮಾಡಲಿಲ್ಲ. ಸರಕಾರದವರೇನೋ ಕಳೆದ ವರ್ಷಗಳಲ್ಲಿ ಬೇಕಾದಷ್ಟು ಪಂಚವಾರ್ಷಿಕ ಯೋಜನೆಗಳನ್ನು ಮಾಡಿದ್ದೇವೆ ಎಂದು ಇದರ ಅಂಕೆ ಸಂಖ್ಯೆಗಳನ್ನು ಕೊಟ್ಟು ಹೇಳುತ್ತಾರೆ. ನಮ್ಮ ಸರಕಾರದವರೇ ಪ್ರಕಟ ಮಾಡಿರುವ ಅಂಕಿ ಸಂಖ್ಯೆಗಳನ್ನು ಇಲ್ಲಿ ಹೇಳುತ್ತೇನೆ. ಅವರೇ ಹೇಳಿರುವ ಅಂಕೆ ಸಂಖ್ಯೆಗಳ ಆಧಾರದ ಮೇಲೆ ಹೇಳುವುದಾದರೆ ಇದರ ಅಂತರ ಎಷ್ಟಿದೆ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡಾ 47 ರಷ್ಟು ಇದೆ ಮತ್ತು ನಗರ ವಾಸಿಗಳ ಅಂತರ ಶೇಕಡಾ 45 ರಷ್ಟು ಇದೆ. ಇವರ ಲೆಕ್ಕಾಚಾರದಂತೆ ಸರಾಸರಿಯನ್ನು ಶೇಕಡಾ 55 ಪೈಸೆಗೆ ಕೂಡ ಏರಿಸಲಾಗಲಿಲ್ಲ. ಸುಮಾರು ಇಪ್ಪತ್ತು ರೂಪಾಯಿಗಳಿಗಿಂತ ಕಡಿಮೆ ವರಮಾನ ಪಡೆಯುವವರು ಶೇಕಡಾ ಹತ್ತರಷ್ಟು ಇರಬಹುದು. ಶೇಕಡಾ 35ರಷ್ಟು ನಗರ ಪ್ರದೇಶದಲ್ಲಿರುವವರು ಅನುಕೂಲವಾಗಿರಬಹುದು ಮತ್ತು 44 ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದುಳಿದಿದ್ದಾರೆ. ಎಂದರೆ ತೀರಾ ಬಡವರಾಗಿರುವವರು ಬಡವರಾಗುತ್ತಲೇ ಇದ್ದಾರೆ. ಅನುಕೂಲವಿರುವವರು ಇನ್ನೂ ಹೆಚ್ಚು ಅನುಕೂಲವಂತರಾಗುತ್ತಿದ್ದಾರೆ. ಇಂದು ಶೇಕಡಾ ಐವತ್ತಕ್ಕಿಂತ ಕಡಿಮೆ ಜನ ಬಹು ಬಡವರಾಗಿದ್ದಾರೆ ಮತ್ತು ಇಪ್ಪತ್ತು ರೂಪಾಯಿಗಳಿಗಿಂತ ಕಡಿಮೆ ವರಮಾನ ಪಡೆಯುವವರು ಎಂದರೆ ಹರಿಜನರು, ಹಿಂದುಳಿದ ದುರ್ಬಲ ವರ್ಗಗಳ ಜನರು, ಅಲೆಮಾರಿ ಜನಾಂಗದವರು ಸಾಮಾನ್ಯವಾಗಿ ಹಿಂದುಳಿದಿದ್ದಾರೆ. ಇಂತಹ ಬಡಜನರ ಶೋಷಣೆ ಇಂದು ರಾಜ್ಯದ ಅನೇಕ ಕಡೆಗಳಲ್ಲಿ ನಡೆಯುತ್ತಿದೆ. ಇವರನ್ನು ಸುಧಾರಿಸುವಂಥಹ ಆಯವ್ಯಯ ಇಲ್ಲಿ ಬಂದಿಲ್ಲ. ಸುಮಾರು 27 ವರ್ಷಗಳಾದರೂ ಇಂತಹ ಬಡಜನರನ್ನು ಮುಂದಕ್ಕೆ ತರಲಾಗಲಿಲ್ಲ. ಇದರ ಒಂದು ಸ್ಪಷ್ಟ ಚಿತ್ರ ನಮ್ಮ ಮುಂದೆ ಇರುವಾಗ ಇದರ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ತಿಳಿಸಲಿಲ್ಲ. ಇವರನ್ನು ಮುಂದಕ್ಕೆ ತರದೆ ಯಾವ ಸಾಧನೆಗಳನ್ನು ಮಾಡಿದರೂ ಸರಿಯಾಗುವುದಿಲ್ಲ.

ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಬಡ ಜನರನ್ನು ಮೇಲೆತ್ತುವುದಕ್ಕೆ ಕೇವಲ ನಿಮ್ಮ ದೊಡ್ಡ ದೊಡ್ಡ ನೀರಾವರಿ ಅಣೆಕಟ್ಟು, ದೊಡ್ಡ ದೊಡ್ಡ ಕಾಳೀ ನದಿ ಯೋಜನೆ, ಹೇಮಾವತಿ ಯೋಜನೆಗಳಂಥವುಗಳನ್ನು ಕಟ್ಟುವುದರಿಂದ ಆಗುವುದಿಲ್ಲ. ಆದರೆ ನೀರಾವರಿ ಯೋಜನೆಗಳನ್ನು ಮಾಡಬೇಕು. ಇದರಿಂದ ನಾವು ರಾಜ್ಯದಲ್ಲಿ ಅಥವಾ ರಾಷ್ಟ್ರದಲ್ಲಿರತಕ್ಕಂಥ ಬಿಕ್ಕಟ್ಟನ್ನು ಹೋಗಲಾಡಿಸಬಹುದು. ಆ ರೀತಿ ಮಾಡದಿದ್ದರೆ ವ್ಯವಸಾಯ ಯಾವತ್ತೂ ಉದ್ಧಾರವಾಗುವುದಿಲ್ಲ, ಇದನ್ನು ಮಾಡಬೇಕು. ಮತ್ತೊಂದು ಕಡೆ ಏನಾಗುತ್ತದೆ ಎಂದರೆ ಎಲ್ಲಾ ಕ್ಷೇತ್ರಗಳಲ್ಲೂ ನೀರಾವರಿ ಮಾಡುವುದಕ್ಕೆ ಆಗುವುದಿಲ್ಲ. ಹೇಗೆಂದರೆ ಈಗ ಮೈಸೂರಿನಲ್ಲಿರ

(ಶ್ರೀ ಕಾಗೋಡು ತಿಮ್ಮಪ್ಪ)

ತಕ್ಕಂಥ ಕೃಷ್ಣರಾಜ ಸಾಗರ ಅಣೆಕಟ್ಟಿನಿಂದ ಮಂಡ್ಯ ಮತ್ತಿತರ ಕೆಲವೊಂದು ಭಾಗಗಳಲ್ಲಿ ಮಾತ್ರ ನೀರಾವರಿ ಮಾಡುವುದಕ್ಕೆ ಸಾಧ್ಯ, ಅದೇ ನಮ್ಮ ಕೃಷ್ಣಪ್ಪ ನವರು ಇರತಕ್ಕಂಥ ಊರಿಗೆ ಹೋಗಿ ನೋಡಿದರೆ ಭೀಕರ ಬರಗಾಲ ಇರತಕ್ಕಂಥ ಪರಿಸ್ಥಿತಿಯನ್ನು ನಾವು ನೋಡುತ್ತೇವೆ. ಆದರೆ ಕೇವಲ ನೀರಾವರಿ ಯೋಜನೆ ಗಳಿಂದ ಕೇವಲ ಸೀಮಿತ ಕ್ಷೇತ್ರದಲ್ಲಿ, ಸೀಮಿತ ಪ್ರಮಾಣದಲ್ಲಿ ಮಾತ್ರ ಸಾಧನೆ ಮಾಡುತ್ತೇವೆ. ಇದರಿಂದ ಶೋಷಣೆಗೆ ಒಳಗಾಗಿರತಕ್ಕಂಥ ವರ್ಗಕ್ಕೆ ರಕ್ಷಣೆ ಕೊಡುವುದಕ್ಕೆ ನಿಮ್ಮಿಂದ ಆಗುವುದಿಲ್ಲ. ಆದುದರಿಂದ ಇವತ್ತು ನೀರಾವರಿಗಾಗಿ 24 ಕೋಟಿ ರೂಪಾಯಿಗಳ ತೆರಿಗೆಯನ್ನು ಹಾಕಿದ್ದೀರಿ. ಇವತ್ತು ಇಂಥ ಯೋಜನೆಗಳಿಗೆ ಇಷ್ಟು ಖರ್ಚು ಮಾಡಬೇಕೆಂದು ಹೇಗೆ ಇಡುತ್ತೀರೋ ಹಾಗೆಯೇ ಇದರ ಜೊತೆಗೆ ಈ ವರ್ಗದ ರಕ್ಷಣೆಗೋಸ್ಕರ 20 ಕೋಟಿ ರೂಪಾಯಿ ಎಂದು ಇಡಿ. ಈ ರೀತಿ ಇಡಿ ಎಂದು ಹೇಳತಕ್ಕಂಥದ್ದು ಅನಿವಾರ್ಯ ಇಲ್ಲದೇ ಹೋದರೆ ದೊಡ್ಡವರು ದೊಡ್ಡವರಾಗುತ್ತಾರೆ, ಸಣ್ಣವರು ಹಾಗೆಯೇ ಉಳಿದು ಹೋಗು ತ್ತಾರೆ. 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಎಲ್ಲಾ ಯೋಜನೆ ಗಳನ್ನು ನೀವು ಪೂರೈಸಿದರೂ ಬಿಲೋ ದಿ ಪೂವಾರಿಟಿ ಲೈನ್ ಕೆಳಗಿರತಕ್ಕಂಥವರು ಹಾಗೆಯೇ ಉಳಿದು ಹೋಗುತ್ತಾರೆ. ದೇಶದ ಒಟ್ಟು ಉತ್ಪಾದನೆಯಾಯಿತೆಂದು ನೀವು ಲೆಕ್ಕ ಹಾಕುವುದಾದರೆ, 1500 ಕೋಟಿಯಿಂದ 3600 ಕೋಟಿಗೇನೋ ಏರ ಬಹುದು ಆದರೆ ಅದರಲ್ಲಿ ಬಿರ್ಲಾರವರು, ಸೆಗಣಿಯಿಂದ ಗ್ಯಾಸ್ ಮಾಡತಕ್ಕಂಥ ದೊಡ್ಡದೊಡ್ಡ ಶ್ರೀಮಂತರೇ ಮುಂದುವರಿದಿರುತ್ತಾರೆ. ನಾವು ಈ ರೀತಿ ಅಭಿ ವೃದ್ಧಿಯನ್ನು ಸಾಧಿಸಿದರೂ ಕೂಡ ಬೆಲೆಗಳು ಜಾಸ್ತಿಯಾಗುವುದನ್ನು ನಾವು ಕಾಣ ಬಹುದು. ಇದತ್ತು ತಜ್ಞರು ಹೇಳಿದ್ದಾರೆ ಯಾವ ದೇಶದಲ್ಲಿ ದುಡಿಯುವ ಶಕ್ತಿ ಗಳು ಇದ್ದು ಅವರಿಗೆ ಅವಕಾಶವಿಲ್ಲದಿದ್ದರೆ, ಆ ದೇಶವು ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಎಲ್ಲಾ ವಿಚಾರವಂತರೂ ಒಪ್ಪಿಕೊಂಡಿರ ತಕ್ಕಂಥ ಮಾತು.

ಇವತ್ತು ಹರಿಜನ ಸ್ನೇಹಿತರು ಇಲ್ಲಿ ಹೆಚ್ಚು ಇಲ್ಲ, ಬೇರೆ ಬೇರೆ ಕ್ಷೇತ್ರಗಳ ಬಗ್ಗೆ ಮಾತನಾಡದೆ ಹರಿಜನರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಹರಿಜನರು ವ್ಯವಸಾಯ ಕ್ಷೇತ್ರದಲ್ಲಿ ಕೃಷಿ ಕಾರ್ಮಿಕರು ಎಂದರೆ ಅವರೇ ಹೆಚ್ಚಾಗಿರ ತಕ್ಕಂಥದ್ದು. ಅವರ ಬಗ್ಗೆ ವಿಶೇಷವಾಗಿ ನೀವು ಒಂದು ಕಾನೂನು ಮಾಡಬೇಕು. ಈಗ ಏನು ಸರ್ಕಾರಿ ನೌಕರರಿಗೆ ವಿಶೇಷ ಸೌಲತ್ತುಗಳನ್ನು ಮಾಡಿದ್ದೀರಿ. ಆದರೆ ಇವತ್ತು ಬೇಸಾಯ ಕೂಲಿಗಾರರು ಸುಮಾರು ಇವತ್ತು 26 ಲಕ್ಷ ಜನ ಇದ್ದಾರೆ. ಅವರ ರಕ್ಷಣೆ ಮಾಡುವುದಕ್ಕೆ ಇವತ್ತು ನಿರ್ದಿಷ್ಟವಾದ ಕಾರ್ಯಕ್ರಮ ನಿಮ್ಮ ಆಯವ್ಯಯದಲ್ಲಿ ಎಲ್ಲಿ ಹುಡುಕಿದರೂ ಸಿಕ್ಕುವುದಿಲ್ಲ. ಅವರಿಗೆ ಏನಾದರೂ

ವಿಶ್ರಾಂತಿ ವೇತನ ಕೊಡುತ್ತೀರಾ? ವೃದ್ಧಾಪ್ಯ ವೇತನ ಕೊಡುತ್ತೀರಾ? ಪಿ. ಎಫ್. ಏನಾದರೂ ಕೊಡುತ್ತೀರಾ? ಈ ಕೃಷಿ ಕೂಲಿಗಾರರಿಗೆ ಯಾವ ಸೌಲಭ್ಯವನ್ನು ಒದಗಿಸಿ ಕೊಡುತ್ತೀರಿ? ಇವತ್ತು ಅವರಿಗೆ ಏನೂ ಸಿಕ್ಕಿಲ್ಲ. ಅವರಿಗೆ ಏನಾದರೂ ಸೌಲಭ್ಯ ಸಿಗುವಂತೆ ಯೋಜನೆಯನ್ನು ಮಾಡಿದರೆ ನನಗೆ ಬಹಳ ಸಂತೋಷವಾಗುತ್ತದೆ. ಇವತ್ತು ಪಂಚಾಯಿತಿಗಳಲ್ಲಿ ಶೇಕಡ 15 ರಷ್ಟು ಬಡ್ಜೆಟ್ಟನ್ನು ತೆಗೆದಿಡಬೇಕೆಂದು ಹೇಳುತ್ತೀರಿ. ತಾಲ್ಲೂಕು ಬೋರ್ಡ್‌ಗಳಲ್ಲಿಯೂ ಸಹ ಹರಿಜನರಿಗೋಸ್ಕರ ಶೇಕಡ 15 ರಷ್ಟನ್ನು ತೆಗೆದಿಡಬೇಕೆಂದು ಹೇಳುತ್ತೀರಿ. ಆದರೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಆಯವ್ಯಯದಲ್ಲಿ ಅವರಿಗೋಸ್ಕರ ಶೇಕಡ 15ರಷ್ಟನ್ನೂ ಏತಕ್ಕೆ ಖರ್ಚು ಮಾಡುವುದಿಲ್ಲವೆಂದು ಕೇಳುತ್ತೇನೆ? ತಾಲ್ಲೂಕ್ ಬೋರ್ಡಿನಲ್ಲಿ 2 ಲಕ್ಷ ರೂಪಾಯಿಗಳು ಇದ್ದರೆ 15 ಪರ್ಸೆಂಟ್‌ನಂತೆ ಖರ್ಚು ಮಾಡಿದರೂ ಕೂಡ ನಮ್ಮ ಸ್ನೇಹಿತರುಗಳು ಅಲ್ಲಿ ಕೂಗಾಡುತ್ತಾರೆ. ಏನೂ ಖರ್ಚು ಮಾಡಲಿಲ್ಲವೆಂದು ಹೇಳುತ್ತಾರೆ. ನಾನು ಪಂಚಾಯಿತಿಯಲ್ಲಿ ಇದ್ದೇನೆ, 10 ಎತ್ತುಗಳನ್ನಾದರೂ ಕೊಡಿಸೋಣವೆಂದರೆ ಕಷ್ಟವಾಗುತ್ತದೆ. ಸಂಯುಕ್ತ ವಾಗಿ ಕೆಲಸ ಮಾಡೋಣವೆಂದರೆ 25 ಸಾವಿರ ರೂಪಾಯಿಗಳು ಮಾತ್ರ ಇರುತ್ತದೆ ಏನು ಮಾಡುವುದು? ಆದುದರಿಂದ ಇವತ್ತು ರಾಜ್ಯದ ಆಯವ್ಯಯದಲ್ಲಿ ಇಷ್ಟು ಪ್ರಮಾಣದಲ್ಲಿ ಖರ್ಚು ಮಾಡಿದ್ದೇವೆ ಮುಂದೆ ಮಾಡುತ್ತೇವೆಂದು ಹೇಳಿದರೂ ಕೂಡ, ಇನ್ನು 25 ವರ್ಷವಲ್ಲ ಅರ್ಧ ಶತಮಾನವಾದರೂ ಕೂಡ ಅವರು ಉದ್ಧಾರ ವಾಗುವುದಕ್ಕೆ ಆಗುವುದಿಲ್ಲ. ಆದುದರಿಂದ ಇವತ್ತು ಕನಿಷ್ಟ ಅವರನ್ನು ಸಂಪೂರ್ಣ ವಾಗಿ ಸ್ವತಂತ್ರರಾಗಿ ಮಾಡತಕ್ಕಂಥ ಯೋಜನೆಗೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಬೇಕು. ಅದನ್ನು ಪುನರ್‌ವಸತಿ ಕಾರ್ಯಕ್ರಮದ ಆಧಾರದ ಮೇಲೆ ಇವತ್ತು ಹರಿಜನರಿಗೆ ಗಿರಿಜನರಿಗೆ ಮತ್ತು ಅಲೆಮಾರಿ ಜನಾಂಗ ದವರಿಗೆ, ಸಂಚಾರಿ ಜನಾಂಗದವರಿಗೆ ಇವತ್ತು ಪುನರ್‌ವಸತಿ ಕೆಲಸಕ್ಕೆ ಎಂದು 10 ಕೋಟಿ ರೂಪಾಯಿಗಳೆಂದು ಆಯವ್ಯಯದಲ್ಲಿ ಹಾಕಿ. ಅದನ್ನು ಮಾಡುತ್ತಾ ಹೋಗಿ ಆಗ ನೀವು ಮಾಡಿದಂಥ ಕೆಲಸ ಶಾಶ್ವತವಾಗಿ ಉಳಿಯುತ್ತದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಸುಮಾರು 191 ಕಾಲೋನಿಗಳು ಇವೆ. ಆ ಕಾಲೋನಿಗಳು ಹಾಳು ಹಂಪೆಯಾಗಿದೆ. ನೀವೇನೋ ಕಾಲೋನಿಗಳನ್ನು ಮಾಡಿದ್ದೀರಿ ಆದರೆ ಮತ್ತೆ ನೋಡಲಿಕ್ಕೆ ಹೋಗಲಿಲ್ಲ. 191 ಕಾಲೋನಿಗಳು ಶಾಶ್ವತವಾಗಿ ಇವತ್ತು ಇದೆಯಲ್ಲಾ ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ನೀವು ಬೇಕಾದಂಥ ಇನ್‌ಷಟ್ಸ್ ಗೊತ್ತು ಮಾಡಿ. 191 ಕಾಲೋನಿಗಳಲ್ಲಿ ಶಾಶ್ವತವಾದ ಬದುಕನ್ನು ಬಾಳುವಂತೆ ಮಾಡಿ. ಇವತ್ತು ಹರಿಜನರ ಗಿರಿಜನರ ಪುನರ್ ವಸತಿಗಾಗಿ ಯೋಜನೆಯೊಂದನ್ನು ಮಾಡಿ ಪ್ರತಿ ವರ್ಷವೂ 10 ಅಲ್ಲ 15 ಕೋಟಿ ರೂಪಾಯಿ ಗಳನ್ನು ಖರ್ಚು ಮಾಡತಕ್ಕಂಥ ಕೆಲಸ ಮಾಡಬೇಕು, ಪುನರ್ ವಸತಿ ಯೋಜ ನೆಯಲ್ಲಿ ನಮಗೆ ಇವತ್ತು ಜಮೀನು ಸಾಕಷ್ಟು ಸಿಕ್ಕುವುದಿಲ್ಲ. ಅದು ನಮ್ಮ

(ಶ್ರೀ ಕಾಗೋಡು ತಿಮ್ಮಪ್ಪ)

ಮುಖ್ಯಮಂತ್ರಿಗಳಿಗೂ ಗೊತ್ತು. ಕೆರೆ ಕೆಳಗಿನ ಜಮೀನು ಬೇರೆಯವರಿಗೆ ಆಗಿಬಿಟ್ಟಿದೆ. ಬೇರೆ ಇನ್ನು ಎಲ್ಲೂ ಇಲ್ಲ. ಕೆಲಸಕ್ಕೆ ಬಾರದ ಫಾರೆಸ್ಟ್ ಜಮೀನನ್ನು ಕೊಡೋಣವೆಂದರೆ ಅದು ಸಹ ರೂಲ್ಸ್ ಪ್ರಕಾರ ಕೊಡುವುದಕ್ಕೆ ಆಗುವುದಿಲ್ಲ. ಆದುದರಿಂದ ಇವತ್ತು ಹರಿಜನರು ಗಿರಿಜನರು ಕೆಲಸ ಮಾಡುವುದಕ್ಕೆ ಸಾಕಷ್ಟು ಅವಕಾಶವಿಲ್ಲ. ಹೆಚ್ಚು ಜನ ಸಿಗತಕ್ಕಂಥ ಕಡೆಗಳಲ್ಲಿ ಸಣ್ಣ ಪ್ರಮಾಣದಲ್ಲಿ ಕೈಗಾರಿಕೆಗಳನ್ನು ಅವರ ಹಿತಕ್ಕಾಗಿ ಸ್ಥಾಪನೆ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಕೆಲಸ ಮಾಡಲು ಅವರಿಗೆ ಅನುಕೂಲವಾಗುತ್ತದೆ. ಹೀಗೆ ಮಾಡುವುದರಿಂದ ಅವರೂ ಸಹ ಸಮಾಜದಲ್ಲಿ ಸರಿಯಾದ, ಉತ್ತಮವಾದ ಸ್ಥಾನಮಾನಗಳನ್ನು ಸಂಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಪುನರ್ ವಸತಿ ಯೋಜನೆ ಮತ್ತು ಹೆಚ್ಚಾಗಿ ಕೈಗಾರಿಕಾ ಕ್ಷೇತ್ರದಲ್ಲಿ ಹರಿಜನರಿಗೋಸ್ಕರ ತೊಡಗಿಸತಕ್ಕಂಥ ಪ್ರಯತ್ನವನ್ನು ಸರ್ಕಾರದವರು ಒಂದು ನಿರ್ದಿಷ್ಟವಾದಂಥ ಕಾರ್ಯಕ್ರಮವನ್ನು ಇಟ್ಟುಕೊಂಡು ಮಾಡಿದರೆ ಒಳ್ಳೆಯದು. ಅವರಿಗೆ ಈ ಸಮಾಜದೊಳಗೆ ಆಗತಕ್ಕಂಥ ಶೋಷಣೆಯಿಂದ ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಯೋಜನೆಯನ್ನು ಮಾಡಬೇಕು ಎನ್ನತಕ್ಕಂಥ ಮಾತನ್ನು ಅಗ್ರಹಪೂರ್ವಕವಾಗಿ ಹೇಳುತ್ತೇನೆ. ಇಲ್ಲದೇ ಹೋದರೆ ಏನಾಗುತ್ತದೆಂದರೆ ನಿಮ್ಮ ಸಮಾಜ ಕಲ್ಯಾಣ ಇಲಾಖೆಯನ್ನು ಇಟ್ಟುಕೊಂಡು ಅವರ ವಿದ್ಯಾಭ್ಯಾಸಕ್ಕೆಂದು ಬರೀ ಸ್ಲೇಟು ಬಳಪ ಪುಸ್ತಕಗಳನ್ನು ಒದಗಿಸಿದ ಮಾತ್ರಕ್ಕೆ ಅಸ್ಪೃಶ್ಯತೆಯನ್ನು, ಅವರ ಅಭಿವೃದ್ಧಿಯನ್ನು ಮಾಡಿದಂತಾಗುವುದಿಲ್ಲ. ಆದುದರಿದ ಸಮಾಜ ಕಲ್ಯಾಣ ಇಲಾಖೆಯನ್ನು ತೆಗೆದುಬಿಟ್ಟು ಪುನರ್ ವಸತಿ ಯೋಜನೆ ಎಂದು ಮಾಡಿ ಅದಕ್ಕೊಬ್ಬ ಮಂತ್ರಿಯವರನ್ನು ನೇಮಕ ಮಾಡಿ ಅವರಿಗೆ ಅಧಿಕಾರವನ್ನು ಕೊಡಿ. ಪ್ರತಿ ವರ್ಷವೂ ಒಂದೊಂದು ತಾಲ್ಲೂಕಿನಲ್ಲಿ ಕನಿಷ್ಟ 100 ಹರಿಜನ ಮನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ನೀವು ಪುನರ್ ವಸತಿ ಮಾಡತಕ್ಕಂಥ ಕೆಲಸವನ್ನು ಮಾಡುತ್ತಾ ಬನ್ನಿ, ಪ್ರತಿ ತಾಲ್ಲೂಕಿನಲ್ಲಿಯೂ ಹೀಗೆ ಮಾಡುತ್ತಾ ಬರುವುದರಿಂದ ನೀವು 10 ಅಲ್ಲ 25 ವರ್ಷಗಳಲ್ಲಿ ಸಾಧನೆ ಮಾಡಲು ಆಗದೇ ಇರತಕ್ಕಂಥ ಕೆಲಸವನ್ನು ನೀವು ಒಂದೊಂದು ವರ್ಷದಲ್ಲಿಯೇ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಇಂಥ ಕೆಲಸಗಳನ್ನು ಸರ್ಕಾರದವರು ಮೊದಲು ಮಾಡಬೇಕು. ಅದಕ್ಕಾಗಿ ಇದನ್ನು ವಿಚಾರ ಮಾಡಿ, ವಿಮರ್ಶೆ ಮಾಡಬೇಕಾಗಿದೆ. ಸುಮ್ಮನೇ ಕೂತುಕೊಂಡರೆ ಆಗುವುದಿಲ್ಲ. ನಾವು ಹೇಳತಕ್ಕಂಥದ್ದನ್ನೆಲ್ಲಾ ಅಭ್ಯಾಸ ಮಾಡಿ, ತಿಳಿದವರಿಂದ ಕೇಳಿ ಅವರ ಅಭಿಪ್ರಾಯವನ್ನೂ ಪಡೆದುಕೊಂಡು ಒಂದು ಯೋಜನೆಯನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಹಾಗೆಯೇ ಚಲನ ಚಿತ್ರಗಳಿಗೋಸ್ಕರ ಹಣ ಕೊಡುತ್ತಿರುವುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿಬಿಡುತ್ತೇನೆ. ಮೊದಲು ಕನ್ನಡ ಚಿತ್ರಗಳ ಅಬಿವೃದ್ಧಿಗೆಂದು 50 ಸಾವಿರ ರೂಪಾಯಿಗಳನ್ನು ಸಬ್ಸಿಡಿ ಎಂದು ಕೊಡುತ್ತಿದ್ದೀರಿ. ಈಗ ಅದನ್ನು 100 ಸಾವಿರ ರೂಪಾಯಿ ಮಾಡಿರತಕ್ಕಂಥದ್ದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಕಪ್ಪು ಬಿಳುಪು ಚಿತ್ರಗಳಿಗೆ 1 ಲಕ್ಷ ರೂಪಾಯಿಗಳು ಕೊಡುವುದು, ಬಣ್ಣದ ಚಿತ್ರಗಳಿಗೆ 1.5 ಲಕ್ಷ ರೂಪಾಯಿಗಳು ಕೊಡಬೇಕೆಂದು ಏನು ಜಾಸ್ತಿ ಮಾಡಿದ್ದೀರಿ, ಅದಕ್ಕೆ ನನ್ನ ಸಂಪೂರ್ಣ ವಿರೋಧವಿದೆ. ಏತಕ್ಕೆಂದರೆ, ಇವತ್ತು ಜನತೆಗೆ ಅಗತ್ಯವಾಗಿರತಕ್ಕಂಥ ಕೆಲಸಗಳನ್ನು ಮಾಡುವುದಕ್ಕೆ ಹಣವಿಲ್ಲವೆಂದು ಹೇಳಿ ಇಂಥ ಕೆಲಸಕ್ಕೆ ಹಣವನ್ನು ಕೊಟ್ಟುಕೊಂಡು ಬಂದಿದ್ದೀರಿ. ನೀವು ಈಗ ಮಾಡಿರತಕ್ಕಂಥ ಕೆಲಸ ಸಾಧುವಾದುದ್ದಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನ ಯಾರು ಬಂದು ಚಿತ್ರಗಳನ್ನು ನೋಡುತ್ತಾರೆ? ಇವತ್ತು ಪ್ರತಿಯೊಂದು ಪಂಚಾಯಿತಿಗಳಿಗೂ ಒಂದೊಂದು ಸಣ್ಣ ಸಣ್ಣ ಯೂನಿಟ್ ಪ್ರೊಜೆಕ್ಟರ್‌ಗಳನ್ನು ಕೊಟ್ಟು ಹಳ್ಳಿ ಹಳ್ಳಿಗಳಲ್ಲಿಯೂ ಸಿನಿಮಾ ತೋರಿಸುವಂಥ ವ್ಯವಸ್ಥೆ ಮಾಡಿದರೆ ಬಹಳ ಸಂತೋಷ. ಇವತ್ತು ಕನ್ನಡ ಚಿತ್ರಗಳಿಗೆ ಕೊಡತಕ್ಕಂಥ ಸಬ್ಸಿಡಿ ಹಣವನ್ನು ಜಾಸ್ತಿ ಮಾಡುವ ಬದಲು ಇಂಥ ಕೆಲಸಗಳಿಗೆ ಹಣವನ್ನು ಒದಗಿಸಿ ಎಂದು ಹೇಳುತ್ತೇನೆ.

ಇವತ್ತು ತೆರಿಗೆಯ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. 1957-58ನೇ ಇಸವಿಯಲ್ಲಿ ತೆರಿಗೆ ಹಾಕಿರತಕ್ಕಂಥ ಸ್ವರೂಪವನ್ನು ನೋಡಿದರೆ ಇವತ್ತಿಗೂ ಕೂಡ ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳಲ್ಲಿ ಮೂಲ ಭೂತವಾದ ಬದಲಾವಣೆ ಮಾಡಿದ ಹಾಗೆ ಇಲ್ಲ. ಏನೇನು ಪ್ರತ್ಯಕ್ಷವಾದ ತೆರಿಗೆಯನ್ನು ಹಾಕಿದೆ ಅದರಂತೆ ಪರೋಕ್ಷವಾದಂಥ ತೆರಿಗೆಯನ್ನು ಸಹ ಹೆಚ್ಚಿನ ಪ್ರಮಾಣದಲ್ಲಿ ಹಾಕುತ್ತಿದ್ದೀರಿ ಇವತ್ತು ರಾಜ್ಯದಲ್ಲಿ ಸಾಮಾನ್ಯ ಜನರ ಮೇಲೆ ಹೆಚ್ಚಿನ ತೆರಿಗೆಯ ಭಾರ ಬೀಳಬಾರದೆಂಬ ಕಲ್ಪನೆ ಇರುವುದಾದರೆ ನೀವು ಪ್ರತ್ಯಕ್ಷವಾದಂಥ ಮತ್ತು ನೇರವಾದಂಥ ತೆರಿಗೆಯನ್ನು ಹೆಚ್ಚು ಮಾಡುತ್ತಾ ಬರ್ರೀ ಆದರೆ ಅಪ್ರತ್ಯಕ್ಷವಾದಂಥ ತೆರಿಗೆಯ ಮೇಲೆ ಅಲ್ಲ.

ತೆರಿಗೆ ಹಾಕತಕ್ಕ ನೀತಿಯನ್ನು 1957-58ನೇ ಇಸವಿಯಿಂದ 1973-74ನೇ ಇಸವಿಯವರೆಗೂ ಸತತವಾಗಿ ಅಪ್ರತ್ಯಕ್ಷವಾಗಿ ತೆರಿಗೆಯನ್ನು ಹಾಕತಕ್ಕ ಕ್ರಮವನ್ನು ಜಾಸ್ತಿ ಮಾಡುತ್ತಾ ಬಂದಿದ್ದಾರೆ. ಆದರೆ ಅದೇ ಪ್ರಮಾಣದಲ್ಲಿ ಪ್ರತ್ಯಕ್ಷ ತೆರಿಗೆಯನ್ನು ಹಾಕುವುದಿಲ್ಲ. ತೆರಿಗೆ ಹಾಕತಕ್ಕ ಸ್ವರೂಪವನ್ನು ನೋಡುವುದಾದರೆ 1957-58ನೇ ಇಸವಿಯಲ್ಲಿ ಡೈರೆಕ್ಟ್ ಟ್ಯಾಕ್ಸ್ ಸೇಕಡಾ 43.27 ಇದ್ದದ್ದು 1973-74ನೇ ಸಾಲಿನಲ್ಲಿ 22.77ಕ್ಕೆ ಇಳಿದಿದೆ. ಅಪ್ರತ್ಯಕ್ಷ ತೆರಿಗೆಯನ್ನು ಹೇಳುವುದಾದರೆ 1957-58 ರಲ್ಲಿ 24 ಕೋಟಿ ರೂಪಾಯಿಗಳು ಇದ್ದದ್ದು 208 ಕೋಟಿ ರೂಪಾಯಿಗಳಿಗೆ ಏರಿದೆ. ಅಪ್ರತ್ಯಕ್ಷ ತೆರಿಗೆ ಜನರ ಮೇಲೆ ಹೆಚ್ಚಿನ ಹೊರೆಯಾಗಿ

(ಶ್ರೀ ಕಾಗೋಡು ತಿಮ್ಮಪ್ಪ)

ಪರಿಣಮಿಸುತ್ತದೆ. 1957-58 ರಿಂದ ಲೆಕ್ಕ ಹಾಕಿದರೆ ಸುಮಾರು 700 ಕೋಟಿ ರೂಪಾಯಿಗಳ ಹೊಸ ತೆರಿಗೆಯನ್ನು ಹಾಕಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಈ ತೆರಿಗೆ ತಲಾವಾರು 60-61 ರೂಪಾಯಿ ಇದೆ. ಈ ರೀತಿ ತೆರಿಗೆಯನ್ನು ಹಾಕುತ್ತಲೇ ಇದ್ದರೆ ಜನಗಳಿಗೆ ಇದರ ಹೊರೆ ಜಾಸ್ತಿಯಾಗುತ್ತದೆ. ಇದನ್ನು ಮುಕ್ತಾಯ ಮಾಡಬೇಕು. ಇದರ ಇತಿಹಾಸವನ್ನು, ಇದರ ವ್ಯಾರ್ಗವನ್ನು ಮೂಲಭೂತ ಬದಲಾವಣೆ ಮಾಡಿಲ್ಲ. ಪ್ರತ್ಯಕ್ಷ ತೆರಿಗೆಯಲ್ಲಿ ನೇರವಾಗಿ ಜನಗಳು ಇನ್‌ಕಂ ಟ್ಯಾಕ್ಸ್ ಕೊಡುತ್ತಾರೆ. ಹೆಚ್ಚು ತೆರಿಗೆಯನ್ನು ಕೊಡುವುದಕ್ಕೆ ಶಕ್ತಿ ಇದ್ದವರು ಯಾರು ಇದ್ದಾರೆಯೋ ಅಂಥವರಿಂದ ಹೆಚ್ಚು ತೆರಿಗೆಯನ್ನು ವಸೂಲು ಮಾಡಬೇಕು. ಸಮಾಜವಾದಿ ರಾಷ್ಟ್ರದಲ್ಲಿ ಹೆಚ್ಚು ಪ್ರತ್ಯಕ್ಷ ತೆರಿಗೆಯನ್ನು ಹಾಕಬೇಕೇ ಹೊರತು ಅಪ್ರತ್ಯಕ್ಷ ತೆರಿಗೆಯನ್ನು ಹಾಕಬಾರದು. ನಾನು ಹೋದ ವರ್ಷ ಈ ಮಾತನ್ನು ಹೇಳಿದ್ದೇನೆ. ಈ ವರ್ಷ ಏನು ಮಾಡಿದ್ದಾರೆ ಎಂದರೆ ಒಟ್ಟು 14 ಚಿಲ್ಲರೆ ಕೋಟಿ ರೂಪಾಯಿ ತೆರಿಗೆಯನ್ನು ಹಾಕಿದ್ದಾರೆ. ಅದರಲ್ಲಿ ಅರ್ಬನ್ ಲ್ಯಾಂಡ್ ಟ್ಯಾಕ್ಸ್ ಬಿಟ್ಟರೆ ಉಳಿದದ್ದು ಎಲ್ಲಾ ಪರೋಕ್ಷ ತೆರಿಗೆ. ಅರ್ಬನ್ ಲ್ಯಾಂಡ್ ಟ್ಯಾಕ್ಸಿನಿಂದ ಹೆಚ್ಚು ನಿರೀಕ್ಷಣೆ ಮಾಡಿಲ್ಲ. ಅದರಿಂದ ನಿರೀಕ್ಷಣೆ ಮಾಡಿರತಕ್ಕದ್ದು. 60 ಲಕ್ಷ ರೂಪಾಯಿಗಳನ್ನು ಮಾತ್ರ ನಿರೀಕ್ಷಣೆ ಮಾಡಿದ್ದಾರೆ. ವ್ಯವಸಾಯಗಾರನ ಕ್ಷೇತ್ರದಿಂದ 3½ ಲಕ್ಷ ರೂಪಾಯಿಗಳನ್ನು ನಿರೀಕ್ಷೆ ಮಾಡಿದ್ದಾರೆ. ತೆರಿಗೆಯನ್ನು ಹಾಕತಕ್ಕಂಥಾ ಮೂಲಭೂತ ನೀತಿ ಬದಲಾವಣೆಯಾಗಬೇಕು. ಪ್ರತ್ಯಕ್ಷ ತೆರಿಗೆಯನ್ನು ಹೆಚ್ಚು ಮಾಡುವುದರಿಂದ ನೇರವಾಗಿ ಯಾರು ಹಣ ಸಂಪಾದನೆ ಮಾಡುತ್ತಾರೆಯೋ ಅವರು ನೇರವಾಗಿ ಹೆಚ್ಚು ತೆರಿಗೆಯನ್ನು ಕೊಡುವಂತಾಗುತ್ತದೆ. ಅವರ ಅಂತಸ್ತನ್ನು ಕಡಿಮೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಇಂಥಾ ನೀತಿಯನ್ನು ಅನುಸರಿಸಬೇಕು. ತೆರಿಗೆಯನ್ನು ಹಾಕತಕ್ಕಂಥಾ ಸಂದರ್ಭದಲ್ಲಿ ಎಣ್ಣೆಗಳ ಮೇಲೆ ತೆರಿಗೆಯನ್ನು ಹಾಕಿದ್ದಾರೆ. ಸೇಕಡಾ ಅರ್ಧ ಪರ್ಸೆಂಟ್ ತೆರಿಗೆಯನ್ನು ಹಾಕಿದರೂ ಕೂಡ ವ್ಯಾಪಾರಸ್ಥರು ಎರಡರಷ್ಟು ಜಾಸ್ತಿ ಮಾಡುತ್ತಾರೆ. ಸಾಮಾನ್ಯ ಆಹಾರ ವಸ್ತುಗಳ ಬೆಲೆ ವಿಪರೀತವಾಗಿ ಏರಿದೆ. ನಾವು ಇದನ್ನು ಪತ್ರಿಕೆಯಲ್ಲೂ ನೋಡುತ್ತಿದ್ದೇವೆ, ಪ್ರತ್ಯಕ್ಷವಾಗಿಯೂ ನೋಡುತ್ತಿದ್ದೇವೆ. ಜೀವನಾವಶ್ಯಕವಾಗಿ ಪ್ರತಿಯೊಂದು ವಸ್ತುವಿನ ಬೆಲೆಯೂ ಜಾಸ್ತಿಯಾಗುತ್ತಾ ಇರುವುದನ್ನು ನಾವು ನೋಡುತ್ತಿದ್ದೇವೆ. ಮತ್ತೆ ಈಗ ಜೀವನಾವಶ್ಯಕ ವಸ್ತುಗಳ ಮೇಲೆ ತೆರಿಗೆಯನ್ನು ಹಾಕಿದ್ದಾರೆ. ಭೋಗ ವಸ್ತುಗಳ ಮೇಲೆ ಹೆಚ್ಚು ತೆರಿಗೆಯನ್ನು ಹಾಕಬಹುದು. ಅದನ್ನು ಕೊಡುವುದಕ್ಕೆ ಶಕ್ತಿ ಇರುವವರು ಕೊಡುತ್ತಾರೆ. ಕೆಲವು ಭೋಗ ವಸ್ತುಗಳ ಮೇಲೆ ತೆರಿಗೆಯನ್ನು ಹಾಕಿದ್ದಾರೆ. ಬಹುಮುಖ ತೆರಿಗೆಯನ್ನು ತೆಗೆದು ಏಕಮುಖ ತೆರಿಗೆ ಮಾಡಬೇಕು ಎಂದು ನಾನು ಮೊದಲಿನಿಂದಲೂ

ಹೇಳಿದ್ದೇನೆ. ಏಕಮುಖ ತೆರಿಗೆಯನ್ನು ಹಾಕಿದರೆ ಆದಾಯ ಕಡಿಮೆಯಾಗುತ್ತದೆ ಎಂದು ಹೆದರುತ್ತಾರೆ. ಅವರು ಆ ರೀತಿ ಹೆದರಬೇಕಾಗಿಲ್ಲ. ಕಳೆದ ವರ್ಷ ಬಹುಮುಖ ತೆರಿಗೆಯನ್ನು ಮಾಡಿದ್ದರಿಂದ ಸ್ವಲ್ಪ ಹೆಚ್ಚಳವಾಗಿದೆ. ಆದ್ದರಿಂದ ಈ ಸಾರಿ ಏನೇನು ಆದಾಯ ಬರುವುದಿಲ್ಲ ಅಂಥಾ ಕೆಲವು ಸಾಮಾನುಗಳಿಗೆ ಏಕ ಮುಖ ತೆರಿಗೆ ಹಾಕಿದ್ದಾರೆ. ಅದಕ್ಕಿಂತ ಹೆಚ್ಚು ಅಗತ್ಯ ವಸ್ತುಗಳು ಏನಿವೆ 5-6 ವಸ್ತುಗಳನ್ನು ಸೆಲೆಕ್ಟ್ ಮಾಡಿಕೊಂಡು ಬಹುಮುಖ ತೆರಿಗೆ ಇರುವುದನ್ನು ತೆಗೆದು ಏಕಮುಖ ತೆರಿಗೆ ಮಾಡಿದರೆ ಒಳ್ಳೆಯದು. ಯಾವುದಾದರೂ ಹೆಚ್ಚು ತೆರಿಗೆಯನ್ನು ವಸೂಲು ಮಾಡತಕ್ಕದ್ದು ಏನಿದೆ ಅದರ ಮೇಲೆ ಬಹುಮುಖ್ಯ ತೆರಿಗೆ ಇರುವುದನ್ನು ಏಕಮುಖ ತೆರಿಗೆಯನ್ನು ಹಾಕುವುದಕ್ಕೆ ಪ್ರಯತ್ನ ಮಾಡಿದರೆ ಅದರ ಸಾಧಕಬಾಧಕ ಗಳು ಗೊತ್ತಾಗುತ್ತವೆ. ಆ ಮೇಲೆ ಅನುಭವದ ಆಧಾರದ ಮೇಲೆ ಬಹುಮುಖ ತೆರಿಗೆಯ ನೀತಿಯನ್ನು ಬದಲಾವಣೆ ಮಾಡಿಕೊಳ್ಳಲು ಸಹಾಯಕವಾಗುತ್ತದೆ. ಅದನ್ನು ಮಾಡಬೇಕಾದರೆ ದಾಷ್ಟ್ರ್ಯ ಬೇಕು. ಪ್ರಾಮಾಣಿಕವಾಗಿ ಹೇಳುವು ದಾದರೆ ಹಣಕಾಸಿನ ವರಮಾನಕ್ಕೆ ನಮ್ಮ ರಾಜ್ಯದಲ್ಲಿ ಯಾವುದು ಸಹಾಯವಾಗು ತ್ತದೆ ಆ ಕೆಲಸವನ್ನು ಮಾಡಬೇಕು.

5-00 P.M.

ವ್ಯವಸಾಯಗಾರರ ಮೇಲೆ ತೆರಿಗೆಯನ್ನು ಹಾಕುವಾಗ ಬಹಳ ಸುಲಭವಾದ ದಾರಿ ಯನ್ನು ಹುಡುಕಬೇಕು. ಆದರೆ ಈಗ ನೀವು ಏನು ಕ್ರಮವನ್ನು ಅನುಸರಿಸಿ ದ್ದೀರೋ ಅದು ಬಹಳ ಕಷ್ಟವಾಗುತ್ತದೆ. ಏಕೆಂದರೆ ನಮ್ಮ ಜನರು ಈಗಿನ ಒಂದು ಕ್ರಮದಲ್ಲಿ ತೆರಿಗೆಗಳನ್ನು ಕೊಡುವುದನ್ನು ತಪ್ಪಿಸಿಕೊಳ್ಳುವುದರಲ್ಲಿ ಬಹಳ ನಿಪುಣರು. ಆದರೆ ನಮ್ಮ ಗ್ರಾಮಲೆಕ್ಕಾಧಿಕಾರಿಗಳು ಏನಿದ್ದಾರೋ ಅವರಿಂದ ನಿಮಗೆ ನಿಜವಾಗಿ ಲೆಕ್ಕಪತ್ರ ಸಿಗಬೇಕೆಂದು ನಿರೀಕ್ಷಣೆ ಮಾಡಿದ್ದರೆ, ಆ ರೀತಿಯಾಗಿ ಖಂಡಿತವಾಗಿ ನೀವು ಮುಂದೆ ನಿರೀಕ್ಷಣೆ ಮಾಡಬೇಡಿ. ಸಾಮಾನ್ಯವಾಗಿ ಒಬ್ಬ ಮನುಷ್ಯ ಕಬ್ಬು ಬೆಳೆಯುತ್ತೇನೆಂದು ಕಬ್ಬು ಹಾಕುವುದೇ ಇಲ್ಲ. ದುಡ್ಡು ಹೆಚ್ಚಿಗೆ ತೆರಿಗೆ ರೂಪದಲ್ಲಿ ಕೊಡಬೇಕಾಗುತ್ತದೆಂದು ಕಬ್ಬು ಬೆಳೆಯಲಿಲ್ಲವೆಂದು ಹೇಳಿ ಬೇರೆ ಇನ್ನೇನಾದರೂ ಬೆಳೆಯುತ್ತಾನೆ. ಆದೇ ರೀತಿಯಲ್ಲಿ ತೆಂಗಿನ ತೋಟ ಮಾಡಬೇಕೆಂದು ಇರುತ್ತಾನೆ. ಆ ರೀತಿಯಾದ ಮನಸ್ಸು ಇರುತ್ತದೆ ಆದರೆ ಅವುಗಳ ಬಗ್ಗೆ ಅವನಲ್ಲಿ ಕರಾರುವಾಕ್ಕಾದ ಲೆಕ್ಕ ಸಿಗದೆ ಇದ್ದಮೇಲೆ ಅಂತಹವನ ಮೇಲೆ ವ್ಯವಸಾಯ ತೆರಿಗೆಗಳನ್ನು ಹಾಕುವುದು ಬಹಳ ಕಷ್ಟ. ಇವತ್ತು ವ್ಯವಸಾಯ ಕ್ಷೇತ್ರದಲ್ಲಿ ರೈತನಾದವನು ಬೇಕಾದಷ್ಟು ನೀರಾವರಿ ಮಾಡಿದ್ದರೂ ಅದಕ್ಕಾಗಿ ಬೇಕಾದಷ್ಟು ಭಂಡವಾಳವನ್ನು ಹಾಕಿದ್ದರೂ ಅವನಿಗೆ ಸರಿಯಾದ ರಿಟರ್ನ್ಸ್ ಬರುತ್ತಾ ಇಲ್ಲ. ಅವನು ಏನು ನೀರಿಕ್ಷಣೆ ಮಾಡುತ್ತಾನೋ ಅದು ಬರುತ್ತಿಲ್ಲ. ಉತ್ಪಾದನೆಯ ಲೆಕ್ಕವನ್ನು ಯಾವ ರೀತಿಯಲ್ಲಿಡಬೇಕೆಂಬುದು

(ಶ್ರೀ ಕಾಗೋಡು ತಿಮ್ಮಪ್ಪ)

ಅವರಿಗೆ ಗೊತ್ತಿಲ್ಲ. ರಾಜ್ಯದಲ್ಲಿರತಕ್ಕ ಬಡಜನ ವ್ಯವಸಾಯಗಾರರಿಗೆ ಯಾವ ರೀತಿಯಲ್ಲಿ ಉತ್ಪಾದನೆಯು ಹಾಗೂ ಖರ್ಚಿನ ಲೆಕ್ಕಗಳನ್ನು ಇಟ್ಟುಕೊಂಡು ಹೋಗಬೇಕೆಂಬ ಬಗ್ಗೆ ಸಾಕಷ್ಟು ಪರಿಜ್ಞಾನವಿಲ್ಲ. ವಕೀಲರಿಗೆ ಹೆಚ್ಚಿನ ಫೀಸನ್ನು ಕೊಡುವ ಪರಿಸ್ಥಿತಿ ಇವರಿಗೆ ಉಂಟಾಗುತ್ತಿದೆ. ಅವರೇ ಇವರಿಗೆ ಹೆಚ್ಚಿಗೆ ಇದಕ್ಕೆ ಬೇಕಾದಂಥ ಕೆಲಸಗಳನ್ನು ಮಾಡಿ ಕೊಡುತ್ತಾರೆ. ಇದರಿಂದ ವಕೀಲರಿಗೆ ಎಲ್ಲೋ 10—20 ಇನ್‌ಕಂ ಟ್ಯಾಕ್ಸ್ ಕೇಸುಗಳು ಇರುತ್ತವೆ. ಒಟ್ಟಿನಲ್ಲಿ ಇಂತಹ ತೆರಿಗೆಗಳಿಂದ 5 ಲಕ್ಷ ರೂಪಾಯಿಗಳು ಸಿಗುತ್ತದೆ. ಆದರೂ ಬಡ ರೈತರು ತುಂಬಾ ಹುಷಾರಾಗಿರಬೇಕು. ನೀವು ಹಿಂದೆ 1968ನೇ ಇಸವಿಯಲ್ಲಿ ಬೆಟರ್‌ಮೆಂಟ್ ಲೆವಿಯನ್ನು ವಸೂಲು ಮಾಡತಕ್ಕ ಒಂದು ಕಾನೂನನ್ನು ಈಗ ತಂದು ಹಾಕಿದ್ದೀರಿ. ಇವತ್ತಿನವರೆಗೂ ಅದರ ಬಗ್ಗೆ ವಸೂಲು ಮಾಡಿರುವುದೆಷ್ಟು ? ಈಗ ಅದರ ಲೆಕ್ಕವನ್ನು ನೋಡಿದರೆ ಆ ಬಾಬ್ತಿನಿಂದ ಸರ್ಕಾರಕ್ಕೆ 60 ಲಕ್ಷ ರೂಪಾಯಿಗಳಷ್ಟು ವರಮಾನ ಬರಬೇಕು. ಹಿಂದಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಇಷ್ಟು ಬಾಕಿಯನ್ನು ಎರಡು ವರ್ಷಗಳಲ್ಲಿ ವಸೂಲು ಮಾಡಿ ಪೂರೈಸುತ್ತೇವೆಂದು ವಾಗ್ದಾನ ಮಾಡಿದ್ದರು. ಎರಡು ವರ್ಷಗಳಾದುವು. ನಾಲ್ಕು ವರ್ಷಗಳ ವರೆಗೆ ಇನ್ನೂ ಏನನ್ನೂ ವಸೂಲು ಮಾಡಲಿಲ್ಲ. ಇವತ್ತಿನ ವರೆಗೂ ಆ ಕಾರ್ಯವಾಗಿಲ್ಲ. ಮುಂದೆಯೂ ಆಗುವುದಿಲ್ಲ. ಇವರ ಕೈಲಿ ಬೆಟರ್‌ಮೆಂಟ್ ಲೆವಿಯನ್ನು ನಿಜವಾಗಿ ವಸೂಲು ಮಾಡುವುದಕ್ಕಾಗುವುದಿಲ್ಲ. ಲೆಕ್ಕಗಳನ್ನೂ ಸಹ ಸಿದ್ಧಪಡಿಸುವುದಕ್ಕೂ ಆಗುವುದಿಲ್ಲ. 68ನೇ ಇಸವಿಯಲ್ಲಿ ಮಾಡಿರತಕ್ಕ ಕಾನೂನು ಪ್ರಕಾರ ಇವತ್ತಿನವರೆಗೂ ಲೆಕ್ಕ ಸಿದ್ಧಪಡಿಸುವುದಕ್ಕೆ ಆಗದಿದ್ದರೆ ಇನ್ನು ಆ ತೆರಿಗೆಯನ್ನು ವಸೂಲು ಮಾಡುತ್ತೇನೆಂದು ಏಕೆ ಹೇಳುತ್ತಾರೋ ಗೊತ್ತಿಲ್ಲ. ಪ್ರತಿಯೊಬ್ಬ ವ್ಯವಸಾಯಗಾರರನ್ನು ಕೋರ್ಟಿಗೆ ಕಳುಹಿಸುವ ವ್ಯವಸ್ಥೆಯಾಗುತ್ತಿದೆ. ಇದರಿಂದ ನಿರೀಕ್ಷಿಸಿದಷ್ಟು ಲಾಭ ಬರುವುದಿಲ್ಲ. ಆದ್ದರಿಂದ ನೇರವಾಗಿ ಕಂದಾಯ ಹಾಕಬೇಕು. ಆಮೇಲೆ ಕಂದಾಯಗಳ ಆದಾರದ ಮೇಲೆ ಕರಭಾರಗಳನ್ನು ಹಾಕಬೇಕು. ಆದರೆ ಅವರವರ ಯೋಗ್ಯತೆಯ ಮೇಲೆ ಕನಿಷ್ಟ ಮಿತಿಯನ್ನು ಇಟ್ಟು ಕರಭಾರವನ್ನು ಹಾಕಬೇಕು. ಅದೇ ರೀತಿಯಲ್ಲಿ ಉಳಿದವರಿಗೂ ಕೂಡ ಅವರ ಆದಾಯದ ಮೇಲೆ ತೆರಿಗೆಯನ್ನು ಹಾಕಬೇಕು. ಒಟ್ಟಿನಲ್ಲಿ ಕಂದಾಯದ ಆಧಾರದ ಮೇಲೆಯೇ ನೇರವಾಗಿ ತೆರಿಗೆಯನ್ನು ಹಾಕಬೇಕು.

ಶ್ರೀ ಎಂ. ವೈ. ಘೋರ್ಪಡೆ ;—ಈಗ ಅದನ್ನೇ ಮಾಡಿರುವುದು.

ಶ್ರೀ ಕಾಗೋಡು ತಿಮ್ಮಪ್ಪ :—ಈಗಿರುವುದು ಬಹಳ ತೊಡಕು. ನೇರವಾಗಿ ಅಂತಹ ತೆರಿಗೆಗಳನ್ನು ಹಾಕಿದರೆ ಆಗ ಬಹಳ ಸುಲಭವಾಗಿ ಅದನ್ನು ವಸೂಲು

ಮಾಡಬಹುದು. ಈ ತೆರಿಗೆಗಳನ್ನು ಕಂದಾಯ ವಸೂಲು ಮಾಡುವ ರೀತಿಯಲ್ಲಿ ವಸೂಲು ಮಾಡಬೇಕು. ವ್ಯವಸಾಯಗಾರರು ಲೆಕ್ಕಪತ್ರಗಳನ್ನು ಕೊಟ್ಟ ಮೇಲೆ ತೆರಿಗೆ ವಸೂಲುಮಾಡಬೇಕೆಂದರೆ ಅದು ಆಗದೇ ಇರತಕ್ಕ ಕೆಲಸ. ವ್ಯವಸಾಯ ಗಾರರ ಮೇಲೆ ತೆರಿಗೆ ಹಾಕುವ ಕ್ರಮದಲ್ಲಿ ನೀವು ದೀರ್ಘವಾಗಿ, ಆಳವಾಗಿ ಆಲೋಚನೆ ಮಾಡಬೇಕು. ಭೂತಲಿಂಗಂ ಕಮಿಟಿಯವರ ವರದಿಯಲ್ಲಿ ಹೇಳಿರ ಬಹುದು. ಆ ಒಂದು ವಿಚಾರವನ್ನೇ ಹಿನ್ನೆಲೆಯಾಗಿ ಇಟ್ಟುಕೊಂಡು ನೀವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ. ಪ್ರಾಕ್ಟಿಕಲ್ ದೃಷ್ಟಿಯಿಂದ ನಮ್ಮ ವ್ಯವಸಾಯ ಕ್ಷೇತ್ರದಲ್ಲಿರತಕ್ಕ ತಜ್ಞರನ್ನೂ, ವ್ಯವಸಾಯಗಾರರನ್ನೂ ಹಾಗೂ ವ್ಯವಸಾಯಗಾರರ ಪ್ರತಿನಿಧಿಗಳನ್ನೂ ಕೂರಿಸಿ ಚರ್ಚೆಮಾಡಿ ಅವರ ಸಾಧಕ, ಬಾಧಕ ಗಳನ್ನು ಆಲೋಚನೆ ಮಾಡಿ ತೆರಿಗೆ ಹಾಕಬೇಕು. ಆದರೆ ವ್ಯವಸಾಯ ಕ್ಷೇತ್ರದಲ್ಲಿ ಇಲ್ಲದೇ ಇರುವವರಲ್ಲಿ ಚರ್ಚೆ ಮಾಡಲು ವಿಚಾರ ವಿನಿಮಯ ಮಾಡಲು ಪ್ರಯತ್ನ ಮಾಡಬೇಡಿ. ವ್ಯವಸಾಯಗಾರರಲ್ಲಿ ವ್ಯವಸಾಯ ತಜ್ಞರು ಇಲ್ಲ. ನಮ್ಮ ಅಧ್ಯಕ್ಷರೇ ಸಾಕಷ್ಟು ಸಲಹೆಗಳನ್ನು ಇದರ ಬಗ್ಗೆ ಕೊಡುವವರಾಗಿದ್ದಾರೆ. ಅವರ ಜೊತೆಯಲ್ಲಿಯೂ ಇದರ ಬಗ್ಗೆ ವಿಚಾರ ವಿನಿಮಯಮಾಡಲಿ. ಇದರಲ್ಲಿ ಯಾವುದು ಉತ್ತಮವೆಂದು ತಿಳಿದು ಕನ್‌ಸಾಲಿಡೇಟೆಡ್ ಟ್ಯಾಕ್ಸ್ ಹಾಕುವ ದೃಷ್ಟಿಯಿಂದ ಇದನ್ನು ಮಾಡಿದರೆ ಆಗ ನೀವು ಸಾಕಷ್ಟು ತೆರಿಗೆಯನ್ನು ಪಡೆಯಬಹುದು. ಅದ ರಿಂದ ಆಗ ರಾಜ್ಯದ ಭಂಡಾರಕ್ಕೆ ಹೆಚ್ಚಿನ ಆದಾಯ ಬರಬಹುದು. ಈಗ ನಿರೀಕ್ಷಿಸಿದಷ್ಟು ಪೂರ್ಣವಾಗಿ ತೆರಿಗೆಯ ರೂಪದಲ್ಲಿ ಈ ರಾಜ್ಯದ ಭಂಡಾರಕ್ಕೆ ಆದಾಯವನ್ನು ಕೂಡಿಸುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ :—ಮಾನ್ಯ ಸದಸ್ಯರು ಇದರ ಬಗ್ಗೆ ಅಷ್ಟೊಂದು ಅಭ್ಯಾಸ ಮಾಡಿದ್ದಕ್ಕೆ ಬಹಳ ಸಂತೋಷ. ತೆರಿಗೆಯನ್ನು ವಿಧಿಸು ವುದು ಕ್ರಾಪ್ ಆಧಾರದ ಮೇಲೆ ಮಾಡುತ್ತಾ ಇಲ್ಲ. ನೀರಾವರಿಯಲ್ಲಿ ನಾಲ್ಕು ಕ್ಯಾಟಗರೀಸ್ ಮಾಡಿ, ಯಾವ್ಯಾವ ಕ್ಯಾಟಗರಿಯಲ್ಲಿ ಎಷ್ಟೆಷ್ಟು ಭೂಮಿ ಇದೆಯೋ ಅದರ ಮೇಲೆ ಟ್ಯಾಕ್ಸ್ ಹಾಕುವ ವ್ಯವಸ್ಥೆಮಾಡಿದೆ. ಲ್ಯಾಂಡ್ ರೆವಿನ್ಯೂ ಮೇಲೆ ಇಷ್ಟು ಟ್ಯಾಕ್ಸ್ ಎಂದು ಹೇಳುವ ಕಾರಣ ರೈತರಾಗಿರುವವರು ಅಕೌಂಟ್ಸ್ ಇಡುವ ಪ್ರಶ್ನೆಯಿಲ್ಲ, ಅದನ್ನು ವೆರಿಫಿಕೇಷನ್ ಮಾಡುವ ಪ್ರಶ್ನೆಯಿಲ್ಲ, ಅವರ ಪಹಣಿ ನೋಡುವ ಪ್ರಶ್ನೆಯಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ ;— ಉದಾಹರಣೆಗೆ ನೀರಾವರಿ ಭೂಮಿ ತೆಗೆದುಕೊಳ್ಳಿ. ಅದರಲ್ಲಿ ಕಬ್ಬು, ಬತ್ತ ಬೆಳೆಗಳನ್ನು ಬೆಳೆಯಬಹುದು. ಈ ವರ್ಷ ಕಬ್ಬು ಹಾಕಿದರೆ ಒಂದು ಆದಾಯ ಬರುತ್ತದೆ. ಬತ್ತ ಹಾಕಿದರೆ ಬೇರೆ ರೀತಿಯ

(ಶ್ರೀ ಕಾಗೋಡು ತಿಮ್ಮಪ್ಪ)

ಆದಾಯ ಬರುತ್ತದೆ. ಒಂದುವೇಳೆ ಒತ್ತದ ಮೇಲೆ ನೀವು ಹೆಚ್ಚು ತೆರಿಗೆಯನ್ನು ಹಾಕಿದರೆ ಆಗ ಅವನು ಕಬ್ಬು ಹಾಕುತ್ತಾನೆ. ಒಂದೊಂದು ವರ್ಷದಲ್ಲಿ ಬತ್ತದ ರೇಟ್ ಡಿಫರೆನ್ಸ್ ಇರುತ್ತದೆ. ಆಗ ಏನು ಮಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಸೆಲೆಕ್ಟೆಡ್ ಕ್ರಾಪ್ ನೋಡಿದರೆ ಯಾವುದು ಪರ್ಮನೆಂಟ್ ಆಗಿ ಇರುತ್ತದೋ ಅದನ್ನು ನೋಡಿ ತೆರಿಗೆ ಹಾಕಬೇಕಾಗುತ್ತದೆ. ಪರ್ಮನೆಂಟ್ ಕ್ರಾಪ್ ಏನಿದೆ ಅದು ವರ್ಷ ವರ್ಷವೂ ಹಾಕತಕ್ಕ ಬೆಳೆಯಲ್ಲ. ಪ್ಲಾಂಟೇಷನ್ಸ್‌ನ್ನು ವರ್ಷ ವರ್ಷವೂ ಹಾಕುವುದಿಲ್ಲ. ಅಂತಹ ಕ್ರಾಪ್‌ಗಳನ್ನು ಬಿಟ್ಟು ಬರೀ ಲ್ಯಾಂಡ್ ರೆವಿನ್ಯೂ ಅಥವಾ ಇರ್ರಿಗೇಷನ್ ಬೇಸಿಸ್ ಮೇಲೆ ತೆರಿಗೆ ಹಾಕಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :—ಇಷ್ಟು ಹೇಳಿ ನನಗೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ವಿ. ಎಂ. ಘಾಡಿ (ಹಳ್ಯಾಳ್) :—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥಮಂತ್ರಿಗಳು ಮಂಡಿಸಿರತಕ್ಕ 1975-76ನೇ ಸಾಲಿನ ಬಡ್ಜೆಟ್ಟನ್ನು ನೋಡಿದರೆ, ಅದು ಒಂದು ವೈಶಿಷ್ಟ್ಯಪೂರ್ಣವಾದಂಥಾದ್ದು ಆಗಿದೆ, ನಮ್ಮ ರಾಜ್ಯ ಸರ್ಕಾರದವರು ಸರ್ಕಾರದ ನೌಕರರಿಗೆ ಅನುಕೂಲವಾಗುವಂತೆ ಯಾವ ರಾಜ್ಯದಲ್ಲಿ ಇಲ್ಲದೇ ಇರತಕ್ಕ ಫ್ಯಾಮಿಲಿ ಬೆನಿಫಿಟ್ ಫಂಡ್ ಸ್ಕೀಂ ಒಂದನ್ನು ಮಾಡಿರುವುದು ಸ್ವಾಗತಾರ್ಹವಾದುದು. ಅದೇ ಪ್ರಕಾರ ನಿವೃತ್ತಿ ವೇತನವನ್ನು 10 ರೂಪಾಯಿಗಳಿಂದ 50 ರೂಪಾಯಿಗಳವರೆಗೂ, ವೃದ್ಧಾಪ್ಯ ವೇತನವನ್ನು 30 ರೂಪಾಯಿಗಳಿಂದ 40 ರೂಪಾಯಿಗಳವರೆಗೂ ಏರಿಸುವುದು, ಪಶ್ಚಿಮಘಟ್ಟಗಳ ಅಭಿವೃದ್ಧಿ ಯೋಜನೆ, ನಿರುದ್ಯೋಗ ನಿವಾರಣೆಗಾಗಿ ಟ್ರೈನೀಸ್ ಫಾರ್ ಜಾಬ್ಸ್ ಯೋಜನೆ, ಹರಿಜನ ಗಿರಿಜನರಿಗೆ ಹಾಸ್ಟೆಲುಗಳ ಸೌಕರ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವುದು, ಇತ್ಯಾದಿ ಕಾರ್ಯಕ್ರಮಗಳನ್ನು ಈ ವರ್ಷದಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿರುವುದನ್ನು ನೋಡಿದರೆ ಈ ಬಡ್ಜೆಟ್ ಸಾಧಾರಣವಾಗಿ ನಮ್ಮ ಮಾನ್ಯ ಸಚಿವರು ಹೇಳಿದಂತೆ ಇದೊಂದು ಪ್ಲಾನ್ಡ್ ಬಡ್ಜೆಟ್ ಎಂದು ಹೇಳಿ ನಾನು ಇದನ್ನು ಬೆಂಬಲ ಮಾಡುತ್ತೇನೆ. ಇರ್ರಿಗೇಷನ್ ಮತ್ತು ಮೇಜರ್ ಇರ್ರಿಗೇಷನ್ ಬಗ್ಗೆ 45-46 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೆ ನಮ್ಮ ಸರ್ಕಾರದವರು ನನ್ನ ಕ್ಷೇತ್ರಕ್ಕೆ ಅಥವಾ ನನ್ನ ಜಿಲ್ಲೆಗೆ ಏಕೋ ಒಂದು ಮಲತಾಯಿ ಧೋರಣೆಯನ್ನು ತೋರುತ್ತಿದ್ದಾರೆ. 1972ನೇ ಇಸವಿಯಲ್ಲಿಯೇ ಎರಡೂವರೆ ಕೋಟಿ ರೂಪಾಯಿಗಳಷ್ಟು ಮೀಡಿಯಂ ಇರ್ರಿಗೇಷನ್ ವರ್ಕ್ಸ್‌ನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು.

ನಾನು ಅದರ ಬಗ್ಗೆ ಎಷ್ಟೋ ಗಂಟು ಬಿದ್ದರೂ ಸಹ ಆ ಕೆಲಸ ಇದುವರೆಗೂ ಆಗಿಲ್ಲ. ಕಾರವಾರ ಜಿಲ್ಲೆಯಲ್ಲಿ ನಾಲ್ಕು ಮೀಡಿಯಂ ಪ್ರಾಜೆಕ್ಟ್ಸ್ ಆದಾದು ಕಂಡು ಬರುತ್ತದೆ. ಆದರೆ ನಮ್ಮ ಕಡೆ ಅದೇ ರೀತಿಯಾಗಿ 4 ಮೀಡಿಯಂ ಪ್ರಾಜೆಕ್ಟ್ಸ್ ಯೋಜನೆಗಳನ್ನು ತೆಗೆದುಕೊಂಡು, ಅವಕ್ಕೆ ಪ್ಲಾನ್ ಮತ್ತು ಎಸ್ಟಿಮೇಟ್‌ಗಳು ಆಗಿದ್ದರೂ ಸಹ ಅವಿನ್ನೂ ಇದು ವರೆಗೆ ಕಾರ್ಯರೂಪಕ್ಕೆ ಬರಲಿಲ್ಲ. ಸರ್ಕಾರದವರು ಬೇರೆ ಭಾಗಗಳಲ್ಲಿ ಹೆಚ್ಚಿನ ಲಕ್ಷ್ಯ ಕೊಡುತ್ತಾರೆಯೇ ಹೊರತು ನನ್ನ ಭಾಗದಲ್ಲಿ ಅಷ್ಟಾಗಿ ಕೊಡುತ್ತಾ ಇಲ್ಲ. ಆದ್ದರಿಂದ ಇನ್ನು ಮುಂದೆ ನನ್ನ ಕ್ಷೇತ್ರದಲ್ಲಿ ಮೀಡಿಯಂ ಪ್ರಾಜೆಕ್ಟ್ ಬಗ್ಗೆ ಹೆಚ್ಚಿನ ಲಕ್ಷ್ಯ ಕೊಡಬೇಕು. ಆದಷ್ಟು ಜಾಗ್ರತೆಯಾಗಿ ಒಂದೆರಡು ಪ್ರಾಜೆಕ್ಟ್‌ಗಳನ್ನು ನನ್ನ ಕ್ಷೇತ್ರದಲ್ಲಿ ತೆಗೆದುಕೊಳ್ಳಬೇಕೆಂದು ನಾನು ಕಳವಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ಪ್ರಕಾರ ಹುಲಿಕೆರೆ ಟ್ಯಾಂಕ್, ಧಾರವಾಡ ಜಿಲ್ಲೆಯ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡರೆ ನಮ್ಮ ತಾಲ್ಲೂಕಿಗೆ ಹೆಚ್ಚಿನ ಉಪಯೋಗವಾಗುತ್ತದೆ. ಅದು ಬಡ್ಜೆಟೆಡ್ ವರ್ಕ್. ಈ ವರ್ಷದಲ್ಲಿಯೇ ಈ ಕೆರೆಯ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಅದೇ ರೀತಿಯಾಗಿ ಕೆಲವು ಮೈನರ್ ವರ್ಕ್ಸ್, ಇರ್ರಿಗೇಷನ್ ವರ್ಕ್ಸ್‌ನ್ನು ನಮ್ಮ ತಾಲ್ಲೂಕ್‌ನಲ್ಲಿ ತೆಗೆದುಕೊಳ್ಳಬೇಕು. ಅನೇಕ ಕೆಲಸಗಳಿಗೆ ಈಗಾಗಲೇ ಪ್ಲಾನ್ ಮತ್ತು ಎಸ್ಟಿಮೇಟ್ ಮಂಜೂರು ಆಗಿರುವುದರಿಂದ ಅವುಗಳ ಬಗ್ಗೆ ಸರ್ಕಾರದವರು ಹೆಚ್ಚಿನ ಲಕ್ಷ್ಯ ಕೊಟ್ಟು ಸೂಕ್ತ ಕ್ರಮ ತೆಗದುಕೊಳ್ಳಬೇಕೆಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಈ ಕಾಳೀ ನದಿ ಕೆಲಸವಾದರೋ ಬಹಳ ಮಂದಗತಿಯಿಂದ ಸಾಗುತ್ತಿದೆ. ತಮಗೆ ಗೊತ್ತಿರುವಂತೆ ಇದು ಸುಮಾರು 250 ಕೋಟಿ ರೂಪಾಯಿಗಳ ಕೆಲಸ. ಆದರೆ ಈ ಸ್ಥಳದಲ್ಲಿಯೂ ಇತ್ತೀಚೆಗೆ ಅರಣ್ಯವನ್ನು ಬಹಳ ಮಟ್ಟಿಗೆ ಕಡಿತ ಮಾಡಲಾಗಿದೆ. ಆ ಶರಾವತಿ ವ್ಯಾಲಿಯಲ್ಲಿ ಹೇಗೆ ಮರಗಳನ್ನು ಕಡಿದುದರಿಂದ ಅಲ್ಲಿ ಮಳೆ ಕಡಮೆಯಾಗಿ ನೀರಿನ ಅಭಾವ ಅಲ್ಲಿ ಉಂಟಾದಂತೆ ಇಲ್ಲಿಯೂ ಆ ತೊಂದರೆ ಸಾಕಷ್ಟು ಆಗಬಹುದೆಂಬ ಶಂಕೆ ನನಗಿದೆ. ಇನ್ನು ಇಲ್ಲಿ ನಮ್ಮ ಲೋಕಲ್ ಜನರಿಗೆ ಈ ಕಾಮಗಾರಿ ನಡೆಯುತ್ತಿರುವ ಕಡೆ ಕೆಲಸಗಳೇ ಸಿಕ್ಕುತಿಲ್ಲ: ಇವರಿಗೆ ಯಾವ ಪ್ರೋತ್ಸಾಹವೂ ಯಾರಿಂದಲೂ ದೊರೆಯುತ್ತಿಲ್ಲ. ಅಲ್ಲೆಲ್ಲಾ ಅವರೊಂದು ಜಾತೀಯತೆ ಮೇಲೆ ಕೆಲಸಗಳನ್ನು ಕೊಡುತ್ತಿರುವಂತೆ ಕಂಡುಬರುತ್ತಿದೆ. ನಾನೇ ಅಲ್ಲಿಯ ಚೀಫ್ ಇಂಜಿನಿಯರ್ ಅವರಿಗೆ ಇಬ್ಬರು ಹುಡುಗರ ಬಗ್ಗೆ ಒಂದು ಕಾಗದವನ್ನು ಬರೆದು ಕಳುಹಿಸಿದ್ದೆ. ಆ ಇಬ್ಬರು ಹುಡುಗರು 40-50 ರೂಪಾಯಿಗಳನ್ನು ವೃಥಾ ಖರ್ಚುಮಾಡಿಕೊಂಡರೂ ಅಲ್ಲಿ ಅವರಿಗೆ ಯಾವ ಕೆಲಸವೂ ಇದುವರೆಗೆ ಸಿಕ್ಕಲಿಲ್ಲ. ಅಲ್ಲಿ ನಡೆಯುತ್ತಿರುವುದೆಲ್ಲಾ ತುಂಬಾ

(ಶ್ರೀ ವಿ. ಎಂ. ಘಾಡಿ)

ಅವ್ಯವಹಾರಗಳು, ಭ್ರಷ್ಟಾಚಾರಗಳು ಅನಾಚಾರಗಳು ದುರ್ವ್ಯವಹಾರಗಳು ಹೇಳತೀರದಾಗಿದೆ. ಅಲ್ಲಿರತಕ್ಕ ಇಂಜಿನಿಯರಿಂಗ್ ಅಧಿಕಾರಿಗಳ ವೈಭಾ ಅವರ ವಿಜ್ರಂಭಣೆಗಳನ್ನು ಹೇಳತೀರದಾಗಿದೆ. ಅಲ್ಲಿ ಕೆಲಸಕ್ಕಾಗಿ ಕೊಟ್ಟಿದ್ದ ಸಿಮೆಂಟ್; ಐರನ್ ಇವುಗಳ ಮತ್ತು ಜೀಪುಗಳ ಅವ್ಯವಹಾರ ಬಹಳ ನಡೆದಿದೆ. ಅಲ್ಲಿ ಅವರು ಓಡಿಸುತ್ತಿರುವ ಜೀಪುಗಳ ಮತ್ತು ಲಾರಿಗಳಿಗೆ ಇತಿಮಿತಿಯೇ ಇಲ್ಲ. ಈ ಹಿಂದೆ ಶರಾವತಿಯಲ್ಲಿ ಏನೊಂದು ಕರ್ಮಖಾಂಡ ನಡೆಯಿತು ಅಂಥದೇ ಒಂದು ಇಲ್ಲಿ ಕಾಳೀನದಿ ಕರ್ಮಖಾಂಡ ಎಂದು ನಡೆಯದೆ ಇರಲಿ ಎಂಬ ಉದ್ದೇಶದಿಂದ ನಾನು ಇದನ್ನೆಲ್ಲಾ ಹೇಳುತ್ತಿದ್ದೇನೆ.

ಇನ್ನು ನಾನು ನಮ್ಮ ಅರ್ಥ ಮಂತ್ರಿಗಳಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ ಏಕೆಂದರೆ ಇವರು ಇಲ್ಲಿ ಒಂದು ಸಾವಿರ ನಿರುದ್ಯೋಗ ಜನರಿಗೆ ಒಂದು ತರಬೇತಿ ಕೇಂದ್ರವನ್ನು ತೆರೆದು ಅವರಿಗೆ ತರಬೇತಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಅವರಿಗೆ ತಲಾ ತಿಂಗಳು ಒಂದಕ್ಕೆ ಒಂದು ನೂರು ರೂಪಾಯಿಗಳ ಸ್ಟೈಪೆಂಡನ್ನು ಕೊಡಬೇಕು. ಅವರಿಗೆ ತರಬೇತಿ ಪೂರೈಸಿದ ಕೂಡಲೇ ಅವರಿಗೆ ಎಲ್ಲರಿಗೂ ಉದ್ಯೋಗಗಳನ್ನು ದೊರಕಿಸಿ ಕೊಡಬೇಕು. ಹಾಗೆ ಮಾಡದಿದ್ದರೆ ಇಲ್ಲಿ ಪರಿಸ್ಥಿತಿ ಬಹಳ ಗಂಭೀರ ಸ್ಥಿತಿಗೇರುತ್ತದೆಂಬುದನ್ನು ಮರೆಯಬಾರದು.

ಇನ್ನು ನಮ್ಮ ರಾಜ್ಯದಲ್ಲಿ ವಿದ್ಯಾ ಖಾತೆಗೆ 92 ಕೋಟಿ 76 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೆ ನಮ್ಮ ವಿದ್ಯಾಖಾತೆಯಲ್ಲಿ ಶಿಕ್ಷಣ ಪದ್ಧತಿ ಬದಲಾವಣೆಯಾಗದ ವಿನಾ ನಾವು ಎಷ್ಟು ಖರ್ಚು ಮಾಡಿದರೂ ಪ್ರಯೋಜನವಿಲ್ಲ. ನಾವು ಇಲ್ಲಿ ಓರಿಯೆಂಟ್‌ಡ್ ಜಾಬ್ ಸ್ಕೀಮನ್ನು ಜಾರಿಗೆ ತರಬೇಕು. ನಮ್ಮಲ್ಲಿ ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆಯನ್ನು ತರತಕ್ಕ ವಿಚಾರದಲ್ಲಿ ನಾನು ನನ್ನದೇ ಆದ 14 ಪಾಯಿಂಟುಗಳನ್ನು ಸರ್ಕಾರದವರ ಅನುಮತಿಗಾಗಿ ತರಬಯಸುತ್ತೇನೆ. ಅವುಗಳು ಯಾವುವೆಂದರೆ :— (1) ಯಾವ ಒಂದು ಶಾಲೆಯಲ್ಲೇ ಆಗಲಿ ಅಲ್ಲಿ ಶಿಕ್ಷಕರ ಕೊರತೆ ಇರಬಾರದು. (2) ಪ್ರತಿಯೊಂದು ಭಾಗದಲ್ಲೂ ಶಾಲಾ ಕಟ್ಟಡಗಳನ್ನು ಒದಗಿಸಬೇಕು. (3) ಪಾಠಶಾಲೆಗಳಲ್ಲಿ ನಡೆಸತಕ್ಕ ಪ್ರವಚನಪಾಠಗಳಲ್ಲಿ ನೈತಿಕ ಹಾಗೂ ಧಾರ್ಮಿಕ ಪಾಠಪ್ರವಚನಗಳಿರುವಂತೆ ಪಠ್ಯಪುಸ್ತಕಗಳನ್ನು ಇಡಬೇಕು. (4) ಮೊದಲನೆಯ ತರಗತಿಯಲ್ಲಿ 25 ಹುಡುಗರಿಗಿಂತ ಹೆಚ್ಚು ಬಾಲಕರು ಇರಬಾರದು. (5) 3ನೇ ತರಗತಿಯಲ್ಲಿ 30 ಜಾಸ್ತಿ ವಿದ್ಯಾರ್ಥಿಗಳಿರಬಾರದು. (6) ಪ್ರತಿಯೊಂದು ಹಳ್ಳಿಗಳಲ್ಲೂ ಒಂದೊಂದು ಶಿಶುವಿಹಾರ ಇರಬೇಕು (7) ಪ್ರತಿಯೊಂದು ಶಾಲೆಗಳಿರತಕ್ಕ ಗ್ರಾಮದಲ್ಲೂ ಅಲ್ಲಿ ವಾಸಕ್ಕೆ ಉಪಾಧ್ಯಾಯರುಗಳಿಗೆ ವಸತಿ ಸೌಕರ್ಯವಿರಬೇಕು. (8) ಉಪಾಧ್ಯಾಯರೂ ಮತ್ತು ಮಕ್ಕಳೂ

ಕಡ್ಡಾಯವಾಗಿ ಸಮವಸ್ತ್ರ ಧರಿಸಬೇಕು. (9) ಪ್ರತಿ ಗ್ರಾಮದಲ್ಲೂ ಜನರಿಗೆ ಓದಿನಲ್ಲಿ ಅಭಿರುಚಿಯನ್ನು ಉಂಟುಮಾಡುವುದಕ್ಕಾಗಿ ಅಲ್ಲಿ ಒಂದೊಂದು ವಾಚನಾಲಯವನ್ನು ಇಡುವಂತೆ ಮಾಡಬೇಕು. (10) ನಾಲ್ಕನೇ ತರಗತಿಯ ಮೇಲ್ಪಟ್ಟ ವಿದ್ಯಾರ್ಥಿಗಳಿಗೆಲ್ಲಾ ಕಡ್ಡಾಯವಾಗಿ ಮಿಲಿಟರಿ ಶಿಕ್ಷಣವನ್ನು ಕೊಡಬೇಕು. (11) ಉತ್ತಮ ರೀತಿಯಲಿ ವ್ಯಾಸಂಗ ಮಾಡತಕ್ಕ ಮತ್ತು ಬಡ ವಿದ್ಯಾರ್ಥಿಗಳಿಗೆಲ್ಲಾ ಸ್ಕಾಲರ್‌ಷಿಪ್ಪನ್ನು ಕೊಡಬೇಕು. (12) ಮೇಲ್ದರ್ಜೆ ವಿದ್ಯಾರ್ಥಿಗಳಿಗೆಲ್ಲಾ ಸಮಾಜವಾದ ಸಮತಾವಾದ ವಿಚಾರದಲ್ಲಿ ಪಾಠ ಪ್ರವಚನಗಳು ನಡೆಯುವಂತೆ ಪಠ್ಯಪುಸ್ತಕಗಳನ್ನು ಇಡಬೇಕು. (13) ಶಿಕ್ಷಕರು ರಾಜಕೀಯದಿಂದ ದೂರವಿರಬೇಕು. (14) ಉಪಾಧ್ಯಾಯರುಗಳು ಮಕ್ಕಳನ್ನು ಬಹಳ ಆತ್ಮೀಯತೆಯಿಂದ ನೋಡಿ ಪಾಠಗಳನ್ನು ಬೋಧಿಸಬೇಕು, ಅಲ್ಲದೆ ಅವರು ತಮ್ಮ ಶಿಕ್ಷಣ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಗಳಲ್ಲಿ ಅಥವಾ ಹವ್ಯಾಸಗಳಲ್ಲಿ ತೊಡಗಬಾರದು. ಪ್ರತಿಯೊಬ್ಬ ಉಪಾಧ್ಯಾಯನೂ ವಿದ್ಯಾರ್ಥಿಗೆ ಗೈಡ್, ಫ್ರೆಂಡ್ ಮತ್ತು ಫಿಲಾಸಫರ್ ಆಗಿರುತ್ತಾನೆಂಬ ಮಮತೆ ವಿದ್ಯಾರ್ಥಿಗಳಲ್ಲಿ ಉಂಟಾಗುವಂತೆ ಅವರು ನಡೆದುಕೊಳ್ಳಬೇಕು. ಇನ್ನು ಪಾಠಪ್ರವಚನಗಳನ್ನು ನಡೆಸತಕ್ಕ ವಿಚಾರದಲ್ಲಿ ಸರ್ಕಾರದವರು ಶಾಲೆಗಳ ಮೇಲೆ ನಿರ್ಬಂಧವನ್ನು ಹಾಕಬಾರದು. ಹೀಗೆ ಕೆಲವು ನಿಯಮಗಳನ್ನು ಕಡ್ಡಾಯವಾಗಿ ಜಾರಿಗೆ ತಂದಲ್ಲಿ ನಮ್ಮ ಶಿಕ್ಷಣ ಪದ್ಧತಿ ಉತ್ತಮಗೊಳ್ಳಬಹುದು. ಆದರೆ ಜನರಿಗೆ ಓದುವುದು ಮತ್ತು ಬರೆಯುವುದು ಎರಡೂ ಬರಬೇಕು. ಇಲ್ಲವಾದರೆ ಸರ್ವಜ್ಞ ಒಂದು ಕಡೆ ಹೇಳುತ್ತಾನೆ:- "ಬರೆಯದಲೇ ಓದುವವನ ಕರೆಯದಲೆ ಬಂದು ನ್ಯಾಯ ಹೇಳುವವನ, ಬರಿಗಾಲಲ್ಲಿ ನಡೆಯುವವನ ಕರೆದು ಕೆರದಿಂದ ಹೊಡಿ ಎಂದ ಸರ್ವಜ್ಞ" ಎಂದು ಹೇಳಿದ್ದಾನೆ.

ಇನ್ನು ಫಾರೆಸ್ಟ್ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ: ಹಿಂದೆ ಬ್ರಿಟಿಷರಿದ್ದ ಕಾಲದಲ್ಲಿ ಇದರ ಅಭಿವೃದ್ಧಿಗೆ ಒಂದು ಉತ್ತಮ ರೀತಿಯ ಪ್ಲಾನನ್ನು ತಯಾರಿಸಿ ಅದರಂತೆ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಆಗ ಕಾಡಿನಲ್ಲಿ ಒಳ್ಳೆಯ ಮರಗಳು ಹೇರಳವಾಗಿ ದೊರೆಯುತ್ತಿದ್ದವು. ಆದರೆ ಇತ್ತೀಚೆಗೆ ಅಂಥ ಒಂದು ವ್ಯವಸ್ಥಿತವಾದ ಪ್ಲಾನ್ ಇಲ್ಲದ್ದರಿಂದ ಇಲ್ಲಿ ಅರಣ್ಯಾಭಿವೃದ್ಧಿಗೆ ಖರ್ಚು ಮಾಡತಕ್ಕ ಹಣವೆಲ್ಲಾ ಪೋಲಾಗುತ್ತಿದೆ. ನಮ್ಮ ಉತ್ತರಕನ್ನಡ ಜಿಲ್ಲೆ ಪ್ರಕೃತಿ ಸೌಂದರ್ಯಕ್ಕೆ ಹೆಸರಾದ ಜಿಲ್ಲೆ. ಆದರೆ ಅಲ್ಲಿ ಬಹುಭಾಗ ಅರಣ್ಯ ಪ್ರದೇಶವಿರುವುದರಿಂದ ಅಲ್ಲಿ ಅರಣ್ಯಗಳಿಂದ ಬರತಕ್ಕ ವರಮಾನದಲ್ಲಿ ಅಲ್ಲಿನ ಗ್ರಾಮಪಂಚಾಯತಿಗಳಿಗೆ ಮತ್ತು ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡುಗಳಿಗೆ ಸರ್ಕಾರದದರು ಈಗ ಕೇವಲ ಎರಡು ಪರ್ಸೆಂಟ್ ಹಣವನ್ನು ಗ್ರಾಂಟ್ ರೂಪದಲ್ಲಿ ಕೊಡುತ್ತಿದ್ದಾರೆ. ಇದರಿಂದಿಲ್ಲಿ ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ಡೆವಲಪ್‌ಮೆಂಟ್ ಗ್ರಾಂಟನ್ನು ಕನಿಷ್ಠ ಪಕ್ಷ 15–20 ಪರ್ಸೆಂಟಿಗಾದರೂ

(ಶ್ರೀ ವಿ. ಯಂ. ಘಾಡಿ)

ಣಿರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಆದರೆ ಅಲ್ಲಿಗೆ ಬರತಕ್ಕ ಎಲ್ಲಾ ಮಂತ್ರಿಗಳು ಏನ್ರಿ ನಿಮ್ಮ ಜಿಲ್ಲೆ ಬಹಳ ಸಂಪತ್ತಿನಿಂದ ಕೂಡಿದ್ದು ಪ್ರಕೃತಿ ಸೌಂದರ್ಯದಿಂದ ಕೂಡಿದ್ದೆಂದು ನಮ್ಮನ್ನು ಹೊಗಳಿ ಹೊಗಳಿ ಆ ಬಸವಣ್ಣನವರನ್ನು ಶೂಲಕ್ಕೇರಿಸಿದಂತೆ ಮಾಡುತ್ತಿದ್ದಾರೆ. ಇನ್ನು ಅರಣ್ಯಾಭಿವೃದ್ಧಿ ಕಾರ್ಯಕ್ಕೆ ದೊಡ್ಡ ಅಡಚಣೆ ಎಂದರೆ ಅನೇಕರು ಅಕ್ರಮವಾಗಿ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡುತ್ತಿರುವುದು. ಎಲ್ಲಿ ಬಡವರು ಉಳುವುದಕ್ಕೆ ಭೂಮಿ ಇಲ್ಲದವರು ಬಂದು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಅಂಥ ಸಂದರ್ಭಗಳಲ್ಲಿ ಆ ಭೂಮಿಅನ್ನು ಅವರಿಗೇ ಆ ಲಾವಣಿಯನ್ನು ಅವರಿಗೇ ಖಾಯಂ ಮಾಡಿ ಯಾರು ಹೆಚ್ಚು ಭೂಮಿ ಉಳ್ಳವರು ಅತಿಕ್ರಮಣ ಮಾಡಿದ್ದಾರೋ ಅಂಥವರ ಹಂಗಾಮಿ ಲಾವಣಿಯನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ. ಇದಕ್ಕಾಗಿ ಒಂದು ಸಮಿತಿಯನ್ನು ಮಾಡಬೇಕೆಂದೂ ಅದರಲ್ಲಿ ಡಿ. ಎಫ್. ಓ. ಮತ್ತು ಒಬ್ಬ ಅಗ್ರಿಕಲ್ಚರಲ್ ಆಫೀಸರು ಮತ್ತು ಸ್ಥಳೀಯ ತಾಶೀಲ್ದಾರ ಮತ್ತು ಇಬ್ಬರು ಖಾಸಗೀ ಸದಸ್ಯರು ಅವರಲ್ಲಿ ಒಬ್ಬರು ಹರಿಜನ ಸದಸ್ಯರು ಇರವಂತೆ ಒಂದು ಕಮಿಟಿಯನ್ನು ಮಾಡಬೇಕೆಂದು ಹೇಳುತ್ತೇನೆ ಇನ್ನು ಆ ಎಲ್ಲಾಪುರ ತಾಲ್ಲೂಕಿನಲ್ಲಿ ಅರಣ್ಯವನ್ನು ಒತ್ತುವರಿ ಮಾಡಿ ಅಲ್ಲಿ ತೋಟಗಳನ್ನು ಮಾಡಿಕೊಂಡಿದ್ದಾರೆ. ಅವುಗಳನ್ನು ಹೆಚ್ಚು ಬಿಟ್ಟು ಕೊಡಬೇಕೆಂದು ಅರಣ್ಯ ಖಾತೆಯವರು ಆ ಜನರಿಗೆ ಈಗ ನೋಟೀಸುಗಳನ್ನು ಕೊಟ್ಟದ್ದಾರೆ. ಆದರೆ ಆ ಭೂಮಿಯನ್ನು ಆ ಜನರಿಗೇ ಬಿಟ್ಟುಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ರಸ್ತೆಗಳ ವಿಚಾರಕ್ಕೆ ಬಂದರೆ ನಮಲ್ಲಿ ವರ್ಷಂಪ್ರತಿ 150-200 ಇಂಚುಗಳ ಮಳೆ ಸುರಿಯುತ್ತಿರುವುದರಿಂದ ಅಲ್ಲಿ ಕಳೆದ ವರ್ಷ ಎಲ್ಲೆಲ್ಲಿ ರಸ್ತೆಗಳಿಗೆ ಟಾರ್ ಮಾಡಿತ್ತು ಎಂಬುದನ್ನು ತಿಳಿಯಲು ನಾವು ಮೈಕ್ರಾಸ್‌ಕೋಪನ್ನು ಹಚ್ಚಿ ನೋಡಬೇಕಾಗುತ್ತದೆ. ಅಂದರೆ ಅಲ್ಲಿ ಮಳೆ ವಿಶೇಷವಾಗಿ ಬೀಳುತ್ತಿರುವುದರಿಂದ ರಸ್ತೆಗಳು ಬೇಗ ಹಾಳಾಗುತ್ತವೆ ಈ ಅಂತವನ್ನು ನಾನ್ನು ಮೊನ್ನೆ ಜಿಲ್ಲೆಗೆ ಮಾನ್ಯ ಅರ್ಥಸಚಿವರು ಬಂದಿದ್ದಾಗ್ಗ ಮನವರಿಕೆ ಮಾಡಿಕೊಟ್ಟಿದ್ದೇನೆ. ಅದಕ್ಕೆ ಅವರೂ ಸಹಾ ಸಹಾನೂಭೂತಿಯಿಂದ ಸಹಾಯ ಮಾಡುವುದಕ್ಕೆ ಒಪ್ಪಿದ್ದಾರೆ. ಹಾಗೆ ಅವರು ಅಲ್ಲಿಗೆ ಬಂದ್ದಿದಾಗ ಒಪ್ಪಿಕೊಂಡಿರುವಂತೆ ಜ್ಞಾಪಕ ಮಾಡಿಕೊಂಡು ಅಲ್ಲಿಯ ರಸ್ತೆ ಮತ್ತು ಸೇತುವೆಗಳಿಗೆ ಹೆಚ್ಚಿನ ಗ್ರಾಂಟನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಪಶ್ಚಿಮ ಘಟ್ಟಗಳ ಡೆವಲಪ್‌ಮೆಂಟಿಗಾಗಿ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ 8 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೂ ಪ್ರಸ್ತುತ ಸಾಲಿನಲ್ಲಿ

ಎಷ್ಟು ಖರ್ಚುಮಾಡುತ್ತಾರೆಂಬುದನ್ನು ತಿಳಿಸಿಲ್ಲ. ಈ ಜಿಲ್ಲೆ ಪ್ರಕೃತಿ ಸೌಂದರ್ಯ ದಿಂದ ಕೂಡಿದ್ದು. ಇಲ್ಲಿ ಸಣ್ಣ ಪುಟ್ಟ ಉದ್ಯಮಗಳಿಗೆ ಅವಕಾಶವಿದೆ ನೈಸರ್ಗಿಕ ಸಂಪತ್ತು ಅಲ್ಲಿ ದೊರೆಯುವುದು, ಕಬ್ಬಿಣ, ಮ್ಯಾಂಗನೀಸ್ ಮುಂತಾದ್ದು ಸಿಕ್ಕುವುದು. ಅದನ್ನು ಬಳಸಿಕೊಂಡು ಜನತೆಗೆ ಉದ್ಯೋಗಗಳಿಗೆ ಅವಕಾಶ ಮಾಡಿಕೊಡಬೇಕು. ಅಷ್ಟೇ ಅಲ್ಲದೆ ನಮ್ಮದು ಬಹಳ ಹಿಂದುಳಿದ ಜಿಲ್ಲೆಯೆಂದು ಡಿಕ್ಲೇರ್ ಮಾಡಿ ಸಣ್ಣಪುಟ್ಟ ಉದ್ಯೋಗಳಿಗೆ ಪ್ರಾಮುಖ್ಯತೆ ಕೊಡಬೇಕು. ಕೈಗಾರಿಕೆಯಲ್ಲಿ ನಮ್ಮ ಜಿಲ್ಲೆ ಬಹಳ ಹಿಂದುಳಿದಿದೆ.

ಒಕ್ಕಲತನ. ರೈತ ದೇಶದ ಬೆನ್ನುಮೂಳೆ ಎಂದು ಹೇಳುವರು. ಸರ ಕಾರದ ಬೆನ್ನೆಲುಬು ಎನ್ನುವರು. ಸಮಾಜವಾದವನ್ನು ಜಾರಿಗೆ ತರಬೇಕು, ಇಲ್ಲದಿದ್ದರೆ ಹಾಳಾಗುತ್ತಾರೆ, ಕೈಗಾರಿಕಾ ಉತ್ಪನ್ನ ಹೆಚ್ಚಿಸಬೇಕು, ಇಲ್ಲದಿದ್ದರೆ ಹಾಳಾಗುವರು, ಫ್ಯಾಮಿಲಿ ಪ್ಲಾನಿಂಗ್ ಅನುಸರಿಸಬೇಕು, ಮಕ್ಕಳು ಕಡಮೆ ಯಾಗದಿದ್ದರೆ ಹಾಳಾಗುವಿರಿ, ಹೆಚ್ಚು ನೀತಿವಂತರಾಗಬೇಕು, ಇಲ್ಲದಿದ್ದರೆ ಹಾಳಾಗುತ್ತೀರಿ, ಎಂದು ಹೀಗೆ ಹೇಳುವರು. ಅದೇ ರೀತಿಯಲ್ಲಿ ಒಕ್ಕಲತನದ ಬಗ್ಗೆ ಸಹ ಹೇಳಬೇಕಾಗಿದೆ ಈ ಸಮಯದಲ್ಲಿ ಸರ್ವಜ್ಞನ ವಚನ ಜ್ಞಾಪಕಕ್ಕೆ ಬರುವುದು. ಅನ್ನದೇವರ ಮುಂದೆ ಇನ್ನು ದೇವರು ಉಂಟೇ, ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಲೇಸು ಎಂಬುದನ್ನು ನೆನಸಿಕೊಳ್ಳಬೇಕಾಗಿದೆ. ಕೋಟಿ ವಿದ್ಯೆಗಳಲ್ಲಿ ಒಕ್ಕಲ ತನಕ್ಕೆ ಪ್ರಾಮುಖ್ಯತೆ ವಿಶೇಷವಾಗಿ ನೀಡಬೇಕಾಗಿದೆ. ಇದರಿಂದ ದೇಶದ ಎಲ್ಲಾ ಪ್ರಗತಿಯೂ ಆಗುವುದು. ಇಲ್ಲದಿದ್ದರೆ ದೇಶ ತಲೆ ಕೆಳಗಾಗುವುದು. ಮಹಾತ್ಮ ಗಾಂಧಿಯವರು ಬೇಸಾಯುಗಾರರು ವನ ನಿರ್ವಾಸ ಬಲ್ಲರು, ಅವರ ಸುಖಶಾಂತಿಯೇ ದೇಶದ ಏಳಿಗೆಗೆ ಏಕೈಕ ಮಾರ್ಗ ಎಂದು ತಿಳಿಸಿದ್ದಾರೆ. ಆದರೆ ರೈತರ ಪರಿಸ್ಥಿತಿ ಇಂದೇನಾಗಿದೆ ನೋಡಬೇಕು. ಇಂದು ರೈತಸಾಲದಲ್ಲಿ ಹುಟ್ಟಿ ಸಾಲದಲ್ಲಿ ಜೀವನಮಾಡಿ ಸಾಲದಲ್ಲೇ ಸಾಯುತ್ತಾರೆ. ಎಂದು ಒಬ್ಬ ಎಕನಾಮಿಸ್ಟ್ ಹೇಳಿದ್ದಾರೆ. ಇಂದು ರೈತ ಎಲ್ಲ ಕಡೆಯೂ ಹೊಡೆತ ತಿನ್ನುತ್ತಿದ್ದಾನೆ.

(ಶ್ರೀಮತಿ ಎಡ್ನಿ ಸಾಲ್ಡಾನರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಒಕ್ಕಲತನಮಾಡಲು ಫರ್ಟಿಲೈಜರ್‌ಬೇಕು. ಅದಕ್ಕೆ ಹೆಚ್ಚು ಕ್ರಯವಿರುವುದು. ಸರಿಯಾಗಿ ದೊರೆಯುವುದಿಲ್ಲ, ಮಳೆ ಸರಿಯಾಗಿ ಬರುವುದಿಲ್ಲ, ಒಳ್ಳೆ ಬೆಲೆ ದೊರೆ ಯುವುದಿಲ್ಲ, ಇದರಿಂದ ರೈತ ಹೊಡೆತ ತಿನ್ನಬೇಕು. ತೆರಿಗೆ ಸಿಕ್ಕಾಪಟ್ಟೆ ಹಾಕುವುದರಿಂದ ಅವನು ನರಳಬೇಕಾಗಿದೆ. ರೈತರಿಗೆ ಸಿಮೆಂಟು, ಕಬ್ಬಿಣ, ಸಿಕ್ಕುವುದಿಲ್ಲ. ಗೊಬ್ಬರ ಸಿಕ್ಕುವುದಿಲ್ಲ, ಅರಿವೆ ಸಿಕ್ಕುವುದಿಲ್ಲ, ಹೀಗೆ ರೈತರಿಗೆ ಬಹಳ ತೊಂದರೆಯಿದೆ. ಆದುದರಿಂದ ಹಳ್ಳಿಗಳ ಕಡೆ ರೈತರ ಕಡೆ ಹೆಚ್ಚು

(ಶ್ರೀ ವಿ. ಎಂ ಫಾಡಿ)

ಗಮನಕೊಡಬೇಕು. ಎಂದು ಕಳಕಳಿಯ ವಿನಂತಿಮಾಡಿಕೊಳ್ಳುತ್ತೇನೆ. ರೈತ ಲೆವಿ ಕೊಡಬೇಕು. 10 ಎಕರೆ ಭೂಮಿ ಇದ್ದರೆ ಎಕರೆಗೆ 6 ಕ್ವಿಂಟಾಲಿನಂತೆ 60 ಕ್ವಿಂಟಾಲ್ ಲೆವಿ ಕೊಟ್ಟು ರೈತ ತನ್ನ ಸಂಸಾರ ತೂಗಿಸುವುದು ಕಷ್ಟ. ವಾಟರ್ ಸೆಸ್ ಬೇರೆ ತೆರಬೇಕು. ವಾಟರ್‌ಸೆಸ್ ಬಂತು ಲೆವಿ ಬಂತು ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ಈ ಸಂದರ್ಭದಲ್ಲಿ ಹೇಳುವುದು ಸೆಸ್ 65 ರಿಂದ ಬಂದಿದೆ ಹಿಂದಿನ ಸರಕಾರ ವಿಧಿಸಿತ್ತು. ಹಿಂದೆ ಪ್ರತಿಭಟನೆ ಮಾಡ ಲಿಲ್ಲ. ಕೆಲವು ಕಾಲ ನಿಲ್ಲಿಸಿ ಮತ್ತೆ ಹಾಕಿದರು. ಚುನಾವಣೆ ಬಂದಾಗ ಸಂಸ್ಥಾ ಕಾಂಗ್ರೆಸ್‌ನವರು ಓಟಿಗಾಗಿ ಸುಮ್ಮನಿದ್ದರು. ಹಳ್ಳಿಗಳಲ್ಲಿರುವ ರೈತರಿಗೆ ಸಕ್ಕರೆ, ಬಟ್ಟೆ, ಗೋಧಿ, ಜೋಳ, ಗೋಧಿ ಪದಾರ್ಥಗಳು, ಸೀಮೆಎಣ್ಣೆ ಸಿಕ್ಕುವುದಿಲ್ಲ, ಇಂಥ ಪರಿಸ್ಥಿತಿಯಿದೆ. ಒರಟುಧಾನ್ಯಗಳಿಗೆ ನಿರ್ಬಂಧ ತೆಗೆದಿರುವುದರಿಂದ ತೊಂದರೆಯಾಗಿರುವುದರಿಂದ ಮತ್ತೆ ರೆಸ್ಟ್ರಿಕ್ಷನ್ ತರಬೇಕೆಂದು ಕೇಂದ್ರ ಸರಕಾರದಲ್ಲಿ ಒತ್ತಾಯಮಾಡಬೇಕೆಂದು ವಿನಂತಿ ಮಾಡುತ್ತೇನೆ.

ದಾಂಡೇಲಿಯಲ್ಲಿ ಲೇಬರ್ ಸಮಸ್ಯೆ ಹೆಚ್ಚಾಗಿದೆ, ಬಡವರಿಗೆ ತೊಂದರೆ ಯಾಗಿದೆ. ಆದುದರಿಂದ ಅಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಜಾರಿಗೆ ತರಬೇಕು ಎಂದು ವಿನಂತಿಮಾಡಿಕೊಳ್ಳುತ್ತೇನೆ. ಜನವರಿಯಲ್ಲಿ ಇದರ ಬಗ್ಗೆ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಆದಷ್ಟು ಬೇಗನೆ ಅದನ್ನು ಅಲ್ಲಿ ಜಾರಿಗೆ ತರಬೇಕು ಎಂದು ವಿನಂತಿಮಾಡಿ ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಟಿ. ಆರ್. ಶಾಮಣ್ಣ (ಕೋಟೆ):— ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಇಂದು ನಮ್ಮ ಅರ್ಥ ಸಚಿವರು ಮಂಡಿಸಿರುವ ಈ ಆಯವ್ಯಯದ ಬಗ್ಗೆ ಮಾತನಾಡ ಬೇಕಾದರೆ ಅವರು ಬಹಳ ಬುದ್ಧಿವಂತಿಕೆಯಿಂದ ಚಾಣಕ್ಯತನದಿಂದ ಅಂಕಿ ಅಂಶ ಜೋಡಣೆ ಮಾಡಿದ್ದಾರೆ ಹಾಗೂ ನಿರ್ಜೀವ ಬೊಂಬೆಗೆ ಬಣ್ಣದ ಉಡಿಗೆ ತೊಡಿಸಿ ಜೀವಕಳೆಯನ್ನು ತುಂಬುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಹೀಗೆ ಹೇಳಿದರೆ ತಪ್ಪಾಗ ಲಾರದು. ಏಕೆಂದರೆ ಯಾವುದಾದರೂ ಒಂದು ಆಯವ್ಯಯದ ಲೆಕ್ಕ ತೆಗೆದು ಕೊಂಡರೆ ಅದರಲ್ಲೂ ರಾಜ್ಯಮಟ್ಟದಲ್ಲಿ ನೋಡಬೇಕಾದರೆ ಎಷ್ಟರಮಟ್ಟಿಗೆ ತೆರಿಗೆ ಹಾಕಿದ್ದಾರೆ ಮತ್ತು ತೆರಿಗೆ ಹಣ ಖರ್ಚು ಮಾಡುವುದರಿಂದ ಜನಸಾಮಾನ್ಯರಿಗೆ ಎಷ್ಟರಮಟ್ಟಿಗೆ ಸೌಲಭ್ಯ ದೊರಕಿದೆ ಎಂಬುದು ಗೊತ್ತಾಗಬೇಕು. ಬರೀ ಹಣಕಾಸಿನ ಅಂಕಿಅಂಶ ನೋಡಿ ಲೆಕ್ಕ ಮಾಡುವುದಕ್ಕಾಗುವುದಿಲ್ಲ ಈಗ ನಮ್ಮ ಸರಕಾರದವರು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಪೂರ್ಣವಾಗಿ ನಿಷ್ಫಲರಾಗಿದ್ದಾರೆ. ಸುಖೀರಾಜ್ಯದಲ್ಲಿ ಜನತೆಗೆ ಎಷ್ಟುಮಟ್ಟಿಗೆ ಸುಖ ದೊರಕಿದೆ ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಹೋದ ವರ್ಷ ಹಿಂದೆ ಎರಡು ವರ್ಷಗಳಲ್ಲಿ ನಮ್ಮಲ್ಲಿ ಬಹಳ

ಬರಗಾಲವಿದ್ದರೂ ಈಗ ಬೆಳೆಯು ಚೆನ್ನಾಗಿದೆಯೆಂಬ ಅಂಶವನ್ನು ತಮ್ಮ ಭಾಷಣ ದಲ್ಲಿ ಹೇಳಿದ್ದಾರೆ. ಆದರೆ ಬೆಲೆಗಳನ್ನು ನೋಡಿದರೆ ವಿಪರೀತವಾಗಿ ಏರಿವೆ. ಅಕ್ಕಿ, ಬೇಳೆ 3 ರಿಂದ ಮೂರುವರೆ ರೂಪಾಯಿ, ಸೀಮೆ ಎಣ್ಣೆ ಒಂದರಿಂದ ಒಂದೂಕಾಲು ರೂಪಾಯಿ ಆಗಿದೆ, ಸಿಮೆಂಟ್ ಇಂದು ಟನ್ನಿಗೆ 250 ರೂಪಾಯಿ ಯ್ಯಾಗಿದೆ. ಈಗ 5 ವರ್ಷಗಳ ಕೆಳಗೆ ಒಂದು ಚದರ ಮನೆ ಕಟ್ಟಲು ಸುಮಾರು ಎರಡುವರೆ ಸಾವಿರ ರೂಪಾಯಿ ಆಗುತ್ತಿದ್ದುದು ಇಂದು 5 ಸಾವಿರ ರೂಪಾಯಿ ಗಿಂತ ಕಡಮೆಯಾಗುವುದಿಲ್ಲ.

5-30 P. M.

ಈ ರೀತಿಯಾಗಿ ಜನಗಳ ಹೊಟ್ಟೆ, ಜನಗಳ ಬಟ್ಟೆ, ಜನಗಳ ವಸತಿಗೆ ಇರ ತಕ್ಕ ಸೌಲಭ್ಯಗಳು ಎಲ್ಲಿಯವರೆಗೆ ಸರಿಹೋಗುವುದಿಲ್ಲವೋ ಅಲ್ಲಿಯವರೆಗೂ ಕೂಡ ಹಣಕಾಸಿನ ಪರಿಸ್ಥಿತಿ ಸರಿಯಾಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಇರತಕ್ಕ ಪರಿಸ್ಥಿತಿಯಲ್ಲಿ ಬೇಸಾಯಗಾರ ತಾನು ಬೆಳೆಯತಕ್ಕ ವಸ್ತುಗಳನ್ನು ಕಡಿಮೆ ಬೆಲೆಗೆ ಮಾರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಒಂದು ಕಡೆ ಗೊಬ್ಬರದ ಬೆಲೆಗಳು ಗಗನಕ್ಕೆ ಏರಿವೆ ಮತ್ತೊಂದು ಕಡೆ ಕೊಡಲಾರದಷ್ಟು ಕೂಲಿ ಬೇಲಿ ಏರಿದೆ ವ್ಯವಸಾಯಕ್ಕೆ ಕೊಡತಕ್ಕ ಪವರ್ ಬೆಲೆಯೂ ಜಾಸ್ತಿಯಾಗಿದೆ. ಇದರ ಜೊತೆಗೆ ನೂರಾರು ತರಹದ ತೆರಿಗೆಗಳು, ಈ ಯೋಚನೆಯಲ್ಲಿ ಬೇಸಾಯಗಾರನು, ತಾನು ಬೇಸಾಯವನ್ನು ಏಕಪಪ್ಪ ಮಾಡಬೇಕು ಎನ್ನತಕ್ಕ ಬೇಜಾರು ಅವನ ಮನಸ್ಸಿನಲ್ಲಿ ಹುಟ್ಟಿದೆ. ಈಗ ಇರತಕ್ಕ ಪರಿಸ್ಥಿತಿಯಲ್ಲಿ ಆಹಾರಧಾನ್ಯಗಳ ಬೆಲೆಗಳು ಇಳಿಯು ವುದಕ್ಕೆ ಸಾಧ್ಯವಿಲ್ಲ. ಎಲ್ಲಿಯವರೆಗೆ ಇದು ಸಾಧ್ಯವಿಲ್ಲವೋ ಅಲ್ಲಿಯವರೆಗೆ ನಮ್ಮ ರಾಜ್ಯವನ್ನು ನಾವು ಸುಖೀರಾಜ್ಯ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಮನುಷ್ಯನ ವರಮಾನಕ್ಕೆ ತಕ್ಕ ಹಾಗೆ ಆಹಾರ ವಸ್ತುಗಳು ಬೆಲೆಗಳು, ಇಲ್ಲ. ಒಂದು ಕಡೆ ಸಾಮಾನುಗಳ ಬೆಲೆಗಳು ಗಗನಕ್ಕೆ ಏರುತ್ತಿವೆ, ಆದ್ದರಿಂದ ಇದನ್ನು ಸಮ ತೋಲನ ಮಾಡುವುದಕ್ಕಾಗುತ್ತಿಲ್ಲ. ರಾಜ್ಯಸರ್ಕಾರದ ನೌಕರರಿಗೆ ಪೂರ್ತಿಯಾಗಿ ಸಹಕಾರ ಕೊಡದಿದ್ದರೂ ಸ್ವಲ್ಪ ಮಟ್ಟಿಗೆ ಹಣದ ಸಹಾಯವನ್ನು ಮಾಡಿದ್ದಾರೆ. ತಮ್ಮ ಬಡ್ಜೆಟ್ಟಿನಲ್ಲಿ ಕೆಲವು ಪೆನ್‌ಷನ್‌ದಾರರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಯಾರಿಗೆ ಖಾಯಂ ವರಮಾನ ಇದೆ, ಮತ್ತು ಅತಿ ಬಡವರಾಗಿದ್ದಾರೆ, ಮತ್ತು ಮಧ್ಯಮ ತರಗತಿಯವರಿದ್ದಾರೆ ಅಂಥವರು ಬಹಳ ಕಷ್ಟಪಡತಕ್ಕ ಪರಿಸ್ಥಿತಿಯನ್ನು ನಾವು ದೇಶದಲ್ಲಿ ನೋಡುತ್ತಿದ್ದೇವೆ. ಜನಸಾಮಾನ್ಯನಿಗೆ ಕೊಳ್ಳತಕ್ಕ ಶಕ್ತಿ ಎಲ್ಲಿಯ ವರೆಗೆ ಹೆಚ್ಚುವುದಿಲ್ಲವೋ ಅಲ್ಲಿಯವರಿಗೆ ನಮ್ಮ ರಾಜ್ಯ ಖಂಡಿತವಾಗಿಯೂ ಸುಖೀ ರಾಜ್ಯವಾಗುವುದಿಲ್ಲ ಎನ್ನತಕ್ಕದ್ದನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ. ಇರಿಗೇಷನ್, ಎಜುಕೇಷನ್, ಮತ್ತು ಹೆಲ್ತ್ ಮತ್ತು ಪವರ್ ಸ್ಕೀಂಗಳು, ಸೋಷಿ ಯಲ್ ವೆಲ್‌ಫೇರ್ ಬಾಬುಗಳಿಗೆ ಏನೋ ಒದಗಿಸಿದ್ದೀರಿ. ಪವರ್ ಸ್ಕೀಂಗಳಿಗೆ ಒದಗಿಸಿರುವ ಹಣ ಹೆಚ್ಚಾದರೂ ಕೂಡ ಅವರು ತಯಾರು ಮಾಡತಕ್ಕ ಖರ್ಚು

(ಶ್ರೀ ಟಿ. ಆರ್. ಶಾಮಣ್ಣ)

ವಿಪರೀತವಾಗಿರುವಾಗ ಆದರಿಂದ ಪ್ರತಿಫಲ ಬಹಳ ಕಡಿಮೆ ಎಂದರೆ ತಪ್ಪಾಗಲಾರದು. ಇದರಿಂದ ಎಷ್ಟು ಸೌಲಭ್ಯ ದೊರೆಯಬೇಕಾಗಿತ್ತೋ ಅಷ್ಟು ದೊರೆಯುತ್ತಿಲ್ಲ ಎನ್ನುವುದನ್ನು ನಾವು ನೋಡುತ್ತಿದ್ದೇವೆ.

ಮುಖ್ಯವಾಗಿ ಹೌಸಿಂಗ್ ಕಾಸ್ಟ್ ಜಾಸ್ತಿಯಾಗುತ್ತಿದೆ. ಒಂದು ಕಡೆ ಟ್ರಸ್ಟ್ ಬೋರ್ಡಿನವರು, ಮತ್ತೊಂದು ಕಡೆ ಸರ್ಕಾರದವರು: ಸರ್ಕಾರದವರೇನೋ ಖಾಲಿ ನಿವೇಷನಗಳನ್ನು ಬಡವರಿಗೆ ಕೊಡಬೇಕು ಎನ್ನುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ, ಆದರೆ ಕೊಟ್ಟಂಥ ನಿವೇಷನಗಳನ್ನು ಕಟ್ಟುವುದಕ್ಕೆ ಹಣದ ಸೌಲಭ್ಯವನ್ನು ನಿಲ್ಲಿಸಿದ್ಧಾರೆ. ಬ್ಯಾಂಕುಗಳಿಂದ ಸಾಲ ತೆಗೆದುಕೊಂಡು ಬಂದು ಅವನು ಮನೆ ಕಟ್ಟುವ ಹಾಗಿಲ್ಲ. ಏಕೆಂದರೆ ಬ್ಯಾಂಕುಗಳವರೂ ಸಹ 18 ರಿಂದ 21 ಪರ್ಸೆಂಟ್ ಬಡ್ಡಿಯನ್ನು ಸಾಲಗಳ ಮೇಲೆ ಹಾಕುತ್ತಿದ್ದಾರೆ. ಒಂದುವೇಳೆ ಇಂಥ ಸಾಲದಿಂದ ಮನೆ ಕಟ್ಟಿಸಿದರೂ ಸಹ ಅದನ್ನು ಉಳಿಸಿಕೊಳ್ಳುವುಕ್ಕೆ ಸಾಧ್ಯವಿಲ್ಲ. ಹೌಸಿಂಗ್ ಬೋರ್ಡಿನವರು ಹಿಂದೆ ಕೊಡತಕ್ಕಂಥ ಕ್ಯಾಷ್ ಲೋನನ್ನೂ ಈಗ ನಿಲ್ಲಿಸಿದ್ದಾರೆ. ಅನೇಕರು ಖಾಲಿ ನಿವೇಷನಗಳನ್ನು ಇಟ್ಟುಕೊಂಡು ಅದರಮೇಲೆ ಹಾಕಿರತಕ್ಕ ಬಂಡವಾಳಕ್ಕೂ ತಕ್ಕ ಪ್ರಯೋಜನ ದೊರೆಯದೆ ತೊಂದರೆ ಪಡುತ್ತಿದ್ದಾರೆ. ಆದ್ದರಿಂದ ಹೌಸಿಂಗ್ ಬೋರ್ಡಿನವರು ಕೊಡತಕ್ಕ ಕ್ಯಾಷ್‌ಲೋನನ್ನು ತಾವು ರಿವೈವ್ ಮಾಡಬೇಕೆಂದು ಈ ಒಂದು ಸಲಹೆಯನ್ನು ನಾನು ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಷೆಡ್ಯೂಲ್ ಕ್ಯಾಸ್ಟ್ಸ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾದ ಪಕ್ಷದಲ್ಲಿ, ಅವರಿಗಾಗಿ ಖರ್ಚು ಮಾಡತಕ್ಕ ಹೆಚ್ಚು ಭಾಗ ಹಣ ಕೆಲವರಿಗೆ ದೊರೆಯುತ್ತಿದೆ. ಇದರಿಂದ ಆ ವರ್ಗದ ಸಾಮಾನ್ಯ ಜನಗಳಿಗೆ ಹೆಚ್ಚಿನ ಅನುಕೂಲ ದೊರೆಯುತ್ತಿಲ್ಲ ಎಂದರೆ ತಪ್ಪಾಗಲಾರದು. ನನ್ನ ಮನೆಯ ಪಕ್ಕದಲ್ಲಿ ಅನೇಕ ಗುಡಿಸಲುಗಳು ಇವೆ, ಗುಡಿಸಲುಗಳ ಜನಗಳೇ ಹೆಚ್ಚಾಗಿ ನನಗೆ ಬೆಂಬಲ ಕೊಟ್ಟವರು. ಎಲ್ಲಿಯವರಿಗೆ ಷೆಡ್ಯೂಲ್‌ಕ್ಯಾಸ್ಟ್ ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲ ಕೊಡುವುದಿಲ್ಲವೋ ಎಲ್ಲಿಯವರೆಗೆ ಕುಡಿಯತಕ್ಕ ಚಟವನ್ನು ಇವರಿಂದ ತಪ್ಪಿಸುವುದಿಲ್ಲವೋ ಅಲ್ಲಿಯವರೆಗೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಗಳಿಗೆ ಯಾವ ವಿಧವಾದ ಅನುಕೂಲವನ್ನು ನೀವು ಅವರಿಗೆ ಮಾಡಿಕೊಟ್ಟರೂ ಆದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಮೊನ್ನೆ ಶ್ರೀಮತಿ ಗಾಂಧಿಯವರು ಬಡಜನರಿಗೆ ಸಹಾಯ ಮಾಡಬೇಕು ಎಂದು ಎನವಿರಾನ್‌ಮೆಂಟ್ ಇಂಪ್ರೂವ್‌ಮೆಂಟ್ ಸ್ಕೀಂ ಎಂದು ಮಾಡಿ ಅದಕ್ಕೆ ಒಂದೂವರೆ ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದಾರೆ. ಇದರಿಂದ ಅನೇಕ ಸ್ಲಂ ಗಳಲ್ಲಿ ಲ್ಯಾವೆಟರಿ

ಗಳನ್ನು ಕಟ್ಟಿದರು, ಈ ಲ್ಯಾವೆಟರಿಗಳಿಗೆ ಒಳ್ಳೆಯ ಟೈಲ್ಸ್ ಹಾಕಿ ಗ್ಲಾಸೆಟ್ಸ್ ಹಾಕಿ ಕಟ್ಟಿದ್ದಾರೆ ಆದರೆ ಇವತ್ತಿನ ದಿವಸ ಅಲ್ಲಿ ಹೋಗಿ ನೋಡಿದರೆ ಒಂದು ಟೈಲ್ಸ್ ಕೂಡ ಇಲ್ಲ. ಒಂದು ಬಾಗಿಲುಕೂಡ ಇಲ್ಲ. ಇಂಥಾದ್ದನ್ನು ಅಲ್ಲಿ ಉಪಯೋಗಿಸಿದರೂ ಕೂಡ ಆ ಜನಗಳಿಗೆ ಇವುಗಳನ್ನು ಯಾವ ರೀತಿ ಉಪಯೋಗಿಸಬೇಕು ಎನ್ನುವುದರ ಬಗ್ಗೆ ತಿಳುವಳಿಕೆ ಕೊಡಬೇಕಾದ್ದು ಆಗತ್ಯ. ಎಲ್ಲಿಯವರಿಗೆ ಈ ಜನಗಳಿಗೆ ದೊಡ್ಡವರು ಎಂದು ಹೇಳಿಕೊಳ್ಳುವವರು, ಸ್ವಚ್ಛವಾದಂಥ ಜೀವನವನ್ನು ನಡೆಸುವುದನ್ನು ಹೇಳಿಕೊಡುವುದಿಲ್ಲವೋ ಅಲ್ಲಿಯವರೆಗೂ ಸಹ, ತಾವು ಯಾವ ಸೌಲಭ್ಯವನ್ನು ಕೊಟ್ಟರೂ ಅದು ವ್ಯರ್ಥವಾಗುತ್ತದೆ. ಗಾಂಧೀಜಿಯವರ ಕಾಲದಲ್ಲಿ ಸಫಾಯಿ ಮಾಡತಕ್ಕದ್ದನ್ನು ಯಾವರೀತಿ ಹೇಳಿದರೋ ಹಾಗೆ ಈಗಲೂ ಅವರಿಗೆ ತಿಳುವಳಿಕೆ ಕೊಡಬೇಕಾದ್ದು ಆವಶ್ಯಕ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹರಿಜನರಿಗೋಸ್ಕರ ಶ್ರೀಮಾನ್ ರಾಚಯ್ಯನವರು ಹೊಸ ಸೃಷ್ಟಿಕರ್ತರಾಗಿ ಉದ್ಭವಿಸಿದ್ದಾರೆ. ಅವರ ಬಗ್ಗೆ ಚಿಂತೆಯನ್ನು ಯಾರೂ ಮಾಡಬೇಕಾಗಿಲ್ಲ.

ಶ್ರೀ ಟಿ. ಆರ್ ಶಾಮಣ್ಣ.—ನಿಜವಾಗಿಯೂ ಕೂಡ ಇವರ ಬಗ್ಗೆ ತಮಗೆ ಕನಿಕರ ಏನಾದರೂ ಇದ್ದರೆ, ತಾವು ಇವರಲ್ಲಿ ಒಬ್ಬರನು ಮಂತ್ರಿಯನ್ನಾಗಿ ಮಾಡುವುದರಿಂದ ಇವರ ಪರಿಸ್ಥಿತಿ ಸರಿಹೋಗುವುದಿಲ್ಲ, ಬಡವರ ಉದ್ಧಾರವಾಗುವ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಬೇಕು. ಇದರ ಜೊತೆಗೆ ಅವರನ್ನೂ ನಮ್ಮ ಮಟ್ಟಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದರೆ ಮಾತ್ರ ಅದು ಕಾರ್ಯ ಸಾಧನೆಯಾಗುತ್ತದೆ.

ವಿದ್ಯಾಭ್ಯಾಸಕ್ಕೆ 92 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅನೇಕ ಸಾರಿ ನಾನು ಹೇಳಿದಹಾಗೆ ಹಣ ಏನೋ ಹೆಚ್ಚಾಗುತ್ತಿದೆ, ವಿದ್ಯಾಭ್ಯಾಸದ ಗಾತ್ರ ಹೆಚ್ಚಾಗುತ್ತಿದೆ, ಆದರೆ ವಿದ್ಯಾಭ್ಯಾಸದ ಮಟ್ಟ ಸಾಧಾರಣವಾಗಿ ಹೆಚ್ಚುವುದಕ್ಕೂ ಸಾಧ್ಯವಿಲ್ಲ. ಇದರಿಂದ ಎಲ್ಲಿಯವರೆಗೆ ನಾವು ವಿದ್ಯಾವಂತ ವಿದ್ಯಾರ್ಥಿಗಳನ್ನು ತಯಾರು ಮಾಡುವುದಿಲ್ಲವೋ ಅಲ್ಲಿಯವರೆಗೆ ನಾವು ಇದಕ್ಕಾಗಿ ಖರ್ಚು ಮಾಡತಕ್ಕದ್ದು ವ್ಯರ್ಥ ಎಂದು ಹೇಳಿದರೆ ತಪ್ಪಾಗಲಾರದು. ಕನ್ನಡದ ಅಭಿವೃದ್ಧಿಯ ಬಗ್ಗೆ ಮಾನ್ಯ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾನು ಇದರಲ್ಲಿ ಹೆಚ್ಚು ಪರಿಶ್ರಮ ಪಡೆದವನು. ಸರ್ಕಾರದವರು ಕನ್ನಡ ಟೈಪ್‌ರೈಟರನ್ನು ತಯಾರು ಮಾಡುವುದಕ್ಕೆ ಮನಸ್ಸು ಮಾಡಿದರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವೇ ಹೊರತು ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಇಡೀ ರಾಷ್ಟ್ರದಲ್ಲಿ 3 ಟೈಪ್‌ರೈಟರ್ ಕಂಪನಿಗಳು ಇವೆ. ರೆಮಿಂಗ್‌ಟನ್, ಗೋದ್ರೇಜ್, ಮತ್ತು ಹಾಲ್ಡಾ ಇವೆ. ಇವರುಗಳು ಬೇರೆ ಭಾಷೆಗಳಲ್ಲಿಯೂ ಟೈಪ್‌ರೈಟರ್‌ಗಳನ್ನು

(ಶ್ರೀ ಟಿ. ಆರ್. ಶಾಮಣ್ಣ)

ತಯ್ಯಾರು ಮಾಡಬೇಕಾಗುತ್ತದೆ. ಆದ್ದರಿಂದ ಇವರುಗಳು ಸ್ಯಾಂಪಲ್‌ಗೆ ಒಂದೊಂದು ಟೈಪ್‌ರೈಟರ್‌ನ್ನು ತಯಾರು ಮಾಡುತ್ತಾರೆ, ಬೇಕಾದಷ್ಟು ಟೈಪ್‌ರೈಟರುಗಳನ್ನು ತಯಾರು ಮಾಡುವುದಕ್ಕೆ ಅವರಿಗೆ ಅನುಕೂಲವಿಲ್ಲ. ಮಾಡುವುದಕ್ಕೆ ಶಕ್ತಿಯೂ ಇಲ್ಲ. ಆದ್ದರಿಂದ ರೆಮಿಂಗ್‌ಟನ್ ಅಥವಾ ಹಾಲ್ಡಾ ದವರೊಂದಿಗೆ ಕೊಲ್ಯಾಬರೇಷನ್ ಮಾಡಿಕೊಂಡು ಕನ್ನಡ ಟೈಪ್‌ರೈಟರ್ ಮಾಡು ವುದಕ್ಕೆ ಸಾಧ್ಯವೇ ಎನ್ನತಕ್ಕದ್ದನ್ನು ನೋಡಿ, ಕಾರ್ಯಗತ ಮಾಡಿದರೆ ಬಹಳ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈಗ ಸರ್ಕಾರದವರು ನಮಗೆ ವರವಾಗಿ ಕೊಟ್ಟಿರುವುದು, ಒಂದು ತೆರಿಗೆಯ ಭಾರ, ಇನ್ನೊಂದು ವಸ್ತುಗಳ ಬೆಲೆಯನ್ನು ಏರಿಸುವುದು. ಹೋದ ವರ್ಷ ಅರ್ಥ ಸಚಿವರು ತಮ್ಮ ಬಡ್ಜೆಟ್ಟನ್ನು ಮಂಡಿಸಿದಾಗ 150 ಕೋಟಿ ರೂ. ಗಳ ತೆರಿಗೆ ಇತ್ತು, ಈ ವರ್ಷ 208 ಕೋಟಿ ರೂಪಾಯಿಗಳ ತೆರಿಗೆಯನ್ನು ಹಾಕಿ ದ್ದಾರೆ. ಒಂದು ವರ್ಷದಲ್ಲಿ ಸುಮಾರು 50 ಕೋಟಿ ರೂಪಾಯಿಗಳ ತೆರಿಗೆಯನ್ನು ಧಾರಾಳವಾಗಿ ನಮ್ಮ ಮೇಲೆ ಹೊರಿಸುವುದಕ್ಕೆ ಅರ್ಥಸಚಿವರು ಪ್ರಯತ್ನಪಟ್ಟಿ ದ್ದಾರೆ. ಪ್ರತಿವರ್ಷ ಕೇಂದ್ರ ಸರ್ಕಾರದವರ ಎಕ್ಸೈಜ್ ಡ್ಯೂಟೀಸ್, ರಾಜ್ಯ ಸರ್ಕಾರದವರ ಸೇಲ್ಸ್ ಟ್ಯಾಕ್ಸ ಹೆಚ್ಚುತ್ತಲೇ ಇದೆ. ನಾನು ಅಸೆಂಬ್ಲಿಗೆ ಮೆಂಬರ್ ಆಗಿ ಬಂದಾಗ ಸೇಲ್ಸ್ ಟ್ಯಾಕ್ಸ್ ವರಮಾನ ಕೇವಲ 30 ಕೋಟಿ ರೂಪಾಯಿ ಇತ್ತು, ಇವತ್ತು ಅದು ನೂರಾರು ಕೋಟಿ ರೂಪಾಯಿಗಳಿಗೆ ಏರಿದೆ, ಬಡವರ ಹೊಟ್ಟೆಯ ಮೇಲೆ ಹೊಡೆದು ಸುಮಾರು 50 ಕೋಟಿ ರೂಪಾಯಿಗಳಷ್ಟು ಎಕ್ಸೈಜ್ ಡ್ಯೂಟಿ ಯನ್ನು ಹಾಕಿದ್ದೀರಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಯಾರೂ ಬಡವರಿಗೆ ಹೊಡೆಯುವ ಹಾಗಿಲ್ಲ. ಹರಿಜನ ಖಾತೆಯ ಮಂತ್ರಿಗಳು ಏನು ಇದ್ದಾರೆ, ಅವರು ತಮ್ಮ ಜನಕ್ಕೆ ಸೇಂದಿ ಕುಡಿಯುವುದನ್ನು ಬಿಟ್ಟು ಬೀರ್ ಕುಡಿದು ಉತ್ತಮರಾಗಿ ಎಂದು ಹೇಳಿದ್ದಾರೆ.

ಈ ತೆರಿಗೆ ಹೊರೆಯಿಂದ ಹೋದ ವರ್ಷ 50 ಕೋಟಿ ರೂಪಾಯಿ ಆಗಿದೆ. ಈ ವರ್ಷದ ಹೆಚ್ಚುವರಿ $16\frac{1}{2}$ ಕೋಟಿ ರೂಪಾಯಿ ಸೇರಿಕೊಂಡರೆ ವರ್ಷೇ ವರ್ಷೇ 50-50 ಕೋಟಿ ರೂಪಾಯಿ ಹೆಚ್ಚಾಗುತ್ತದೆ ಎನ್ನುವುದು ನನ್ನ ಒಂದು ಲೆಕ್ಕಾಚಾರ ಅದರ ಜೊತೆಗೆ ಈ ವರ್ಷ ತೆರಿಗೆ ಬೇರೆ ಹಾಕಿದ್ದೀರಿ. ನೀವು ಯಾವ ತೆರಿಗೆ ಹಾಕಿದರೂ ಕೂಡ ಇವೆಲ್ಲಾ ಕನ್ಸೂಮರ್ಸ್ ಮೇಲೆ ಬೀಳುತ್ತದೇ ವಿನಾ ಬೇರೆ ಯಾರ ಮೇಲೂ ಬೀಳುವುದಿಲ್ಲ. ಅಲ್ಲದೆ ಸೇಲ್ಸ್‌ಟ್ಯಾಕ್ಸ್ ಆಫೀಸಿನವರು ಯಾವ ತೆರಿಗೆಯನ್ನು ವಸೂಲ್ಮಾಡಿದರೂ ಕೂಡ ಅದರಲ್ಲಿ ಬೇಕಾದಷ್ಟು ಸೋರಿ ಹೋಗು

ತ್ತವೆ. ಇನ್ನು ಇದರ ಜೊತೆಗೆ ಅರ್ಬನ್ ಲ್ಯಾಂಡ್ ಟ್ಯಾಕ್ಸ್ ತೆಗೆದುಕೊಂಡು ಬಂದಿದ್ದೀರಿ. ಇದು ತಂದಿರುವುದು ಅನ್ಯಾಯ ಎಂದು ಹೇಳುತ್ತೇನೆ. ಏತಕ್ಕೆಂದರೆ ಸಾಮಾನ್ಯವಾಗಿ ಪಟ್ಟಣಗಳಲ್ಲಿರುವ ಮನೆಗಳನ್ನು 3 ವರ್ಷಕ್ಕೊಂದು ಸಾರಿ ವ್ಯಾಲ್ಯೂ ಮಾಡಬೇಕು. ಹಾಗೆ ವ್ಯಾಲ್ಯೂ ಮಾಡುವಾಗ ಏನಾಗುತ್ತದೆ ಎಂದರೆ ಒಂದು ಉದಾಹರಣೆ ಹೇಳುವುದಾದರೆ ಚಿಕ್ಕಪೇಟೆಗೆ ಹೋದರೆ ಒಂದು ಕಡೆ ಒಂದು ಚದರ ಗಜ ಒಂದು ಸಾವಿರ ಬೆಲೆ ಬಾಳುವುದಾದರೆ ಇನ್ನೊಂದು ಕಡೆ ಅದರ ಹಿಂದುಗಡೆ ಒಂದು ಚದರ ಗಜಕ್ಕೆ 150 ರೂಪಾಯಿ ಬಾಳುತ್ತದೆ. ಒಂದೊಂದು ಮಹಡಿಯಲ್ಲಿ 50–60 ಮನೆಗಳನ್ನು ಕಟ್ಟಿರುತ್ತಾರೆ ಅಂಥಾ ಕಡೆ ಬೆಲೆ ಬಾಳುತ್ತದೆ. ಒಂದೊಂದು ಕಡೆ 10 ಮನೆಗಳನ್ನೂ ಕಟ್ಟಿರುವುದಿಲ್ಲ, ಹಾಗಿದ್ದರೆ ಅದಕ್ಕೂ ಇದಕ್ಕೂ ಒಂದೇ ರೇಟು ಆಗುತ್ತದೆಯೇ? ಇದರಿಂದ ತೊಡಕಾಗುತ್ತದೇ ವಿನಾ ಲಾಭವಾಗುವುದಿಲ್ಲ. ಆದರೆ ಇದರಿಂದ ಯಾರಿಗೆ ಲಾಭವಾಗುತ್ತದೆ ಎಂದರೆ ಇದನ್ನು ಅಸೆಸ್ ಮಾಡತಕ್ಕಂಥಾವರಿಗೆ ಸಂಬಂಧಪಟ್ಟ ನೌಕರರಿಗೆ ಈ ಇಬ್ಬರಿಗೆ ಲಾಭವಾಗುತ್ತದೆ ವಿನಾ ಸರ್ಕಾರಕ್ಕೆ ಹೆಚ್ಚು ಲಾಭವಾಗುವುದಿಲ್ಲ. ಇದನ್ನು 5 ವರ್ಷಕ್ಕೊಂದು ಅಸೆಸ್ ಮಾಡುವಾಗ ಅಸೆಸ್‌ಮೆಂಟ್ ಮಾಡತಕ್ಕಂಥಾವರು ನಿಮ್ಮ ಮನೆಗೆ 500 ರೂಪಾಯಿ ಹಾಕಬೇಕಾಗುತ್ತದೆ ಏನು ಮಾಡುತ್ತೀರಿ ಎಂದು ಕೇಳಿದಾಗ ಅವರು ಹೋಗಲಪ್ಪಾ ಎಂದು ಹೇಳಿ ಅವನಿಗೆ 200-300 ರೂಪಾಯಿ ಕೊಟ್ಟು ಅದರ ವ್ಯಾಲ್ಯೂವೇಷನ್ ಕಡಿಮೆ ಹಾಕಿಸಿಕೊಳ್ಳುತ್ತಾರೆ. ಇದರಿಂದ ಕಾರ್ಪೊರೇಷನ್‌ಗಾಗಲಿ, ಸರ್ಕಾರಕ್ಕಾಗಲಿ ಲಾಭವಾಗುವುದಿಲ್ಲ. ಇದರಿಂದ ದುರುಪಯೋಗ ಜಾಸ್ತಿಯಾಗುತ್ತದೇ ವಿನಾ ಲಾಭವಾಗುವುದಿಲ್ಲ. ಅಲ್ಲದೇ ಇದರಿಂದ ಬರತಕ್ಕಂಥ ಕಲೆಕ್ಷನ್ 60 ಲಕ್ಷ ರೂಪಾಯಿ ಆಗುತ್ತದೆ ಎಂದು ಹೇಳಿದ್ದೀರಿ. ಇಷ್ಟು ಸಣ್ಣ ವರಮಾನ ಬರುವುದರಿಂದಲೂ ಮತ್ತು ಇದರಿಂದ ದುರುಪಯೋಗವಾಗುವುದರ ದೆಸೆಯಿಂದಲೂ ಇದನ್ನು ಕೈಬಿಡಬೇಕು ಎಂದು ನಾನು ಹೇಳುತ್ತೇನೆ. ಅಲ್ಲದೆ ಈಗ ಸೇಲ್ಸ್‌ಟ್ಯಾಕ್ಸ್ ಬೇರೆ ಇದೆ ಅದರ ಜೊತೆಗೆ ಆಕ್ಟ್ರಾಯಿ ಬೇರೆ ಇದೆ, ಇದರ ಜೊತೆಗೆ 15 ಪರ್ಸೆಂಟ್ ಪ್ರಾಪರ್ಟಿ ಟ್ಯಾಕ್ಸ್ ಇದ್ದುದನ್ನು 20 ಪರ್ಸೆಂಟ್‌ಗೆ ಏರಿಸಬೇಕು ಎಂದು ತೀರ್ಮಾನ ಮಾಡಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ: ತಾವು ಹೇಳಿದ ಪ್ರಕಾರ ವ್ಯಾಲ್ಯೂಯೇಷನ್ ಮಾಡುವುದರಲ್ಲಿ ದುರುಪಯೋಗವಾಗುತ್ತದೆ, ಸರಿಯಾದ ವ್ಯಾಲ್ಯೂಯೇಷನ್ ಮಾಡುವುದಕ್ಕೆ ಸಾಧ್ಯವಿಲ್ಲಾ ಎಂದರೆ ಆ ಟ್ಯಾಕ್ಸನ್ನು ಪೂರ್ತಾ ಬಿಟ್ಟುಬಿಡಬಹುದಲ್ಲಾ. ಹೋದವರ್ಷ ಸೇಲ್ಸ್‌ಟ್ಯಾಕ್ಸ್‌ನಲ್ಲಿ ಜಾಸ್ತಿ ಆದಾಯ ಬರಬೇಕಾಗಿತ್ತು ಎಂದು ಹೇಳಿದಿರಿ. ಜಾಸ್ತಿ ಅದರಲ್ಲಿ ಆದಾಯ ಬಂದಿದೆ. ಇನ್ನು ಯಾವುದರಲ್ಲಿ ಆದಾಯ ಜಾಸ್ತಿ ಬರುವಂತೆ ಮಾಡಬೇಕು ಹೇಳುತ್ತೀರಾ?

ಶ್ರೀ ಟಿ. ಆರ್. ಶಾಮಣ್ಣ :—ಸೇಲ್ಸ್ ಟ್ಯಾಕ್ಸ್‌ನಲ್ಲಿ ಹೆಚ್ಚು ಹೆಚ್ಚು ಹಣ ಸೋರಿ ಹೋಗುತ್ತಾ ಇದೆ. ಅದನ್ನು ಸೋರಿ ಹೋಗದೇ ಇದ್ದ ಹಾಗೆ ನೋಡಿ ಕೊಂಡರೆ ಸಾಕು. ಒಂದು ಉದಾಹರಣೆ ಹೇಳುವುದಾದರೆ ನನ್ನ ವಿದ್ಯಾರ್ಥಿ ಒಬ್ಬ ಸೇಲ್ಸ್ ಟ್ಯಾಕ್ಸ್ ಆಫೀಸರ್ ಆಗಿದ್ದಾನೆ. ಅವನು ನನ್ನ ಹತ್ತಿರಕ್ಕೆ ಬಂದು ದಯವಿಟ್ಟು ಸೇಲ್ಸ್ ಟ್ಯಾಕ್ಸ್ ಆಫೀಸರ್ಸ್ ಎಕ್ಸಿಕ್ಯೂಟಿವ್ ಕೆಲಸದಿಂದ ಆಫೀಸಿಗೆ ವರ್ಗ ಮಾಡಿದರೆ ಸಾಕು ಎಂದು ಹೇಳಿದ. ಒಬ್ಬ ಸೇಲ್ಸ್ ಟ್ಯಾಕ್ಸ್ ಆಫೀಸರ್‌ಗೆ ಬೆಂಗಳೂರಿನಲ್ಲಿ ಕೆಲಸ ಸಿಗಬೇಕಾದರೆ 15ರಿಂದ 20 ಸಾವಿರದವರೆಗೆ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಅವನು ಏತಕ್ಕೆ ಹೇಳಿದ ಎಂದರೆ ಅವರನ್ನು ನನ್ನ ಮುಂದೆ ಬರಬೇಡಿರಿ ಎಂದರೂ ಕೂಡ ಅವರು ದುಡ್ಡನ್ನು ನನ್ನ ಮುಂದೆ ಸುರಿಯುತ್ತಾರೆ. ಆದುದರಿಂದ ನನಗೆ ಈ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುವುದಕ್ಕಿಂತ ಆಫೀಸಿಗೆ ಕಳುಹಿಸಿ ಕೊಡಿ ಎಂದು ಹೇಳಿದ.

ಶ್ರೀ ಕೋಣಂದೂರು ಲಿಂಗಪ್ಪ : ಅಂಥಾವರು ಇದ್ದಾರೆಯೇ ? ಅವರ ಹೆಸರನ್ನು ಕೊಡುತ್ತೀರಾ ?

ಶ್ರೀ ಟಿ. ಆರ್. ಶಾಮಣ್ಣ : ಬೇಕಾದರೆ ಅವರ ಹೆಸರನ್ನು ಕೊಡುತ್ತೇನೆ. ಇನ್ನು ಈ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಈವಾಗ ಒಂದು ತಲೆಗೆ ಪರ್ ಕ್ಯಾಪಿಟಾ 15 ರೂಪಾಯಿ ಬೀಳುತ್ತದೆ ಎಂದು ನನ್ನ ಒಂದು ಅಂದಾಜು. ಇನ್ನು ಸೆಂಟ್ರಲ್ ಟ್ಯಾಕ್ಸನ್ನು ತೆಗೆದುಕೊಂಡರೆ ತಲೆಗೆ 20 ರೂಪಾಯಿ ಬೀಳುತ್ತದೆ. ಈ ತೆರಿಗೆ ಹೊರೆ ವರ್ಷೇ ವರ್ಷೇ ಜಾಸ್ತಿಯಾದರೆ ಜನ ಯಾವ ರೀತಿ ಬಾಳಬೇಕು, ಬದುಕ ಬೇಕು ಹೇಳಿ. ಮಾನ್ಯ ಮಂತ್ರಿಗಳು ಕೇಳಿದರು ತೆರಿಗೆ ಹಾಕುವುದು ಬೇಡವೇ ಮತ್ತು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಯಾವ ರೀತಿ ಸರಿ ತೂಗಿಸಬೇಕು ಎಂದು, ಅದಕ್ಕೆ ನಾನು ಹೇಳುವುದು ಇಷ್ಟೆ. ಒಂದನೆಯದಾಗಿ ಸೋರಿ ಹೋಗುತ್ತಿರುವ ಹಣವನ್ನು ಆದಷ್ಟು ಮಟ್ಟಿಗೆ ವಸೂಲ್ಮಾಡಿ. ಎರಡನೆಯದಾಗಿ ಈಗ ಪತ್ರಗಳನ್ನು ರಿಜಿಸ್ಟರ್ ಮಾಡುವಾಗ ಅನೇಕ ಅಕ್ರಮಗಳನ್ನು ಮಾಡು ತ್ತಾರೆ. ಅಂಥಾವಕ್ಕೆ ಅಗತ್ಯವಾಗಿ ಒಂದು ಪೆನಾಲ್ಟಿ ಹಾಕಿ ವಸೂಲ್ಮಾಡಿ. ಮೂರನೆಯದಾಗಿ ಕೋ ಆಪರೇಟಿವ್ ಇನ್ಸ್ಟಿಟ್ಯೂಷನ್‌ನಿಂದ ಸಾಲ ತೆಗೆದುಕೊಳ್ಳ ಬೇಕಾದರೆ 5 ಸಾವಿರ ರೂಪಾಯಿಯವರೆಗೆ ಸ್ಟ್ಯಾಂಪ್ ಡ್ಯೂಟಿ ಎಕ್ಸಂಪ್ಷನ್ ಇದೆ. ಈ ಬಗ್ಗೆ ಕೆಲವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಹೇಗೆಂದರೆ ಯಾರಾ ದರೂ ಪ್ರಾಪರ್ಟಿಯನ್ನು ಕೊಳ್ಳಬೇಕಾಗಲಿ ಅಥವಾ ಅವರಿಂದ ಹೆಚ್ಚು ಸಾಲವನ್ನು ತೆಗೆದುಕೊಳ್ಳಬೇಕಾಗಿ ಬಂದರೆ ಮೊದಲು 5 ಸಾವಿರ ರೂಪಾಯಿ ತೆಗೆದುಕೊಳ್ಳು ತ್ತಾರೆ. ನಂತರ ಒಂದು ತಿಂಗಳು ಬಿಟ್ಟು ಇನ್ನು 5 ಸಾವಿರ ರೂಪಾಯಿ ತೆಗೆದು ಕೊಳ್ಳುತ್ತಾರೆ ಇದರಿಂದ ಸರ್ಕಾರಕ್ಕೆ ಬರುವ ವರಮಾನಕ್ಕೆ ಕಣ್ಣಿರಚುತ್ತಾರೆ.

ಆದುದರಿಂದ ಇವರಿಗೆ ಕೊಡತಕ್ಕಂಥ ಸ್ಟ್ಯಾಂಪ್ ಎಕ್ಸೆಮ್‌ಷನ್ ಅನ್ನು ತೆಗೆದು ಹಾಕಿದರೆ ನಿಮ್ಮ ಕಾರ್ಪೋರೇಷನ್‌ಗೂ ಒಂದು ಷೇರು ಬರುವುದಲ್ಲದೆ ಸರ್ಕಾರಕ್ಕೂ ಒಂದು ಷೇರು ಬರುತ್ತದೆ. ಇದರಿಂದ ಸರ್ಕಾರಕ್ಕೆ ಅನುಕೂಲ ವಾಗುತ್ತದೆ. ಈ ರೀತಿಯಾಗಿ ಬೇಕಾದಷ್ಟು ಇದರಲ್ಲಿ ಅವ್ಯವಹಾರ ನಡೆಯುತ್ತಾ ಇರುವುದರಿಂದ ಮನೆಗಳು ಆರ್ಥಂಬರ್ಥ ವ್ಯಾಲ್ಯೂಯಷನ್ ಬೆಲೆಗೆ ಮಾರಾಟ ವಾಗುತ್ತಾ ಇದೆ. ಆದುದರಿಂದ ಈ ಬಗ್ಗೆ ಹಣ ಸೋರಿ ಹೋಗದೆ ಇದ್ದ ಹಾಗೆ ನೋಡಿಕೊಂಡರೆ ಇದರಿಂದಲೂ ಸರ್ಕಾರಕ್ಕೆ ಹೆಚ್ಚು ವರಮಾನ ಬರುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನೊಂದು ಪ್ರಾಮುಖ್ಯವಾದ ವಿಚಾರ ಏನೆಂದರೆ ಈಗ ಕೆಲವರು ದಿಢೀರ್ ದಿಢೀರ್ ಆಗಿ ಸಾಹುಕಾರರಾಗಿದ್ದಾರೆ ಆದುದರಿಂದ ಈ ಬಗ್ಗೆ ನಾನು ಹೇಳುವುದು ಇಷ್ಟೆ. 1947ರಿಂದ 75 ರವರೆಗೂ ಯಾರು ಯಾರು ಸಾಹುಕಾರರಾಗಿ ದ್ದಾರೆ ಇಲ್ಲಿಯವರೇ ಆಗಲಿ ಕೇಂದ್ರದವರೇ ಆಗಲಿ ಅಂಥಾವರಿಗೆ ಆಸ್ತಿ ಹೇಗೆ ಬಂತು ಅದನ್ನು ಲೆಕ್ಕಚಾರ ಹಾಕಿದರೆ ಅವರಿಂದಲೂ ಬೇಕಾದಷ್ಟು ವಸೂಲ್ಮಾಡು ವುದಕ್ಕೆ ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಬೆಂಗಳೂರಿನಲ್ಲೇ ಹುಟ್ಟಿದವರು ಎಷ್ಟೋ ಜನ ಮೊದಲಿದ್ದಹಾಗೆಯೇ ಇದ್ದಾರೆ. ಆದರೆ ಗೌರಿಬಿದನೂರಿನಿಂದ ಬಂದವರು, ಮಲಬಾರ್‌ನಿಂದ ಬಂದವರು ಇನ್ನೂ ಇತರ ರಾಜ್ಯಗಳಿಂದ ಬಂದವರು ದಿಢೀರ್ ಸಾಹುಕಾರರಾಗುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಏತಕ್ಕೆಂದರೆ ಅದರಲ್ಲಿ ಅನೇಕ ಜನ ನ್ಯಾಯ ರೀತಿಯಲ್ಲಿ ಸಂಪಾದನೆ ಮಾಡುತ್ತಾ ಇಲ್ಲ. ಆದುದರಿಂದ ಅವರ ಸಂಪಾದನೆಯನ್ನು, ಯಾರು ಯಾರು ಎಷ್ಟು ಆಸ್ತಿ ಮಾಡಿ ಕೊಂಡಿದ್ದಾರೆ ಅನ್ನುವುದನ್ನು ಲೆಕ್ಕಾಚಾರ ಹಾಕಿದರೆ ಅದರಿಂದ ಬೇಕಾದಷ್ಟು ವರಮಾನ ಬರುತ್ತದೆ.

ಇನ್ನೊಂದು ವಿಷಯ ಹೇಳಬೇಕಾದರೆ ಪೆಪ್ಪರ್ ಮೇಲೆ ಸೇಲ್ಸ್ ಹಾಕಿದರೆ ಅದರಿಂದ ಅಷ್ಟು ಜಾಸ್ತಿ ಬರುವುದಿಲ್ಲ, ಮೆಣಸು ಮೇಲೆ ಹಾಕಬೇಡಿ. ಮತ್ತು ಬಡವರ ಬಾದಾಮಿಯಾದ ಗೋಡಂಬಿ ಬೀಜದ ಮೇಲೆ ಹಾಕಬೇಡಿ. ಇನ್ನು ಅಡಿಕೆ ಬಗ್ಗೆ ಹೇಳುವುದಾದರೆ ಅದು ಸಣ್ಣ ಕೂಲಿಗಾರರಿಂದ ಹಿಡಿದು ಗೌರ್ನರ್‌ರ ವರೆಗೂ ಅಗಿಯುತ್ತಾ ಇರತಕ್ಕಂಥಾದ್ದು. ಅದರಿಂದ ಅಷ್ಟು ಹೆಚ್ಚು ಲಾಭ ಬರು ವುದಿಲ್ಲ. ಮತ್ತು ಫುಡ್ ಸ್ಟಫ್ ಮೇಲೆ ಹಾಕುವುದಕ್ಕೆ ಹೋಗಬೇಡಿ. ಈವಾಗ ಒಂದೊಂದಾಗಿ ಅವುಗಳಿಗೂ ಕೂಡ ಬೆಲೆ ಏರಿಸುತ್ತಾ ಇದ್ದೀರಿ. ಈಗ ತಾವು ಬಹಳ ಬುದ್ಧಿವಂತಿಕೆ ಮಾಡುತ್ತಿದ್ದೀರಿ ಅದು ಏನೆಂದರೆ ಸಿಂಗಲ್‌ಪಾಯಿಂಟ್ ಟ್ಯಾಕ್ಸ್ ಹಾಕುವುದು. ಆದರಲ್ಲಿ ಏನೂ ವರಮಾನ ಬರುವುದಿಲ್ಲ ಎಂದು ಹೇಳು ತ್ತೀರಿ. ಅದರಲ್ಲಿ ಟರ್ನ್‌ಓವರ್ ಇಲ್ಲ, ಅದರಲ್ಲಿರತಕ್ಕ ಅನೇಕ ಸಾಮಾನುಗಳಿಗೆ ಟರ್ನ್‌ಓವರೇ ಬರುವುದಿಲ್ಲ. ಬರೇ 4–5 ಜನರ ಮೇಲೆ ಆ ಟ್ಯಾಕ್ಸ್ ಬೀಳುತ್ತದೆ

(ಶ್ರೀ ಟಿ. ಆರ್. ಶಾಮಣ್ಣ)

ಅಂತ ಹೇಳಿ ಸಿಂಗ್‌ಲ್ ಪಾಯಿಂಟ್ ಟ್ಯಾಕ್ಸ್‌ನ್ನು ಬಹಳ ಬುದ್ಧಿವಂತಿಕೆಯಿಂದ ಹಾಕುತ್ತೀರಿ ಅದರಿಂದ 10 ಲಕ್ಷ ರೂಪಾಯಿ ಬರುತ್ತದೆ ಎಂದು ನಾನು ಹೇಳುತ್ತೇನೆ. ಬೇಕಾದರೆ ನಾನು ಲೆಕ್ಕ ಹಾಕಿಕೊಡುತ್ತೇನೆ.

SRI M. Y. GHORPADE :—I have myself stated that the financial implications of that is negligible and you need not dilate on that.

SRI T. R. SHAMANNA :—You have imposed single point levy on some of the articles which are not required for daily consumption. Our earnest prayer is to remove multipoint levy and make it single point on some of the food articles.

SRI M. Y. GHORPADE: If you can kindly point out half a dozen items on which we can levy single point instead of multi point, it would be easy for us. There is very great financial implication. Therefore, please let us know atleast half a dozen commodities on which we can levy single point and explain how to levy it.

ಶ್ರೀ ಟಿ, ಆರ್. ಶಾಮಣ್ಣ.—ದಿನ ನಿತ್ಯ ಬಳಕೆಯ ಸಾಮಗ್ರಿಗಳ ಮೇಲೆ ಸಿಂಗಲ್ ಪಾಯಿಂಟು ಟ್ಯಾಕ್ಸು ಎಂದು ಹಾಕಲು ಹೋದರೆ ಜನರಿಗೆ ತುಂಬಾ ಕಷ್ಟವಾಗುತ್ತದೆ ಸಾಧಾರಣವಾಗಿ ಹಳ್ಳಿಯ ಜನರ ಬಗ್ಗೆ ನಮಗೂ ಸಾಕಾದಷ್ಟು ಮಮತೆ ಇದೆ. ಆದರೆ ನಾನೂ ಕೂಡ ಮೊದಲು ಹಳ್ಳಿಯಲ್ಲಿದ್ದವನೇ ಈಗ ಪಟ್ಟಣಕ್ಕೆ ಬಂದಿದ್ದೇನೆ. ಹಾಗೇನೇ ಅನೇಕ ಜನರು ಹಳ್ಳಿಗಳಲ್ಲಿ ಜೀವನ ನಡೆಸಲಾರದೆ ಪಟ್ಟಣಗಳಲ್ಲಿ ಬಂದು ಸೇರಿರುವವರೇ ಹೆಚ್ಚಾಗಿರುತ್ತಾರೆ. ಆದುದರಿಂದ ಪಟ್ಟಣದಲ್ಲಿರುವವರಿಗೂ ಸಾಕಾದಷ್ಟು ಅನುಕೂಲತೆಗಳನ್ನು ಸರಕಾರದವರು ಮಾಡಿಕೊಡಬೇಕು. ಸಾಧಾರಣವಾಗಿ ಜನರೇನೋ ಹೊರಗಿನಿಂದ ಬಂದವರು ವಿಧಾನ ಸೌಧದ ಸುತ್ತ ಬಂದು ನೋಡಿ ಇದೇನು ಇಂದ್ರಲೋಕವಿದ್ದಂತೆ ಇದೆ ಎಂದು ಹೇಳುತ್ತಾರೆ. ಆದರೆ ಇಂದು ಪಟ್ಟಣಗಳಲ್ಲಿ ಬಂದಿರುವ ಅನೇಕ ಜನರು ಹಳ್ಳಿಗಳಿಂದ ಬಂದಿರುವವರು. ಇವರಿಗೂ ಇತರ ಸಾಮಾನ್ಯ ಜನರಂತೆ ನಗರಗಳಲ್ಲಿರಲು ತಕ್ಕ ಸೌಕರ್ಯಗಳನ್ನು ಮಾಡಿಕೊಡಬೇಕು. ಹಾಗೇ ಮಾಡದೆ ಹಾವನ್ನು ಹೊಡೆದು ಹದ್ದಿಗೆ ಹಾಕು ಎನ್ನುವಂತೆ ಇಲ್ಲಿ ಮಾಡಬಾರದು. ಎಲ್ಲ

ಜನಕ್ಕೂ ಅನುಕೂಲಗಳನ್ನು ಮಾಡಿಕೊಡಬೇಕಾದುದು ಅಗತ್ಯ. ಪಟ್ಟಣದಲ್ಲಿರುವವರೆಲ್ಲ ಶ್ರೀಮಂತರು ಎಂದು ಸರಕಾರ ಭಾವಿಸಬಾರದು. ಇಲ್ಲಿ ನಾನು ಹಾಜಿ ಮಸ್ತಾನ್ ನಂತೆ ಇರುವವರನ್ನು ಹಿಡಿಯಬೇಡಿ ಎಂದು ಹೇಳುತ್ತಿಲ್ಲ. ಹಾಗೇ ಕಳ್ಳ ಸಾಗಾಣಿಕೆ ಮಾಡುವವರನ್ನು ಹಿಡಿಯಬಾರದು ಎಂದು ನಾವು ಹೇಳುತ್ತಿಲ್ಲ. ತೆರಿಗೆ ಹಾಕಬಾರದು ಎಂದು ಹೇಳುತ್ತಿಲ್ಲ. ಎಷ್ಟು ಸಾಧ್ಯವೋ ಅಷ್ಟು ತೆರಿಗೆಯನ್ನು ಹಾಕಬೇಕು. ಇದರಲ್ಲಿ ಕೆಲವು ತೆರಿಗೆಗಳನ್ನು ಸೂಚನೆ ಮಾಡುವ ವಿಚಾರಗಳಿವೆ. ಇದರ ಬಿಲ್ಲುಗಳನ್ನು ಇಲ್ಲಿ ತಂದಾಗ ಇದರ ಬಗ್ಗೆ ಹೆಚ್ಚಾಗಿ ಮಾತನಾಡುತ್ತೇನೆ. ಕೊನೆಯದಾಗಿ ಎಕನಾಮಿಕ್ ಪೊಸಿಷನ್ ಸರಿಪಡಿಸಬೇಕು. ಈಗ ಏನಾಗಿದೆ ಎಂದರೆ ಪಾಪ್ಯುಲೇಷನ್ ಗ್ರೊತ್ ಕಡಿಮೆ ಮಾಡಿಕೊಳ್ಳಬೇಕೆಂದು ಹೇಳಿದಂತೆ ಪ್ರೊಡಕ್ಷನ್ ಅದಕ್ಕೆ ತಕ್ಕಂತೆ ಹೆಚ್ಚು ಮಾಡಲಾಗಲಿಲ್ಲ. ಎಲ್ಲಿಯವರೆಗೆ ಪಾಪ್ಯುಲೇಷನ್ ಗ್ರೊತನ್ನು ಹಾಗೂ ಪ್ರೊಡಕ್ಷನ್‌ನನ್ನು ಸರಿದೂಗಿಸಲಾಗುವುದಿಲ್ಲವೋ ಅಲ್ಲಿಯವರೆಗೆ ಆರ್ಥಿಕ ಇಂಬ್ಯಾಲೆನ್ಸ್ ಇದ್ದೇ ಇರುತ್ತದೆ. ಇಂದು ಸರಕಾರವೇನೋ ಕುಟುಂಬ ಯೋಜನೆಗಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಖರ್ಚು ಮಾಡಿದರೂ ಇದರಿಂದ ಹೆಚ್ಚು ಪ್ರಯೋಜನ ಪಡೆಯುತ್ತಿರುವವರು ಬರೀ ಶ್ರೀಮಂತರೇ ವಿನಾ ತಿಳುವಳಿಕೆ ಇಲ್ಲದ ಬಡ ಜನರು ಇದರಿಂದ ಪ್ರಯೋಜನ ಪಡೆಯಲಾಗುತ್ತಿಲ್ಲ. ಇದಕ್ಕೆ ಕಾರಣ ಅವರಲ್ಲಿ ಇನ್ನೂ ಹೆಚ್ಚು ಮಕ್ಕಳಾದರೆ ಅವರೂ ಕೂಡ ದುಡಿಯಲು ಸಹಾಯವಾಗುತ್ತದೆ ಎನ್ನುವ ಒಂದು ಭಾವನೆ ಬಂದಿದೆ. ಇದಕ್ಕಾಗಿ ಸರಕಾರ ಸರಿಯಾದ ತಿಳುವಳಿಕೆ ಕೊಟ್ಟು ಇದರ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ಮಾಡಬೇಕು. ಅಗ್ರಿಕಲ್‌ಚರು ಪ್ರೊಡಕ್ಷನ್ ನೋಡಿದರೆ ರೈತರಿಗೆ ಸರಿಯಾದ ಸಹಾಯ ಸೌಕರ್ಯಗಳು ದೊರಕುತ್ತಿಲ್ಲ. ಇದರಿಂದಾಗಿ ಅವರು ಮುಖ್ಯ ಆಹಾರ ಪದಾರ್ಥಗಳಾದ ಅಕ್ಕಿ ರಾಗಿ, ಜೋಳ ಇತ್ಯಾದಿ ದವಸಗಳನ್ನು ಹೆಚ್ಚು ಬೆಳೆಯದೇ ಬರೀ ಕಮರ್ಷಿಯಲ್ ಕ್ರಾಪ್ಸ್ ಎಂದರೆ ದ್ರಾಕ್ಷೆ, ರೇಷ್ಮೆ ಹಾಗೂ ತೆಂಗು ಇತ್ಯಾದಿ ಬೆಳೆಗಳನ್ನು ಹೆಚ್ಚು ಮಾಡುತ್ತಿದ್ದಾರೆ. ಇದರಿಂದ ಉತ್ಪಾದನೆ ಕೂಡ ಕಡಿಮೆಯಾಗುತ್ತ ಬರುತ್ತಿದೆ. ಇದಕ್ಕಾಗಿ ನಾನು ಸಲಹೆ ಮಾಡುವುದು ರೈತರಿಗೆ ಹೆಚ್ಚು ಧವಸ ಬೆಳೆಯಲು ಸಾಲ ರೂಪದಲ್ಲಿ ಇಲ್ಲವೇ ಸಬ್‌ಸಿಡಿ ಕೊಟ್ಟು ಸಹಾಯ ಮಾಡಿದರೆ ಹೆಚ್ಚು ಬೆಳೆಯಲು ಅನುಕೂಲವಾಗುತ್ತದೆ. ಇದನ್ನು ಮಾಡಬೇಕಾದ ಅಗತ್ಯ ಹೆಚ್ಚಾಗಿದೆ. ಈಗ ಸರಕಾರ ಅನುಸರಿಸುತ್ತಿರುವ ನೀತಿ ನೋಡಿದರೆ ಪ್ರೊಡಕ್ಷನ್ ಹೆಚ್ಚು ಮಾಡಲು ಇದರಿಂದ ಸಹಾಯವಾಗುವುದಿಲ್ಲ.

ಸರಕಾರದ ವಿಳಂಬ ನೀತಿಯಿಂದ ಯಾವ ಕೆಲಸಗಳೂ ಸರಿಯಾಗಿ ಮಾಡಲಾಗುತ್ತಿಲ್ಲ. ಸರಕಾರದವರೇನೋ ಭೂಸುಧಾರಣೆಯನ್ನು ಜಾರಿಗೆ ತಂದರು. ಇದನ್ನು 1961ರಲ್ಲೇ ಜಾರಿಗೆ ಕೊಟ್ಟಿದ್ದರೆ ಇದರಿಂದ ಬಹಳ ಅನುಕೂಲವಾಗುತ್ತಿತ್ತು. ಆದರೆ 61ರಿಂದ 75ರವರೆಗೆ ಇದನ್ನು ಜಾರಿಗೆ ತರದೇ

(ಶ್ರೀ ಟಿ. ಆರ್. ಶಾಮಣ್ಣ)

ವಿಳಂಬ ಮಾಡಲಾಯಿತು. ಮತ್ತು ಇದರ ಕಾರ್ಯಗಳೆಲ್ಲಾ ಕುಂಠಿತವಾದವು ಮತ್ತು ಅನೇಕ ಅಕ್ರಮಗಳಿಗೆ ಇದು ಅವಕಾಶವಾಯಿತು. ಮತ್ತು ಭೂ ಸುಧಾರಣೆಯನ್ನು ಜಾರಿಗೆ ತಂದಾಗ ಇದರಲ್ಲಿ ಸಣ್ಣ ಹಿಡುವಳಿಗಾರರಿಗೆ ಪರಿಹಾರ ಕೊಡಲು ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿಲ್ಲ. ಇದರ ಬಗ್ಗೆ ಶ್ರೀ ದೇವೇಗೌಡರು ಹೇಳಿದಂತೆ ಯಾವ ರೀತಿಯಾಗಿ ಇವರಿಗೆ ಪರಿಹಾರ ಒದಗಿಸುತ್ತೀರಿ ಮತ್ತು ಸಣ್ಣ ಹಿಡುವಳಿದಾರರುಗಳಿಗೆ ಒಂದೇ ಗಂಟಿನಲ್ಲಿ ಪರಿಹಾರ ಕೊಟ್ಟರೆ ಅವರು ಜೀವನ ಮಾಡಲು ಅನುಕೂಲವಾಗುತ್ತದೆ. ಆ ರೀತಿಯಾದ ಸಹಾಯ ಮಾಡಲು ಇಲ್ಲಿ ಹಣ ಒದಗಿಸಿಲ್ಲ. ವಿಶೇಷವಾಗಿ ಭೂಮಿ ಕಳೆದುಕೊಳ್ಳುವ ನಿರ್ಗತಿಕರಿಗೆ ರಿಲೀಫ್ ಕೊಡಲು ಇದರಲ್ಲಿ ಹಣ ಒದಗಿಸಿಲ್ಲ ರೈತರು ಏನಾದರೂ ಉಳಲಿ ಬೇಡ ಎನ್ನುವುದಿಲ್ಲ. ಆದರೆ ಭೂಮಿ ಕಳೆದುಕೊಂಡು ಬೀದಿ ಭಿಕಾರಿಗಳಾಗುವವರಿಗೆ ಸಾಕಾದಷ್ಟು ಸಹಾಯ ಒದಗಿಸಿಕೊಡಬೇಕು. ಭೂಸುಧಾರಣೆ ತಂದು ಸುಮಾರು ಒಂದು ವರ್ಷವಾದರೂ ಕೂಡ ರೈತರು ಅವರು ಕೊಡಬೇಕಾದ ಗುತ್ತಿಗೆ ಕೊಡದೆ ತೊಂದರೆ ಮಾಡುತ್ತಿದ್ದಾರೆ. ಇದರ ಕಡೆಗೆ ಸರಕಾರ ಲಕ್ಷ ಕೊಡಬೇಕು ಮತ್ತು ಇದರಲ್ಲಿ ಆಗುತ್ತಿರುವ ಅಕ್ರಮಗಳನ್ನು ತಪ್ಪಿಸಿ ಎಲ್ಲರಿಗೂ ಅನುಕೂಲವಾಗುವ ಕ್ರಮಗಳನ್ನು ಕೂಡಲೇ ಜಾರಿಗೆ ತರಬೇಕಾದ್ದು ಅವಶ್ಯಕ. ಇದಕ್ಕೆಲ್ಲಾ ಕಾರಣ ಸರಕಾರ ನಿಧಾನವಾಗಿ ತನ್ನ ಕಾರ್ಯವನ್ನು ಮಾಡುವುದರಿಂದಾಗುತ್ತಿದೆ. ಉದಾಹರಣೆಯಾಗಿ ಹೇಳಬೇಕಾದರೆ ಮೊದಲು ನಮ್ಮ ನಗರಕ್ಕೆ ಕಾವೇರಿ ನೀರು ಯೋಜನೆ ತರುವಾಗ ಇದರ ಅಂದಾಜು ಸುಮಾರು 36 ಕೋಟಿಗೆ ಬಂದಿತ್ತು. ಇದನ್ನು ನಿಧಾನ ಮಾಡಿದುದರಿಂದ ಬೆಲೆಗಳು ಏರಿ ಇದಕ್ಕಾಗಿ ಈಗ ಇದರ ವೆಚ್ಚ ಒಂದಕ್ಕೆರಡರಷ್ಟು ಹೆಚ್ಚಾಗಿದೆ. ಮೊದಲು ಬೇಗ ಮಾಡಿದ್ದರೆ 30 ಮಿಲಯನ್ ನೀರನ್ನು ಸುಮಾರು 36 ಕೋಟಿಯ ಖರ್ಚಿನಲ್ಲೇ ಮಾಡಬಹುದಾಗಿತ್ತು. ಈಚೆಗೆ ಬೆಲೆಗಳು ಏರುತ್ತ ಬಂದುದರಿಂದ ಇದರ ಅಂದಾಜುಗಳು ಹೆಚ್ಚಾಗುತ್ತ ಬಂದು ಒಂದಕ್ಕೆರಡರಷ್ಟು ಖರ್ಚು ಮಾಡಬೇಕಾಗಿ ಬಂದಿದೆ. ಯಾವ ಯೋಜನೆಗಳನ್ನೇ ಸರಕಾರ ಮಾಡಲಿ ಅದನ್ನು ಆದಷ್ಟು ಬೇಗ ಕಾರ್ಯಗತವಾಗುವಂತೆ ಮಾಡಬೇಕು. ಇದರಂತೆ ಇರಿಗೇಷನ್ ಹಾಗೂ ಪವರು ಪ್ರಾಜಕ್ಟುಗಳ ಕೆಲಸಗಳೂ ನಿಧಾನ ವಾಗುತ್ತಿವೆ. ಇದಕ್ಕೆ ಹಣವನ್ನು ಕೇಂದ್ರದಿಂದಲಾದರೂ ಪಡೆಯಬಹುದು ಇಲ್ಲವೆ ಎಲ್. ಐ. ಸಿ. ಯಿಂದ ಪಡೆಯಬಹುದು ಇಲ್ಲವೇ ಡಿಬೆಂಚರು ಲೋನ್ ಎಂದು ಎತ್ತಬಹುದು. ಹೇಗಾದರೂ ಮಾಡಿ ಹಣ ಕೂಡಿಸಿಕೊಂಡು ಬೇಗನೆ ಕಾರ್ಯಗತವಾಗುವಂತೆ ಮಾಡಿದರೆ ಸರಕಾರಕ್ಕೆ ಹೆಚ್ಚು ಖರ್ಚು ಬರುವುದು ತಪ್ಪುತ್ತದೆ. ನಿಧಾನವಾದ ನೀತಿಯನ್ನು ಇದರಲ್ಲಿ ಅನುಸರಿಸಬಾರದು. ನಿಧಾನ ಮಾಡಿದರೆ ಇದರಿಂದ ಪ್ರತಿಫಲ ದೊರಕುವುದು ಕಡಿಮೆಯಾಗುತ್ತದೆ. ಇದಕ್ಕಾಗಿ ನ್ಯಾಷನಲ್ ಡಿಬೆಂಚರು ಲೋನು ಎಂದು ಕೇಳಿದರೆ ಜನ ಕೂಡ ಮುಂದೆ ಬಂದು

ಇದನ್ನು ಕೊಂಡು ಸಹಾಯ ಮಾಡಬಹುದು. ಯಾವ ಯೋಜನೆಯನ್ನೇ ಮಾಡಲಿ ಅದನ್ನು ಬೇಗ ಆಗುವ ಹಾಗೆ ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಇನ್ನು ಮೆಡಿಕಲ್ ಬಾಬಿನಲ್ಲಿ ಸುಮಾರು 29 ಕೋಟಿಯಷ್ಟು ಹಣವನ್ನು ಖರ್ಚು ಮಾಡಿದರೂ ಯಾವ ಆಸ್ಪತ್ರೆಗಳಿಗೆ ಹೋದರೂ ಔಷಧಿಗಳಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ಕಾರಣ ನನಗೆ ತಿಳಿದಂತೆ ಹಿಂದೆ ಯಾವುದೋ ಕಾಲದಲ್ಲಿ ಒಂದು ಅಂದಾಜು ಮಾಡಿದಂತೆ ಔಷಧಿಗಳನ್ನು ಒದಗಿಸುತ್ತಿದ್ದಾರೆ. ಹಿಂದೆ ಇದ್ದ ರೇಟುಗಳಿಗೂ ಇಂದು ಇರುವ ರೇಟುಗಳಿಗೂ ಬಹಳ ವ್ಯತ್ಯಾಸಗಳು ಆಗಿವೆ. ಇದರಿಂದ ಹೆಚ್ಚು ಔಷಧಿಗಳನ್ನು ಆಸ್ಪತ್ರೆಗಳಿಗೆ ಒದಗಿಸಲು ಸಾಧ್ಯವಾಗುತ್ತಿಲ್ಲ. ಸರಕಾರ ಈಗಲಾದರೂ ಇದರ ಯೋಜನೆಗಳನ್ನು ಈಗಿನ ರೇಟುಗಳಂತೆ ಬದಲಾಯಿಸಿ ಎಲ್ಲ ಆಸ್ಪತ್ರೆಗಳಿಗೂ ಔಷಧಿಗಳು ಸಿಗುವಂತೆ ತಕ್ಕ ವ್ಯವಸ್ಥೆ ಮಾಡಬೇಕು ಮತ್ತು ಇಲ್ಲಿ ಬರುವ ರೋಗಿಗಳಿಗೂ ಸಹಾಯ ಮಾಡಬೇಕು. ಇದರ ಬಗ್ಗೆ ಇನ್ನೂ ಸರಕಾರ ಯೋಚನೆ ಮಾಡಿಲ್ಲ. ಇದಕ್ಕಾಗಿ ನಾನು ಸಲಹೆ ಮಾಡುವುದು ಇದರ ಬಗ್ಗೆ ನಮ್ಮ ಅರ್ಥ ಸಚಿವರು ಆರೋಗ್ಯ ಸಚಿವರೊಡನೆ ಸಮಾಲೋಚನೆ ಮಾಡಿ ಇದಕ್ಕೆ ಯಾವ ರೀತಿ ಯೋಜನೆ ಮಾಡಿ ಸಹಾಯ ಮಾಡಬಹುದು ಎನ್ನುವುದರ ಬಗ್ಗೆ ಬೇಗನೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಸಿಮೆಂಟು ಬಗ್ಗೆ ಹೇಳಿದರೆ ಸಿಮೆಂಟು ಈಗ ಒಂದು ಮೂಟೆಗೆ 21 ರೂಪಾಯಿ ಎಂದು ಇದೆ. ಇದರಲ್ಲಿ ಮೂರು ರೂಪಾಯಿಗಳನ್ನು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟಿಗೆ ಕೊಡಬೇಕು ಮತ್ತು ಕೂಲಿ ಒಂದು ಮೂಟೆಗೆ ಎಂಟಾಣೆ. ಹಿಂದೆ ಒಂದು ಮೂಟೆ ಸಿಮೆಂಟಿಗೆ 12 ಇಲ್ಲವೇ 13 ರೂಪಾಯಿ ಇದ್ದುದು ಇಂದು ನೂರಕ್ಕೆ ನೂರರಷ್ಟು ಬೆಲೆ ಹೆಚ್ಚಾಗಿದೆ. ಇದೇ ರೀತಿ ಟಿಂಬರು ಬೆಲೆ ಕೂಡ ಜಾಸ್ತಿಯಾಗಿದೆ. ಹಿಂದೆ ಒಂದು ಘನ ಅಡಿಗೆ ಎರಡುವರೆ ರೂಪಾಯಿ ಇತ್ತು. ಈಗ ಒಂದು ಘನ ಅಡಿಗೆ 75 ರೂಪಾಯಿಗಳಾಗಿದೆ. ಹಿಂದೆ ಕಂಟ್ರಾಕ್ಟು ಮಾಡುವಾಗ ಮೇಸನ್‌ಗೆ ಕೂಲಿ ಒಂದು ರೂಪಾಯಿ ಇತ್ತು. ಈಗ 15 ರೂಪಾಯಿ ಒಬ್ಬ ಮೇಸನ್‌ಗೆ ಕೊಡಬೇಕಾಗಿದೆ. ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ಒಂದಕ್ಕೆ ನಾಲ್ಕರಷ್ಟು ಹೆಚ್ಚಾಗಿದೆ. ಒಂದು ಚದರಕ್ಕೆ 2500 ರೂಪಾಯಿ ಇದ್ದುದು ಈಗ ಒಂದು ಚದುರಕ್ಕೆ ಐದು ಸಾವಿರ ರೂಪಾಯಿಗಳಾಗುತ್ತಿದೆ. ಇದರಿಂದ ಮನೆ ಕಟ್ಟುವವರಿಗೆ ಬಹಳ ತೊಂದರೆಯೊಗುತ್ತಿದೆ. ಇದಕ್ಕಾಗಿ ಸರಕಾರ ಯೋಚನೆ ಮಾಡಿ ಸುಲಭ ಬೆಲೆಯ ಮನೆಗಳನ್ನು ಯಾವ ರೀತಿ ಕಟ್ಟಬಹುದು ಎನ್ನುವುದರ ಬಗ್ಗೆ ಒಂದು ಪ್ಲಾನ್ ಹಾಕಿ ಅದಕ್ಕೆ ತಕ್ಕ ಒಂದು ಸ್ಕೀಂ ಮಾಡಿ ಜನರಿಗೆ ಸಹಾಯ ಮಾಡಬೇಕು. ಇದರಲ್ಲಿ ಎಲ್ಲ ವರ್ಗದ ಜನರಿಗೂ

(ಶ್ರೀ ಟಿ. ಆರ್. ಶಾಮಣ್ಣ)

ಅನುಕೂಲವಾಗುವಂತೆ ಪ್ರಯತ್ನ ಮಾಡಬೇಕು. ಸುಲಭ ಬೆಲೆಯ ಮನೆಗಳನ್ನು ಮಾಡಬೇಕಾದ್ದು ಅತಿ ಮುಖ್ಯ. ಒಟ್ಟಿನಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ಸುವ್ಯವಸ್ಥಿತ ರೀತಿಯಲ್ಲಿ ಸರಿದೂಗಿಸಿಕೊಂಡು ಜನರು ತಮಗೆ ಬರತಕ್ಕಂಥ ವರಮಾನದಲ್ಲಿ ಆಹಾರ ಬಟ್ಟೆ ಹಾಗೂ ವಸತಿಗೆ ಅನುಕೂಲವಾಗುವ ರೀತಿಯಲ್ಲಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಒಂದು ಹೊತ್ತು ಊಟಕ್ಕೆ ಹೊಟ್ಟೆಗೆ ಹಾಗೂ ವಾಸಮಾಡಲು ಅನುಕೂಲಗಳನ್ನು ಒದಗಿಸದೇ ಇದ್ದರೆ ಅಂತಹ ಸರಕಾರಕ್ಕೆ ಒಳ್ಳೆಯ ಸರಕಾರ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಸರಕಾರದವರಿಗೆ ಏನಾದರೂ ಬಡವರ ಬಗ್ಗೆ ಅನುಕಂಪ ಇದ್ದಪಕ್ಷದಲ್ಲಿ ಸರಿಯಾದ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MR. DEPUTY SPEAKER :—The House will now adjourn to meet at 1 P. M. tomorrow.

*The House adjourned at Six of the Clock to meet again at One of the Clock on Tuesday the 25th February 1975.*

WD 025—GBPC—550=31-5-1975